
ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಮುಂಬೈನಲ್ಲಿ ನಡೆದ ‘ಗದರ್–2’ ಸಿನಿಮಾದ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಸನ್ನಿ ಡಿಯೋಲ್ ಮತ್ತು ನಟಿ ಅಮಿಷಾ ಪಟೇಲ್ ಪಾಲ್ಗೊಂಡಿದ್ದರು



ಎರಡೂ ನೌಕಾವಾಹಕಗಳಿಂದ ಜಂಟಿ ಅಭ್ಯಾಸ ಕಾರ್ಯಾಚರಣೆ, 35 ಯುದ್ಧ ವಿಮಾನ ಬಳಕೆ

ನೌಕಾಪಡೆಯಿಂದ ಯಶಸ್ವಿ ತಾಲೀಮು



ಐಎನ್‌ಎಸ್ ವಿಕ್ರಮಾದಿತ್ಯ ಮತ್ತು ಐಎನ್‌ಎಸ್ ವಿಕ್ರಾಂತ್ ನೌಕೆಗಳ ಸಂಚಾರ –ಟ್ವಿಟರ್ ಚಿತ್ರ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಕಾರವಾರ: ಗಡಿಯಲ್ಲಿ ಚೀನಾ ಜೊತೆಗಿನ ಉದ್ವಿಗ್ನ ಸ್ಥಿತಿಯ ನಡುವೆಯೇ ಭಾರತೀಯ ನೌಕಾಪಡೆಯು ಇದೇ ಮೊದಲ ಬಾರಿಗೆ ತನ್ನ ವ್ಯಾಪ್ತಿಯ ಹಿಂದೂ ಮಹಾಸಾಗರದಲ್ಲಿ ಯುದ್ಧವಿಮಾನಗಳ ನೌಕಾವಾಹಕಗಳಾದ 'ಐಎನ್‌ಎಸ್ ವಿಕ್ರಮಾದಿತ್ಯ' ಮತ್ತು 'ಐಎನ್‌ಎಸ್ ವಿಕ್ರಾಂತ್' ಒಳಗೊಂಡಂತೆ ಪೂರ್ಣಪ್ರಮಾಣದ ಅಭ್ಯಾಸ ನಡೆಸಿದ್ದು, ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದೆ.

ಮಿಗ್–29ಕೆ ಯುದ್ಧ ವಿಮಾನಗಳು, ಹೊಸದಾಗಿ ವಾಯುಪಡೆಗೆ ಸೇರಿರುವ ಎಂಎಚ್60ಆರ್, ಈಗಾಗಲೇ ಬಳಕೆಯಲ್ಲಿರುವ ಕಾಮೊವ್, ಸೀ ಕಿಂಗ್, ಚೇತಕ್, ದೇಶೀಯವಾಗಿ ತಯಾರಿಸಲಾದ ಹಗುರ ಯುದ್ಧವಿಮಾನ ಒಳಗೊಂಡಂತೆ ಸುಮಾರು 35 ಯುದ್ಧವಿಮಾನಗಳನ್ನು ಹೊತ್ತ ಎರಡೂ ನೌಕಾವಾಹಕಗಳು ಸಮುದ್ರದಲ್ಲಿ ಸಂಚರಿಸಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದವು. ಐಎನ್‌ಎಸ್ ವಿಕ್ರಮಾದಿತ್ಯ ಮತ್ತು ಐಎನ್‌ಎಸ್ ವಿಕ್ರಾಂತ್ ಈ ತಾಲೀಮಿನ ಕೇಂದ್ರ ಬಿಂದುಗಳಾಗಿದ್ದವು. ಸಮುದ್ರದಲ್ಲಿ ತೇಲುವ ಯುದ್ಧನೆಲೆಯಾಗಿ ಯುದ್ಧ ವಿಮಾನಗಳು ಆಗಸಕ್ಕೆ ಚಿಮ್ಮಲು ವೇದಿಕೆಯಾದವು.

'ಈ ಎರಡೂ ಯುದ್ಧವಿಮಾನಗಳ ವಾಹಕಗಳನ್ನು ಸಮುದ್ರದಲ್ಲಿ ಯಾವುದೇ ಭಾಗದಲ್ಲಿ ನಿಯೋಜಿಸಬಹುದು. ಬಾನಂಗಳದಲ್ಲಿ ಎದುರಾಗಬಹುದಾದ ಯಾವುದೇ ರೀತಿಯ ಅಪಾಯ ಎದುರಿಸಲು, ಸುಸ್ಥಿರ ವಾಯು ಸಂಚಾರ ನಿರ್ವಹಣೆಗೆ ಪೂರಕವಾಗಿರಲಿದ್ದು, ರಾಷ್ಟ್ರೀಯ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ಸಹಕಾರಿಯಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಇದರ ಜೊತೆಗೆ ಸಮುದ್ರ ವಲಯದಲ್ಲಿ ಸಂಘಟಿತ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ಭಾರತೀಯ ನೌಕಾಪಡೆಯು ಯಾವುದೇ ರೀತಿಯಲ್ಲಿ ನೆರವಾಗಲು ಸನ್ನದ್ಧವಾಗಿದೆ ಎಂಬ ಸಂದೇಶವನ್ನು ಭಾರತವು ತನ್ನ ಸ್ನೇಹಪರ ರಾಷ್ಟ್ರಗಳಿಗೆ ನೀಡಿದಂತಾಗಿದೆ ಎಂದರು.

ಆದರೆ, ಎರಡೂ ಯುದ್ಧವಿಮಾನಗಳ ವಾಹಕವು ಸೇರಿದಂತೆ ಯುದ್ಧವಿಮಾನಗಳ ತಾಲೀಮನ್ನು ಯಾವ ದಿನಾಂಕದಂದು ನಡೆಸಲಾಯಿತು ಎಂದು ನಿರ್ದಿಷ್ಟವಾಗಿ ನೌಕಾಪಡೆಯು ತಿಳಿಸಿಲ್ಲ.

'ಈ ತಾಲೀಮು ಭಾರತದ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡುವಲ್ಲಿ ನೌಕಾಪಡೆಯ ಬದ್ಧತೆಯನ್ನು ಒತ್ತಿಹೇಳುವ ಅಸಾಧಾರಣ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಈ ಸಮರಾಭ್ಯಾಸವು ಭಾರತೀಯ ನೌಕಾಪಡೆಯ ಕಡಲ ಭದ್ರತೆಯನ್ನು ಹೆಚ್ಚಿಸುವ ಮತ್ತು ಹಿಂದೂ ಮಹಾಸಾಗರ ಹಾಗೂ ಅದರಾಚೆಗೂ ತನ್ನ ಸಾಮರ್ಥ್ಯ ಪ್ರದರ್ಶನದ ದಿಸೆಯಲ್ಲಿ ಮಹತ್ವದ ಮೈಲಿಗಲ್ಲು ಆಗಿದೆ' ಎಂದು ಭಾರತೀಯ ನೌಕಾಪಡೆಯ ವಕ್ತಾರ, ಕಮಾಂಡರ್ ವಿವೇಕ್ ಮಧ್ವಲ್ ಹೇಳಿದ್ದಾರೆ.

ರಾಷ್ಟ್ರೀಯ ಹಿತಾಸಕ್ತಿಗಳ ರಕ್ಷಣೆ, ಪ್ರಾದೇಶಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಮತ್ತು ಜಲಪ್ರದೇಶದಲ್ಲಿ ಪಾಲುದಾರಿಕೆಯನ್ನು ಪೋಷಿಸುವುದಕ್ಕೆ ಭಾರತವು ಬದ್ಧವಾಗಿದೆ ಎಂಬುದನ್ನು ಈ ಕವಾಯತು ತೋರಿಸಿಕೊಟ್ಟಿದೆ ಎಂದು ಅವರು ಹೇಳಿದ್ದಾರೆ.

ದೇಶಿಯವಾಗಿ ನಿರ್ಮಿಸಲಾಗಿರುವ ಐಎನ್‌ಎಸ್ ವಿಕ್ರಾಂತ್ ಅನ್ನು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ನೌಕಾಪಡೆಗೆ ಸೇರ್ಪಡೆ ಮಾಡಿದ ಬಳಿಕ ಏಕಕಾಲಕ್ಕೆ ಎರಡರೂ ವಿಮಾನವಾಹಕ ನೌಕೆಗಳನ್ನು ಬಳಸಿ ನಡೆಸಿದ ಮೊದಲ ತಾಲೀಮು ಇದಾಗಿದೆ.

ಕಡಲ ಭದ್ರತೆಗೆ ಒತ್ತು

ನವದೆಹಲಿ: ಗಡಿಯಲ್ಲಿ ಭಾರತ ಮತ್ತು ಚೀನಾ ನಡುವೆ ಉದ್ವಿಗ್ನ ಸ್ಥಿತಿ ಇರುವಂತೆಯೇ ಭಾರತದ ನೌಕಾಪಡೆಯ ಈ ತಾಲೀಮು ಗಮನಸೆಳೆದಿದೆ. ಗಡಿಯಲ್ಲಿ ವಿವಾದಿತ ಪ್ರದೇಶದಲ್ಲಿ ಉಭಯ ರಾಷ್ಟ್ರಗಳು ಹೆಚ್ಚಿನ ಸೇನಾ ತುಕಡಿಗಳನ್ನು ನಿಯೋಜಿಸಿವೆ.

ಇಂತಹ ಸಂದರ್ಭದಲ್ಲಿ ನೌಕಾಪಡೆಯು ಕಡಲ ವಲಯದಲ್ಲಿ ಭದ್ರತೆಯನ್ನು ಒದಗಿಸುವ ಪ್ರಬಲ ರಾಷ್ಟ್ರವಾಗಿ ತನ್ನ ಸಾಮರ್ಥ್ಯ ಕಾಯ್ದುಕೊಳ್ಳಲು ಒತ್ತು ನೀಡಿದೆ. ಕಡಲ ಮಾರ್ಗದಲ್ಲಿನ ಆಯಕಟ್ಟಿನ ಸ್ಥಳಗಳಲ್ಲಿ ಕಣ್ಗಾವಲನ್ನು ಹೆಚ್ಚಿಸಿದೆ. ಈ ವಿಷಯದಲ್ಲಿ ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯ ನೌಕಾಪಡೆಯು ಪ್ರಬಲ ಸ್ಪರ್ಧೆಯನ್ನು ಒಡ್ಡಿದ್ದು, ತೇಲುವ ಯುದ್ಧನೆಲೆಗಳನ್ನು ನಿರ್ಮಾಣ ಮಾಡಲು ಹೆಚ್ಚಿನ ಒತ್ತು ನೀಡಿದೆ. ಚೀನಾ 2019ರ ಡಿಸೆಂಬರ್‌ನಲ್ಲಿ ದೇಶೀಯವಾಗಿ ನಿರ್ಮಿಸಿದ್ದ ಮೊದಲ ಯುದ್ಧವಿಮಾನ ವಾಹಕ 'ಶಾನ್‌ಡೊಂಗ್' ಕಾರ್ಯಾರಂಭಕ್ಕೆ ಚಾಲನೆ ನೀಡಿತು. 2017ರಲ್ಲಿ ನಿರ್ಮಾಣ ಆರಂಭಿಸಿದ್ದು, 2018–19ನೇ ಸಾಲಿನಲ್ಲಿ ಬಹುಹಂತದಲ್ಲಿ ಪ್ರಯೋಗ ನಡೆಸಿತ್ತು. ಚೀನಾದ ಎರಡನೇ ಯುದ್ಧವಿಮಾನಗಳ ವಾಹಕ 2024ರಲ್ಲಿ ಕಾರ್ಯಾರಂಭ ಮಾಡುವ ಸಾಧ್ಯತೆಯಿದ್ದು, ಇದು 85 ಸಾವಿರದಿಂದ 1 ಲಕ್ಷ ಟನ್ ತೂಕ ಸಾಗಣೆಯ ಸಾಮರ್ಥ್ಯ ಹೊಂದಿದೆ ಎನ್ನಲಾಗಿದೆ. ಮೂರನೇ ವಾಹಕ ಅಭಿವೃದ್ಧಿಗೂ ಚಾಲನೆ ನೀಡಿದೆ.

ಎಂಜಿನಿಯರಿಂಗ್ ಶುಲ್ಕ ಶೇ 10ರಷ್ಟು ಹೆಚ್ಚಳ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಎಂಜಿನಿಯರಿಂಗ್ ಕಾಲೇಜುಗಳು ವೃತ್ತಿಪರ ಕೋರ್ಸ್‌ಗಳಿಗೆ 2023-24ನೇ ಶೈಕ್ಷಣಿಕ ವರ್ಷದಲ್ಲಿ ಶೇ 10ರಷ್ಟು ಶುಲ್ಕ ಹೆಚ್ಚಳ ಮಾಡಲು ನಿರ್ಧರಿಸಿವೆ.

ಹಿಂದಿನ ಬಿಜೆಪಿ ಸರ್ಕಾರ ವಿಧಾನ ಸಭಾ ಚುನಾವಣೆ ಘೋಷಣೆಗೂ ಮುನ್ನವೇ ಶುಲ್ಕ ಹೆಚ್ಚಳದ ಕುರಿತು ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘದ (ಕುಪೆಕ) ಜತೆ ಸಮಾಲೋಚನೆ ನಡೆಸಿತ್ತು. ಸಂಧಾನದ ಮೂಲಕವೇ ಶುಲ್ಕ ನಿಗದಿ ಮಾಡುವ ಕುರಿತು ಉನ್ನತ ಶಿಕ್ಷಣ ಇಲಾಖೆ ಹಾಗೂ ಸಂಘ ಒಪ್ಪಂದವನ್ನೂ ಮಾಡಿಕೊಂಡಿತ್ತು.

'2021–22ನೇ ಸಾಲಿನಲ್ಲಿ ಎರಡು ವರ್ಷಗಳವರೆಗೆ ಶೇ 25ರಷ್ಟು ಹೆಚ್ಚಳಕ್ಕೆ ಅನುಮತಿ ಕೋರಿ ಸಂಘದಿಂದ ಸರ್ಕಾರ ಮುಂದಿನ ಮನವಿ ಸಲ್ಲಿಸಿದ್ದೆವು. ಆದರೆ, ಕೋವಿಡ್ ಕಾರಣದಿಂದ ಹೆಚ್ಚಳ ಮಾಡಿರಲಿಲ್ಲ. ಸರ್ಕಾರ 10ರಷ್ಟು ಶುಲ್ಕ ಹೆಚ್ಚಳಕ್ಕೆ ಅವಕಾಶ ನೀಡಿತ್ತು. ಹಾಗಾಗಿ, ಈ ವರ್ಷ ಶೇ 10ರಷ್ಟು ಶುಲ್ಕ ಹೆಚ್ಚಳ ಮಾಡುತ್ತಿದ್ದೇವೆ' ಎಂದು ಸಂಘದ ಪ್ರಮುಖರೊಬ್ಬರು ಮಾಹಿತಿ ನೀಡಿದರು.

ಶೇ 10ರಷ್ಟು ಶುಲ್ಕ ಹೆಚ್ಚಳವಾದರೆ ಈ ವರ್ಷ ಸಿಇಟಿ ಮೂಲಕ ಪ್ರವೇಶ ಪಡೆಯುವ ಎಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕ ₹ 71,896 ದಿಂದ ₹ 79, 085, ಕಾಮೆಡ್–ಕೆ ಮೂಲಕ ಪ್ರವೇಶ ಪಡೆಯುವ ಶುಲ್ಕ ₹1,58,118ರಿಂದ ₹1,73,929 ಹೆಚ್ಚಳವಾಗಲಿದೆ.

'ಹಿಂದಿನ ಸರ್ಕಾರ ಶುಲ್ಕ ಹೆಚ್ಚಳಕ್ಕೆ ಒಪ್ಪಿಗೆ ನೀಡಿರುವ ಕುರಿತು ಮಾಹಿತಿ ಪಡೆಯಲಾಗುವುದು. ಒಟ್ಟಾರೆ ಶುಲ್ಕ ಪರಿಗಣಿಸಲಾಗುವುದು. ಲೋಪಗಳಿದ್ದರೆ ಸರಿಪಡಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.


ಸುದ್ದಿ 2 ನಿಮಿಷ

ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ ನಾಳೆಯಿಂದ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳು ರಾಜ್ಯದ 458 ಕೇಂದ್ರಗಳಲ್ಲಿ ಜೂನ್ 12ರಿಂದ 19ರವರೆಗೆ ನಡೆಯಲಿವೆ.

2022–23ನೇ ಸಾಲಿನಲ್ಲಿ ಪರೀಕ್ಷೆ ಬರೆದಿದ್ದ 8,35,102 ವಿದ್ಯಾರ್ಥಿಗಳಲ್ಲಿ 1,34,483 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರು. ಪೂರಕ ಪರೀಕ್ಷೆಗೆ ಹೆಸರು ನೋಂದಾಯಿಸಲು ಮೇ 15ರವರೆಗೆ ಅವಕಾಶ ನೀಡಲಾಗಿತ್ತು. ರಾಜ್ಯದ 11,810 ಪ್ರೌಢಶಾಲೆಗಳ 1,11,689 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ.

ಮುಖ್ಯ ಪರೀಕ್ಷೆಯಂತೆಯೇ ಎಲ್ಲ ಕೇಂದ್ರಗಳಲ್ಲೂ ಸಿಟಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಲೂ ಇರುವ ಜೆರಾಕ್ಸ್ ಕೇಂದ್ರಗಳನ್ನು ಮುಚ್ಚಲು ಸೂಚಿಸಲಾಗಿದೆ. ಎಲ್ಲ ಕೇಂದ್ರಗಳಿಗೂ ಪೊಲೀಸರನ್ನು ನಿಯೋಜಿಸಲಾಗಿದೆ. ವಿದ್ಯಾರ್ಥಿಗಳು ಮೊಬೈಲ್, ಎಲೆಕ್ಟ್ರಾನಿಕ್ ವಾಚ್, ಬ್ಲೂಟೂತ್ ತೆಗೆದುಕೊಂಡು ಹೋಗುವುದಕ್ಕೆ ನಿರ್ಬಂಧ ವಿಧಿಸಲಾಗಿದೆ.



ಜೀರೊ ಟ್ರಾಫಿಕ್: ಮುಖ್ಯಮಂತ್ರಿ ಸಿದ್ದರಾಮಯ್ಯ ಗರಂ

ಮೈಸೂರು: ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ನಂತರ ಇದೇ ಮೊದಲ ಬಾರಿಗೆ ನಗರಕ್ಕೆ ಶನಿವಾರ ಭೇಟಿ ನೀಡಿದ್ದ ತಮಗೆ ಮಂಡಕಳ್ಳಿ ವಿಮಾನನಿಲ್ದಾಣದಿಂದ ಜಿಲ್ಲಾ ಪಂಚಾಯಿತಿವರೆಗೆ ಜೀರೊ ಟ್ರಾಫಿಕ್ ಶಿಷ್ಟಾಚಾರ ಅನುಸರಿಸಿದ್ದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅವರ ವಿರುದ್ಧ ಗರಂ ಆದರು.

'ನಿಮಗೆ ಗೊತ್ತಿದೆಯೇ, ಜೀರೊ ಟ್ರಾಫಿಕ್ ಶಿಷ್ಟಾಚಾರ ಬೇಡ ಎಂದು ಹೇಳಿದ್ದೆ. ಆದರೂ ಏಕೆ ಮಾಡಿದಿರಿ?' ಎಂದು ಜಿಲ್ಲಾ ಪಂಚಾಯಿತಿ ತಲುಪಿದ ನಂತರ ಕೇಳಿದರು.

ಅದಕ್ಕೆ ಪೊಲೀಸ್ ಆಯುಕ್ತರು ಪ್ರತಿಕ್ರಿಯಿಸದೆ ಸುಮ್ಮನಿದ್ದರು. 'ಮತ್ತೆ ಹಾಗೆ ಮಾಡಬೇಡಿ' ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದರು.

ರಾಜ್ಯ ಪ್ರವೇಶಿಸಿದ ನೈರುತ್ಯ ಮುಂಗಾರು

ಕಾರವಾರದಲ್ಲಿ ಸಿಡಿಲು ಬಡಿದು ವಿದ್ಯುತ್ ಉಪಕರಣ, ಭಟ್ಕಳದಲ್ಲಿ ಮೊಬೈಲ್ ಟವರ್‌ಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ಮುಂಗಾರು ಶನಿವಾರ ರಾಜ್ಯ ಪ್ರವೇಶಿಸಿದ್ದು, ವಿವಿಧ ಜಿಲ್ಲೆಗಳಲ್ಲಿ ಮಳೆ ಚುರುಕುಗೊಂಡಿದೆ.

ಕಾರವಾರ ಜಿಲ್ಲೆಯಲ್ಲಿ ಸಿಡಿಲಿನಿಂದಾಗಿ 50ಕ್ಕೂ ಹೆಚ್ಚು ಮನೆಗಳಲ್ಲಿನ ವಿದ್ಯುತ್ ಉಪಕರಣಗಳು ಹಾನಿಗೀಡಾಗಿವೆ.

ಕೆಲ ಜಿಲ್ಲೆಗಳಲ್ಲಿ ಮನೆಗಳಿಗೆ ಹಾನಿಯುಂಟಾಗಿದೆ.

(ಹುಬ್ಬಳ್ಳಿ ವರದಿ): ಕಾರವಾರದಲ್ಲಿ 50ಕ್ಕೂ ಹೆಚ್ಚು ಮನೆಗಳಲ್ಲಿ ಲಕ್ಷಾಂತರ ಮೌಲ್ಯದ ಎಲೆಕ್ಟ್ರಾನಿಕ್ ಉಪಕರಣಗಳು ಹಾಳಾಗಿವೆ. ಮೊಬೈಲ್ ಟವರ್‌ಗೂ ಹಾನಿಯಾದ ಕಾರಣ ಭಟ್ಕಳದ ವಿವಿಧೆಡೆ ದಿನವಿಡೀ ನೆಟ್‌ವರ್ಕ್ ವ್ಯತ್ಯಯ ಉಂಟಾಗಿತ್ತು. ಭಟ್ಕಳ ತಾಲ್ಲೂಕಿನ ಶಿರಾಲಿಯಲ್ಲಿ ಮನೆಯ ಗೋಡೆ ಹಾನಿಗೀಡಾಗಿದೆ. ಬೆಳಗಾವಿ ನಗರ, ಗದಗ ಬಾಗಲಕೋಟೆ, ಗದಗದ ಕೆಲವೆಡೆ ಮಳೆಯಾಗಿದೆ.

(ಕಲಬುರಗಿ ವರದಿ): ಬೀದರ್ ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಶನಿವಾರ ಸಂಜೆ ಬಿರುಗಾಳಿ ಸಹಿತ ಮಳೆಯಾಗಿದೆ. ಔರಾದ್ ತಾಲ್ಲೂಕಿನ ಕೌಠಾ (ಕೆ) ಗ್ರಾಮದಲ್ಲಿ ಬಿರುಗಾಳಿಗೆ ಮನೆಯ ತಗಡಿನ ಶೀಟುಗಳು ಹಾರಿ ಹೋಗಿವೆ. ಭಾಲ್ಕಿ, ಕಮಲನಗರ, ಕೊಪ್ಪಳ ಮತ್ತು ಯಾದಗಿರಿಯ ವಿವಿಧೆಡೆ ಮಳೆಯಾಗಿದೆ.

(ಮಂಗಳೂರು ವರದಿ): ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ, ಮಂಗಳೂರು ನಗರ ಹಾಗೂ ಸುತ್ತಲಿನ ಪ್ರದೇಶ, ಪುತ್ತೂರು, ವಿಟ್ಲದಲ್ಲಿ ಶನಿವಾರ ಉತ್ತಮ ಮಳೆ ಸುರಿಯಿತು. ಕಾವೂರಿನಲ್ಲಿ ಗಾಳಿಗೆ ಮನೆಯ ಮೇಲೆ ಮರ ಬಿದ್ದಿದ್ದರಿಂದ ಮೂವರು ಗಾಯಗೊಂಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆ ಹಾಗೂ ಬಂಟ್ವಾಳ ತಾಲ್ಲೂಕಿನ ವಿವಿಧೆಡೆ ಮಳೆಯಾಗಿದೆ.

(ಮಂಡ್ಯ ವರದಿ): ನಾಗಮಂಗಲ ಪಟ್ಟಣ ಮತ್ತು ಸುತ್ತಮುತ್ತಲಿನ ಹಲವು ಹಳ್ಳಿಗಳಲ್ಲಿ ಶನಿವಾರ ಒಂದು ಗಂಟೆ ಕಾಲ ಉತ್ತಮ ಮಳೆ ಸುರಿಯಿತು.

(ಚಿತ್ರದುರ್ಗ ವರದಿ): ಜಿಲ್ಲೆಯ ಧರ್ಮಪುರ ಹೋಬಳಿಯಲ್ಲಿ ಶುಕ್ರವಾರ ರಾತ್ರಿ ಬಿರುಗಾಳಿ ಸಹಿತ ಮಳೆಯಾಗಿದ್ದು, ಗುಡಿಸಲುಗಳ ಮೇಲೆ ಮರ ಬಿದ್ದಿದೆ. ಯಾವುದೇ ಪ್ರಾಣಹಾನಿ ಆಗಿಲ್ಲ. ಇಲ್ಲಿನ ಕೆರೆಯ ಪಕ್ಕದಲ್ಲಿದ್ದ ಮನೆಯ ಶೀಟ್‌ಗಳು ಗಾಳಿಗೆ ಹಾರಿ ಹೋಗಿವೆ. 6 ಗುಡಿಸಲುಗಳು ಸಂಪೂರ್ಣವಾಗಿ ಜಖಂ ಆಗಿವೆ.

(ಶಿವಮೊಗ್ಗ ವರದಿ): ಜಿಲ್ಲೆಯ ಸಾಗರ, ಹೊಸನಗರ, ತೀರ್ಥಹಳ್ಳಿ, ಶಿಕಾರಿಪುರ, ಕಾರ್ಗಲ್‌ನಲ್ಲಿ ಸಾಧಾರಣ ಮಳೆಯಾಗಿದೆ.



ಮಂಗಳೂರಿನನಲ್ಲಿ ಶನಿವಾರ ಸುರಿದ ಮಳೆಯಲ್ಲಿ ಜನರು ಕೊಡೆಗಳ ಆಸರೆಯಲ್ಲಿ ಸಾಗಿದರು ಪ್ರಜಾವಾಣಿ ಚಿತ್ರ

ಇಂದು ಮಳೆ ಸಾಧ್ಯತೆ: ಮುನ್ಸೂಚನೆ

ಬೆಂಗಳೂರು: ರಾಜ್ಯದ ಕರಾವಳಿಯ ಬಹುತೇಕ ಕಡೆ, ದಕ್ಷಿಣ ಒಳನಾಡಿನ ಕೆಲವು ಕಡೆ ಹಾಗೂ ಉತ್ತರ ಒಳನಾಡಿನ ಒಂದೆರಡು ಕಡೆ ಭಾನುವಾರವೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಕನ್ನಡ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ರಾಜ್ಯದಾದ್ಯಂತ ಒಂದೆರಡು ಕಡೆ ಬಿರುಗಾಳಿ ಸಹಿತ ಗುಡುಗು ಕಾಣಿಸಿಕೊಳ್ಳುವ ಸಂಭವವಿದ್ದು, ಗಾಳಿಯ ವೇಗವು ಕರಾವಳಿಯಲ್ಲಿ ಗಂಟೆಗೆ 40–50 ಕಿ.ಮೀ. ಮತ್ತು ಒಳನಾಡಿನಲ್ಲಿ ಗಂಟೆಗೆ 30–40 ಕಿ.ಮೀ. ತಲುಪುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಗುಡುಗು ಸಹಿತ ಮಳೆಯಾಗುವ ಸಂಭವವಿದೆ. ಕೆಲವೊಮ್ಮೆ ಬಲವಾದ ಬಿರುಗಾಳಿ ಬೀಸುವ ಸಾಧ್ಯತೆಯೂ ಇದೆ ಎಂದು ಹೇಳಿದೆ. ಕರಾವಳಿಯಲ್ಲಿ ಮುಂದಿನ ಐದು ದಿನಗಳು ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ.ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು ಹಾಗೂ ತುಮಕೂರು ಜಿಲ್ಲೆಗೆ ಇದೇ ಸೋಮವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಮೀನುಗಾರರಿಗೆ ಎಚ್ಚರಿಕೆ

ಮಂಗಳೂರು: ಚಂಡಮಾರುತದ ಪ್ರಭಾವದಿಂದ ಸಮುದ್ರ ಪ್ರಕ್ಷುಬ್ಧಗೊಂಡಿದ್ದು ದೈತ್ಯ ಅಲೆಗಳು ತೀರಕ್ಕೆ ಬಂದು ಅಪ್ಪಳಿಸುತ್ತಿವೆ. ಮೀನುಗಾರರು ಸಮುದ್ರಕ್ಕಿಳಿಯದಂತೆ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಜೂನ್ 12ರಿಂದ 15ರವರೆಗೆ ಕರಾವಳಿಯ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದೂ ಇಲಾಖೆ ಮುನ್ಸೂಚನೆ ನೀಡಲಾಗಿದೆ.

ಶಾಲಾ ಮಕ್ಕಳಿಗೆ ಕಳಪೆ ಸಮವಸ್ತ್ರ: ಎಂ.ಡಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಮಕ್ಕಳಿಗೆ ವಿದ್ಯಾ ವಿಕಾಸ್ ಯೋಜನೆಯಡಿ ಕಳಪೆ ಸಮವಸ್ತ್ರ ಪೂರೈಕೆ ಮಾಡಿರುವ ಆರೋಪದಡಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಸೇರಿದಂತೆ ಮೂವರು ಅಧಿಕಾರಿಗಳ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಮಲ್ಲೇಶ್ವರದಲ್ಲಿರುವ ಜವಳಿ ಆಯುಕ್ತರ ಸಹಾಯಕ ಬಿ. ಶ್ರೀಧರ್ ನಾಯಕ್ ಅವರು ಕಳಪೆ ಸಮವಸ್ತ್ರದ ಬಗ್ಗೆ ದೂರು ನೀಡಿದ್ದಾರೆ. ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಸ್. ಮುದ್ದಯ್ಯ, ತಾಂತ್ರಿಕ ವ್ಯವಸ್ಥಾಪಕ ಬಿ.ಜಿ. ಶ್ರೀಧರ್ ಹಾಗೂ ಬಿ. ಲಕ್ಷ್ಮಣಸ್ವಾಮಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಧಿಕಾರ ದುರುಪಯೋಗಪಡಿಸಿಕೊಂಡು ಸರ್ಕಾರವನ್ನು ವಂಚಿಸಿರುವ ಆರೋಪ ಅಧಿಕಾರಿಗಳ ಮೇಲಿದೆ. ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ಸೂಕ್ತ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುವುದು' ಎಂದು ತಿಳಿಸಿದರು.

2021–22ರಲ್ಲಿ ಅಕ್ರಮ: 'ರಾಜ್ಯದ ಸರ್ಕಾರಿ ಶಾಲೆಗಳ 1ನೇ ತರಗತಿಯಿಂದ 10ನೇ ತರಗತಿವರೆಗಿನ ಎಲ್ಲ ಮಕ್ಕಳಿಗೆ ಎರಡು ಜೊತೆ ಶಾಲಾ ಸಮವಸ್ತ್ರ ನೀಡಲು ಸಾರ್ವಜನಿಕ ಶಿಕ್ಷಣ ಇಲಾಖೆಯು 2021–22ನೇ ಸಾಲಿನಲ್ಲಿ ವಿದ್ಯಾ ವಿಕಾಸ್ ಯೋಜನೆಯಡಿ ಕಾರ್ಯಾದೇಶ ಹೊರಡಿಸಿತ್ತು' ಎಂದು ಪೊಲೀಸರು ಹೇಳಿದರು.

'ಕಾರ್ಯಾದೇಶ ಪಡೆದಿದ್ದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧಿಕಾರಿಗಳು, ಗುಣಮಟ್ಟದ ಸಮವಸ್ತ್ರ ಪೂರೈಸಿರಲಿಲ್ಲ. ಕಳಪೆ ಸಮವಸ್ತ್ರ ಪೂರೈಸಿದ್ದರು. ಇತ್ತೀಚೆಗೆ ನಡೆಸಿದ್ದ ಆಂತರಿಕ ತನಿಖೆಯಲ್ಲಿ ಕೃತ್ಯ ಪತ್ತೆಯಾಗಿದೆ. ವಿಸ್ತ್ರತ ವರದಿ ಸಮೇತ ಜವಳಿ ಆಯುಕ್ತರ ಸಹಾಯಕರು ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಮಾರುಕಟ್ಟೆ ದರ ಪಡೆಯದೇ ಶೆಡ್ ಬಾಡಿಗೆ: 'ಪೀಣ್ಯ 2ನೇ ಹಂತದಲ್ಲಿರುವ ಪ್ರಿಯದರ್ಶಿನಿ ಸಂಸ್ಕರಣಾ ಕೇಂದ್ರದ 2 ಎಕರೆ 34 ಗುಂಟೆ ಜಾಗದಲ್ಲಿ 7 ಕೈಗಾರಿಕೆ ಶೆಡ್‌ಗಳಿವೆ. ಮಾರುಕಟ್ಟೆ ದರಕ್ಕೆ ತಕ್ಕಂತೆ ಬಾಡಿಗೆ ದರ ನಿಗದಿ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ವರದಿ ಪಡೆಯದ ಅಧಿಕಾರಿಗಳು, ಕಡಿಮೆ ದರಕ್ಕೆ 22 ವರ್ಷ ಬಾಡಿಗೆ ನೀಡಲು ಟೆಂಡರ್ ಕರೆದಿದ್ದರು' ಎಂದು ಪೊಲೀಸರು ಹೇಳಿದರು.

'ಅಲ್ಪಾವಧಿ ಟೆಂಡರ್ ಅಕ್ರಮದ ಬಗ್ಗೆಯೂ ದೂರಿನಲ್ಲಿ ಉಲ್ಲೇಖಿಸಲಾಗಿದೆ. ಮೂವರು ಅಧಿಕಾರಿಗಳು, ವ್ಯವಸ್ಥಿತ ಸಂಚು ರೂಪಿಸಿ ಸರ್ಕಾರಕ್ಕೆ ವಂಚನೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ತಿಳಿಸಿದರು.

'ಶೇ 40ರಷ್ಟು ಕಮಿಷನ್ ಮಾಹಿತಿ'

'ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಶಾಲಾ ಮಕ್ಕಳ ಕಳಪೆ ಸಮವಸ್ತ್ರ ಪ್ರಕರಣದಲ್ಲಿ ಅಧಿಕಾರಿಗಳು ಶೇ 40ರಷ್ಟು ಕಮಿಷನ್ ಪಡೆದಿರುವ ಮಾಹಿತಿ ಇದೆ. ಅದೇ ಹಣ ಹಲವರಿಗೆ ಸಂದಾಯವಾಗಿರುವ ಅನುಮಾನವಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಳಪೆ ಸಮವಸ್ತ್ರದ ಬಗ್ಗೆ ಪುರಾವೆಗಳನ್ನು ಕಲೆ ಹಾಕಲಾಗುತ್ತಿದೆ. ಸಮವಸ್ತ್ರ ತಯಾರಿಸಿದ್ದು ಎಲ್ಲಿ? ಹಾಗೂ ಅದನ್ನು ಶಾಲೆಗಳಿಗೆ ತಲುಪಿಸಿದವರು ಯಾರು? ಎಂಬ ಬಗ್ಗೆಯೂ ತಿಳಿಯುತ್ತಿದ್ದೇವೆ. ಆರೋಪಿಗಳನ್ನು ವಿಚಾರಣೆ ನಡೆಸಿದ ಬಳಿಕ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದು ತಿಳಿಸಿವೆ.

ಹಿಂದೂಗಳೇನು ಕಡಿಮೆ ಸಮಾನರೇ; ಕೋಟ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಘ ಪರಿವಾರದವರಿಗೆ ನೀಡಿದ ಭೂಮಿ ವಾಪಸ್ ಪಡೆಯುತ್ತೇವೆ ಎನ್ನುವ ರಾಜ್ಯ ಸರ್ಕಾರದ ಧೋರಣೆ ಎಷ್ಟು ಸರಿ' ಎಂದು ಪ್ರಶ್ನಿಸಿರುವ ಬಿಜೆಪಿ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಹಿಂದೂಗಳು ಕಡಿಮೆ ಸಮಾನರೇ' ಎಂದು ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಹಿಂದೂ, ಮುಸ್ಲಿಮರು, ಕ್ರೈಸ್ತರು, ಪಾರ್ಸಿ, ಜೈನರನ್ನು ಸಮಾನವಾಗಿ ನೋಡುವುದಾಗಿ ಹೇಳುವ ಸರ್ಕಾರವು ತಾರತಮ್ಯ ಧೋರಣೆ ಹೊಂದಿರಬಾರದು' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ನಾನು ನಿಭಾಯಿಸಿದ್ದ ಇಲಾಖೆಯಿಂದಲೇ ಭ್ರಷ್ಟಾಚಾರ ಅಕ್ರಮಗಳ ಕುರಿತ ಸರ್ಕಾರ ತನಿಖೆ ಆರಂಭಿಸಲಿ' ಎಂದು ಸವಾಲು ಹಾಕಿದರು.

'ಬಿಜೆಪಿಯವರು ದಲಿತ ವಿರೋಧಿಗಳು' ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಪರಿಶಿಷ್ಟ ಜಾತಿಯವರಿಗೆ ಶೇ 15 ರಿಂದ ಶೇ 17, ಪರಿಶಿಷ್ಟ ಪಂಗಡಕ್ಕೆ ಶೇ 3 ರಿಂದ ಶೇ 7ಕ್ಕೆ ಮೀಸಲಾತಿ ಹೆಚ್ಚಿಸಿದ್ದು ಬಿಜೆಪಿ ಸರ್ಕಾರ. ಸಮಾಜದ ಕಟ್ಟಕಡೆಯ ಮನುಷ್ಯ ಮುಖ್ಯವಾಹಿನಿಗೆ ಬರಬೇಕು ಎಂಬ ಕಾರಣಕ್ಕಾಗಿ ಒಳ ಮೀಸಲಾತಿಯನ್ನೂ ಪಕ್ಷ ಪ್ರಕಟಿಸಿದೆ' ಎಂದರು.

ಲಿಂಗನಮಕ್ಕಿ: ವಿದ್ಯುತ್ ಉತ್ಪಾದನೆ ಕುಸಿವ ಆತಂಕ

ಕಾರ್ಗಲ್: ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಮಟ್ಟ ಇಳಿಕೆಯಾಗಿದ್ದು, ಮಳೆಯಾಗದಿದ್ದರೆ ಜಲವಿದ್ಯುತ್ ಉತ್ಪಾದನೆ ಕುಸಿಯುವ ಆತಂಕ ಎದುರಾಗಿದೆ. ಜಲಾಶಯದಲ್ಲಿ ಪ್ರಸ್ತುತ 1,744 ಅಡಿ ಮಟ್ಟಕ್ಕೆ ನೀರಿನ ಸಂಗ್ರಹ ಕುಸಿದಿದೆ. 156 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಈಗ ಕೇವಲ 14 ಟಿಎಂಸಿ ನೀರು ಇದೆ.

ಪೆನ್ ಸ್ಟಾಕ್ ಪೈಪ್‌ಗಳ ಮೂಲಕ ಜಲವಿದ್ಯುತ್‌ಗಾರಕ್ಕೆ ನೀರು ಪೂರೈಕೆಯಾಗುತ್ತಿದೆ. 1742 ಅಡಿ ಮಟ್ಟದಲ್ಲಿ ಈ ಪೈಪ್ ಅಳವಡಿಸಲಾಗಿದೆ. ಇನ್ನು 3 ಅಡಿ ನೀರು ಇಳಿಮುಖವಾದರೆ ವಿದ್ಯುತ್ ಉತ್ಪಾದನೆಗೆ ನೀರಿನ ಕೊರತೆ ಎದುರಾಗಲಿದೆ.

ರಾಜ್ಯದೆಲ್ಲೆಡೆ ಆರೋಗ್ಯ, ಪೌಷ್ಟಿಕ ಸಮೀಕ್ಷೆ ಪ್ರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪೌಷ್ಟಿಕತೆ, ರಕ್ತಹೀನತೆ ಸೇರಿ ವಿವಿಧ ಅನಾರೋಗ್ಯ ಸಮಸ್ಯೆ ಪತ್ತೆ ಹಚ್ಚಿ, ಸೂಕ್ತ ಪರಿಹಾರ ಒದಗಿಸಲು ಆರೋಗ್ಯ ಇಲಾಖೆ ಆರೋಗ್ಯ ಮತ್ತು ಪೌಷ್ಟಿಕ ಸಮೀಕ್ಷೆ ಆರಂಭಿಸಿದೆ.

ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರು ಇದೇ 30ರವರೆಗೆ ತಮ್ಮ ವ್ಯಾಪ್ತಿಯ ಕುಟುಂಬಗಳಿಗೆ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಲಿದ್ದಾರೆ.

ಮೊಬೈಲ್ ಆ್ಯಪ್ ಮೂಲಕ ಈ ಸಮೀಕ್ಷೆ ನಡೆಸಲಾಗುತ್ತದೆ. ಪ್ರಾಯೋಗಿಕವಾಗಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಈಗ ರಾಜ್ಯದಾದ್ಯಂತ ನಡೆಸಲಾಗುತ್ತಿದೆ ಎಂದು ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಸಮೀಕ್ಷೆಯಲ್ಲಿ ಮಕ್ಕಳ ಬೆಳವಣಿಗೆ ಮತ್ತು ಆರೋಗ್ಯದ ಸ್ಥಿತಿ, ಅಪೌಷ್ಟಿಕತೆ ಸಮಸ್ಯೆಯ ವಿವರ, ಗರ್ಭಿಣಿಯರಲ್ಲಿನ ರಕ್ತಹೀನತೆ, ರಕ್ತದೊತ್ತಡ–ಸಕ್ಕರೆ ಕಾಯಿಲೆ ಇರುವ ಗರ್ಭಿಣಿಯರು, ಕುಟುಂಬ ಕಲ್ಯಾಣ ವಿಧಾನಗಳ ಬಳಕೆ, ಆನುವಂಶಿಕ ಕಾಯಿಲೆಯಿಂದ ಬಳಲುತ್ತಿರುವವರ ವಿವರ ಹಾಗೂ ಮಾನಸಿಕ ಆರೋಗ್ಯದ ಮಾಹಿತಿ ಸಂಗ್ರಹಿಸಲಾಗುತ್ತದೆ ಎಂದು ಹೇಳಿದ್ದಾರೆ.

ಸಮೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿಯಿಂದ ಕುಟುಂಬಗಳ ಆರೋಗ್ಯ ಸ್ಥಿತಿ ಗುರುತಿಸಲಾಗುವುದು. ಸರ್ಕಾರ ಮಟ್ಟದಲ್ಲಿ ಯೋಜನೆಗಳನ್ನು ರೂಪಿಸಲು ಹಾಗೂ ಅನುಷ್ಠಾನಗೊಳಿಸಲು ಸಮೀಕ್ಷೆ ಸಹಕಾರಿಯಾಗಲಿದೆ. ಅಪೌಷ್ಟಿಕತೆ, ರಕ್ತಹೀನತೆ ಕಂಡು ಬಂದರೆ ಪೂರಕ ಆಹಾರ ನೀಡಲು ಈ ಸಮೀಕ್ಷೆ ನೆರವಾಗಲಿದೆ ಎಂದು ತಿಳಿಸಿದ್ದಾರೆ.

'ಮತ್ಸ್ಯಗಂಧ' ರೈಲಿಗೆ ನವಿಲು ಡಿಕ್ಕಿ





ಮತ್ಸ್ಯಗಂಧ ರೈಲಿಗೆ ಕುಂದಾಪುರ ತಾಲ್ಲೂಕಿನ ಇನ್ನಂಜೆ ಸಮೀಪ ನವಿಲು ಡಿಕ್ಕಿಯಾದ್ದರಿಂದ ಗಾಜು ಒಡೆದಿದೆ (ಎಡ ಚಿತ್ರ). ಮೃತಪಟ್ಟ ನವಿಲು

ಪ್ರಜಾವಾಣಿ ವಾರ್ತೆ

ಉಡುಪಿ: ಮಂಗಳೂರಿನಿಂದ ಮುಂಬೈಗೆ ಹೊರಟಿದ್ದ ಮತ್ಸ್ಯಗಂಧ ರೈಲಿಗೆ ಶನಿವಾರ ಕುಂದಾಪುರ ತಾಲ್ಲೂಕಿನ ಇನ್ನಂಜೆ ಸಮೀಪ ನವಿಲು ಡಿಕ್ಕಿಯಾದ ಪರಿಣಾಮ ರೈಲಿನ ಮುಂಭಾಗದ ಗಾಜು ಒಡೆದು 1 ತಾಸು ರೈಲು ಸಂಚಾರ ಸ್ಥಗಿತವಾಗಿತ್ತು.

ಎಂಜಿನ್ ಮುಂಭಾಗದ ಗಾಜು ಒಡೆದಿದ್ದರಿಂದ ಪ್ರಯಾಣಿಕರು ಕೆಲಕಾಲ ಗಾಬರಿಯಾಗಿದ್ದರು.

'ಗಾಜು ಒಡೆದಿದ್ದರಿಂದ ರಾತ್ರಿ ಹೊತ್ತು ಪ್ರಯಾಣಕ್ಕೆ ಸಮಸ್ಯೆಯಾಗಬಾರದು ಎಂಬ ಕಾರಣಕ್ಕೆ ನಿಜಾಮುದ್ದೀನ್–ಎರ್ನಾಕುಲಂ ರೈಲಿನ ಎಂಜಿನ್ ಬದಲಿಸಿಕೊಂಡು ಮತ್ಸ್ಯಗಂಧ ರೈಲು ಸಂಚಾರ ಮುಂದುವರಿಸಿತು' ಎಂದು ಕೊಂಕಣ್ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ಸುಧಾ ಕೃಷ್ಣಮೂರ್ತಿ ಮಾಹಿತಿ ನೀಡಿದರು.

ವೇಶ್ಯಾವಾಟಿಕೆ: 26 ಯುವತಿಯರ ರಕ್ಷಣೆ

ಬೆಂಗಳೂರು: ನಗರದ ಕಂಪನಿಗಳಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ಹೊರ ರಾಜ್ಯಗಳಿಂದ ಯುವತಿಯರನ್ನು ಕರೆತಂದು ವೇಶ್ಯಾವಾಟಿಕೆ ಜಾಲಕ್ಕೆ ತಳ್ಳಿದ್ದ 9 ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ವೇಶ್ಯಾವಾಟಿಕೆ ಜಾಲದ ಬಗ್ಗೆ ದೊರೆತ ಮಾಹಿತಿ ಮೇರೆಗೆ ಮೂರು ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿ 9 ಆರೋಪಿಗಳನ್ನು ಬಂಧಿಸಿದ ಪೊಲೀಸರು, ದೆಹಲಿ, ಮುಂಬೈ, ಪಶ್ಚಿಮ ಬಂಗಾಳ, ಮಧ್ಯಪ್ರದೇಶದ 26 ಯುವತಿಯರನ್ನು ರಕ್ಷಿಸಿದ್ದಾರೆ.


'ಮಧ್ಯವರ್ತಿಗಳ ಮೂಲಕ ಹೊರ ರಾಜ್ಯಗಳಿಂದ ಯುವತಿಯರನ್ನು ನಗರಕ್ಕೆ ಕರೆಸಲಾಗಿತ್ತು. ಪಿ.ಜಿಗಳಲ್ಲಿ ಯುವತಿಯರನ್ನು ಇರಿಸಲಾಗಿತ್ತು. ಮೊಬೈಲ್ ಮೂಲಕ ಗ್ರಾಹಕರನ್ನು ಸಂಪರ್ಕಿಸುತ್ತಿದ್ದ ಆರೋಪಿಗಳು, ಅವರಿಂದ ಹಣ ಪಡೆದು ಹೇಳಿದ ಸ್ಥಳಕ್ಕೆ ಯುವತಿಯರನ್ನು ಕಳುಹಿಸುತ್ತಿದ್ದರು' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

ತಪ್ಪಿತಸ್ಥರನ್ನು ಬಂಧಿಸುವಂತೆ ಒತ್ತಾಯಿಸಿ ಗ್ರಾಮಸ್ಥರ ಪ್ರತಿಭಟನೆ

ವಿದ್ಯಾರ್ಥಿನಿ ಸಾವು: ಶಾಲೆ ಮುಖ್ಯಸ್ಥ ವಶಕ್ಕೆ

ಪ್ರಜಾವಾಣಿ ವಾರ್ತೆ

ಸಾಗರ: ಇಲ್ಲಿನ ವನಶ್ರೀ ವಸತಿ ವಿದ್ಯಾಲಯದ 13 ವರ್ಷದ ವಿದ್ಯಾರ್ಥಿನಿ ಸಾವಿನ ಪ್ರಕರಣ ಸಂಬಂಧ ಪೊಲೀಸರು ವಿದ್ಯಾಲಯದ ಮುಖ್ಯಸ್ಥ ವನಶ್ರೀ ಮಂಜಪ್ಪ (ಎಚ್. ಪಿ. ಮಂಜಪ್ಪ) ಅವರನ್ನು ಶನಿವಾರ ವಶಕ್ಕೆ ಪಡೆದಿದ್ದಾರೆ.



ಮಂಜಪ್ಪ

ಸೊರಬ ತಾಲ್ಲೂಕಿನ ಗ್ರಾಮವೊಂದರ 8ನೇ ತರಗತಿ ವಿದ್ಯಾರ್ಥಿನಿ, ವಿದ್ಯಾಲಯಕ್ಕೆ ದಾಖಲಾದ 5 ದಿನಗಳಲ್ಲೇ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಳು. ಗುರುವಾರ (ಜೂನ್ 8) ವಾಂತಿ ಮಾಡಿಕೊಂಡು ತೀವ್ರವಾಗಿ ಅಸ್ವಸ್ಥಗೊಂಡಿದ್ದ ಆಕೆಯನ್ನು ಶಾಲೆಯ ವಾಹನದಲ್ಲೇ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿ ಆಕೆ ಅಸುನೀಗಿದ್ದಳು.

ಸಾವಿನ ಕುರಿತು ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸಿ ವಿದ್ಯಾರ್ಥಿನಿಯ ಪೋಷಕರು ಹಾಗೂ ಗ್ರಾಮಸ್ಥರು ವರದಹಳ್ಳಿ ರಸ್ತೆಯಲ್ಲಿರುವ ವಿದ್ಯಾಲಯದ ಎದುರು ಶನಿವಾರ ಪ್ರತಿಭಟನೆ ನಡೆಸಿದರು. ತಪ್ಪಿತಸ್ಥರನ್ನು ಬಂಧಿಸುವಂತೆ ಪಟ್ಟು ಹಿಡಿದರು. ಪ್ರತಿಭಟನಕಾರರು ವಿದ್ಯಾಲಯದ ಒಳಗೆ ನುಗ್ಗಲೂ ಮುಂದಾದರು. ವಿಷಯ ತಿಳಿದು ಸ್ಥಳಕ್ಕೆ ಬಂದ ಪೊಲೀಸರು ಪ್ರತಿಭಟನಕಾರರನ್ನು ತಡೆದರು. ವಿದ್ಯಾಲಯದ ಮುಖ್ಯಸ್ಥ ಮಂಜಪ್ಪ ಅವರನ್ನು ವಶಕ್ಕೆ ಪಡೆದು, ವಿಚಾರಣೆಗೆ ಒಳಪಡಿಸಿದರು.

'ಐದು ದಿನದ ಹಿಂದಷ್ಟೇ ಮಗಳನ್ನು ವಿದ್ಯಾಲಯಕ್ಕೆ ಸೇರಿಸಿದ್ದೆವು. ಅವಳಿಗೆ ಯಾವುದೇ ಆರೋಗ್ಯದ ಸಮಸ್ಯೆ ಇರಲಿಲ್ಲ. ದಿಢೀರನೆ ಆಕೆ ಮೃತಪಟ್ಟಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ನಮಗೆ ನ್ಯಾಯ ಒದಗಿಸಿಕೊಡಬೇಕು' ಎಂದು ಪಾಲಕರು ಒತ್ತಾಯಿಸಿದರು.

'ಕಾಲು ನೋವು ಇರುವುದಾಗಿ ವಿದ್ಯಾರ್ಥಿನಿ ಹೇಳಿದ್ದಳು. ಮಂಜಪ್ಪ, ಮುಲಾಮು ಹಚ್ಚುವ ನೆಪದಲ್ಲಿ ಆಕೆಯನ್ನು ತಮ್ಮ ಕೊಠಡಿಗೆ ಕರೆದುಕೊಂಡು ಹೋಗಿದ್ದರು. ಇದನ್ನು ವಿದ್ಯಾಲಯದ ಇತರ ವಿದ್ಯಾರ್ಥಿನಿಯರು ನೋಡಿದ್ದರು. ಬಾಲಕಿಯರು ತಂಗಿರುವ ವಸತಿ ವಿದ್ಯಾಲಯದಲ್ಲಿ ರಾತ್ರಿ ವೇಳೆ ಪುರುಷರು ಇರಲು ಅವಕಾಶ ಕಲ್ಪಿಸಿದ್ದಾದರೂ ಏಕೆ' ಎಂದು ಪ್ರತಿಭಟನಕಾರರು ಪ್ರಶ್ನಿಸಿದರು.

ಲೈಂಗಿಕ ಕಿರುಕುಳದ ಆರೋಪ

'ಅಸ್ವಸ್ಥಗೊಂಡಾಗಲೇ ಪಾಲಕರಿಗೆ ವಿಷಯ ತಿಳಿಸದೆ, ಮೃತಪಟ್ಟ ನಂತರ ಮಾಹಿತಿ ನೀಡಿರುವುದು ಅನುಮಾನ ಮೂಡಿಸಿದೆ. ಮಂಜಪ್ಪ ಚಿಕಿತ್ಸೆಯ ನೆಪದಲ್ಲಿ ವಿದ್ಯಾರ್ಥಿನಿಗೆ ಬಲವಂತವಾಗಿ ಅಗಾಧ ಪ್ರಮಾಣದಲ್ಲಿ ನೀರು ಕುಡಿಸಿದ್ದರು. ಇದನ್ನೂ ವಿದ್ಯಾಲಯದ ಇತರ ವಿದ್ಯಾರ್ಥಿನಿಯರು ನೋಡಿದ್ದರು. ಆಕೆಗೆ ಲೈಂಗಿಕ ಕಿರುಕುಳ ನೀಡಿರುವ ಸಾಧ್ಯತೆ ಹೆಚ್ಚಿದೆ. ಈ ನಿಟ್ಟಿನಲ್ಲಿ ಪೊಲೀಸರು ಸಮಗ್ರ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

ಮಂಜಪ್ಪ ತಮ್ಮ ದೇಹದ ಖಾಸಗಿ ಭಾಗಗಳನ್ನು ಸ್ಪರ್ಶಿಸುವ ಮೂಲಕ ಲೈಂಗಿಕ ಕಿರುಕುಳ ನೀಡಿರುವುದಾಗಿ ವಿದ್ಯಾಲಯದ ಕೆಲ ವಿದ್ಯಾರ್ಥಿನಿಯರು ಪೊಲೀಸರಿಗೆ ದೂರಿದ್ದಾರೆ. ಇಬ್ಬರು ವಿದ್ಯಾರ್ಥಿನಿಯರು ಪೊಲೀಸ್ ಸಿಬ್ಬಂದಿ ಎದುರೇ ಮಂಜಪ್ಪ ಅವರಿಗೆ ಚಪ್ಪಲಿಯಿಂದ ಹೊಡೆದಿದ್ದಾರೆ.

'ಕಾಮಗಾರಿ ಎಲ್‌ಒಸಿಗೂ ಕಮಿಷನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದ್ದ ಕಾಮಗಾರಿಗಳಿಗೆ ಹಣ ಭರವಸೆ ಪತ್ರ (ಎಲ್‌ಒಸಿ) ಕೊಡಲು ಈಗಿನ ಕಾಂಗ್ರೆಸ್ ಶೇ 5ರಷ್ಟು ಹಣ ಕೇಳುತ್ತಿದೆ. ಇದು '45 ಪರ್ಸೆಂಟ್' ಸರ್ಕಾರ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಬಿಜೆಪಿ ಅಧಿಕಾರದಲ್ಲಿದ್ದಾಗ '40 ಪರ್ಸೆಂಟ್' ಸರ್ಕಾರ ಎಂದು ಟೀಕಿಸುತ್ತಿದ್ದವರೇ ಇಂದು ಪ್ರತಿಯೊಂದಕ್ಕೂ ದರ ನಿಗದಿ ಮಾಡಲು ಆರಂಭಿಸಿದ್ದಾರೆ. ಆರಂಭದ ಹಂತದಲ್ಲೇ ಅಧಿಕಾರಿಗಳ ಸಭೆ ನಡೆಸಿ, ತಾವು ಹೇಳಿದಂತೆಯೇ ಮಾಡಬೇಕು ಎಂದು ಸೂಚಿಸಿದ್ದಾರೆ. ಅದರ ಅರ್ಥ ಏನು? ಇಂಥವರು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ಹಿಂದಿನ ಟೆಂಡರ್ ಸೇರಿದಂತೆ ಹಲವು ಅನುದಾನ ತಡೆ ಹಿಡಿಯಲಾಗಿದೆ. ಬಿಜೆಪಿ ಸರ್ಕಾರ ₹ 600 ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಿತ್ತು. ಕಳೆದ ಮೇ 6ರಂದು ಗುತ್ತಿಗೆದಾರರಿಗೆ ₹ 675 ಕೋಟಿ ಮೊತ್ತಕ್ಕೆ ಎಲ್‌ಒಸಿ ನೀಡಲಾಗಿತ್ತು. ಈಗ ಅದನ್ನು ತಡೆ ಹಿಡಿಯಲಾಗಿದೆ. ಕಾಂಗ್ರೆಸ್ ಸಂಸದರೊಬ್ಬರು 'ನಮ್ಮ ಸರ್ಕಾರ ಬರುತ್ತದೆ ಹಣ ಬಿಡುಗಡೆ ಮಾಡಬೇಡಿ' ಎಂದಿದ್ದರಂತೆ. ಅವರು ಏಕೆ ಹೇಳಿದ್ದರು? ಶೇ 40ರ ಜತೆಗೆ ಇನ್ನೂ ಶೇ 5ರಷ್ಟು ಸೇರಿಸಿ ಕೊಡಬೇಕು ಎಂದು ಹೇಳುತ್ತಿರುವ ಮಾಹಿತಿ ಇದೆ ಎಂದರು.

ವಿದೇಶ ಪ್ರವಾಸದಲ್ಲಿರುವ ಸಚಿವರ ಗಮನಕ್ಕೆ ಬಾರದೇ ಮುಖ್ಯಮಂತ್ರಿ ವರ್ಗಾವಣೆ ಮಾಡಿದ್ದಾರೆ. ಹಾಗಾದರೆ, ಎಷ್ಟು ಹಣಕೊಟ್ಟು ಅವರು ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಈ ಸರ್ಕಾರ 'ವರ್ಗಾವಣೆ ಜ್ಯೋತಿ' ಕಾರ್ಯಕ್ರಮ ಆರಂಭಿಸಿದೆ ಎಂದು ಕುಮಾರಸ್ವಾಮಿ ದೂರಿದರು.

ಭಾನುವಾರ, ಜೂನ್ 11, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಅಭಿಮಾನ
ಲಂಡನ್‌ನಲ್ಲಿ ನಡೆಯುತ್ತಿರುವ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದ ವೇಳೆ ಅಭಿಮಾನಿಯೊಬ್ಬರು ಕಂಡು ಬಂದಿದ್ದು ಹೀಗೆ

ಸಂಕ್ಷಿಪ್ತ ಸುದ್ದಿ

ಮಾಲೀಕನಿಂದ ಥಳಿತ: ದಲಿತ ವ್ಯಕ್ತಿ ಸಾವು

ವಡೋದರಾ (ಪಿಟಿಐ): 'ಊಟದ ಪಾರ್ಸೆಲ್ ವಿಚಾರದಲ್ಲಿ ಕಮ್ಮಿ ಆಹಾರ ಪ್ಯಾಕ್ ಮಾಡಲಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದ ದಲಿತ ವ್ಯಕ್ತಿಯೊಬ್ಬರ ಮೇಲೆ ಪ್ರಬಲ ಜಾತಿಗೆ ಸೇರಿದ ಹೋಟೆಲ್ ಮಾಲೀಕ ಮತ್ತು ಸಿಬ್ಬಂದಿ ಹಲ್ಲೆ ನಡೆಸಿದ ಪರಿಣಾಮ ಆ ವ್ಯಕ್ತಿ ಮೃತಪಟ್ಟಿದ್ದಾರೆ. ಇದು ಗುಜರಾತ್‌ನ ಮಹಿಸಾಗರ ಜಿಲ್ಲೆಯಲ್ಲಿ ನಡೆದಿದೆ' ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಮೃತನನ್ನು ರಾಜು ವಂಕರ್ (45) ಎಂದು ಗುರುತಿಸಲಾಗಿದೆ. ಇವರು ವಡೋದರಾದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಶುಕ್ರವಾರ ಸಾವಿಗೀಡಾಗಿದ್ದಾರೆ. ರಾಜು ಅವರನ್ನು ಎರಡು ದಿನಗಳ ಹಿಂದೆಯಷ್ಟೇ ಹೋಟೆಲ್ ಮಾಲೀಕ, ವ್ಯವಸ್ಥಾಪಕ ಥಳಿಸಿದ್ದರು ಎಂದು ಬಾಕೋರ್ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಅಕ್ರಮ ಗಣಿ ಕುಸಿತ ಪ್ರಕರಣ: ತನಿಖೆಗೆ ಸಮಿತಿ ರಚನೆ

ಧನ್‌ಬಾದ್ (ಪಿಟಿಐ): ಜಾರ್ಖಂಡ್‌ನ ಭೌರಾ ಕೊಲಿಯರಿ ಗಣಿ ಪ್ರದೇಶದಲ್ಲಿ ಅಕ್ರಮವಾಗಿ ನಡೆಯುತ್ತಿದ್ದ ಗಣಿ ಕುಸಿದು ಮೂವರು ಕಾರ್ಮಿಕರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ ತನಿಖೆ ನಡೆಸಲು ಜಿಲ್ಲಾಡಳಿತ ಸಮಿತಿ ರಚನೆ ಮಾಡಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಸಿಂದರಿಯ ಉಪವಿಭಾಗೀಯ ಪೊಲೀಸ್ ಅಧಿಕಾರಿ ಅಭಿಷೇಕ್ ಕುಮಾರ್ ಮತ್ತು ಝರಿಯಾದ ವೃತ್ತ ನಿರೀಕ್ಷಕ ಪರಮೇಶ್ ಕುಶ್ವಾ ಅವರನ್ನು ಒಳಗೊಂಡ ಸಮಿತಿ ರಚನೆ ಮಾಡಲಾಗಿದೆ. ಈ ಸಮಿತಿಯು 24 ಗಂಟೆಯೊಳಗೆ ವರದಿ ನೀಡಲಿದೆ ಎಂದು ಇಲ್ಲಿಯ ಉಪ ಆಯುಕ್ತ ಸಂದೀಪ್ ಸಿಂಗ್ ಅವರು ಹೇಳಿದ್ದಾರೆ.

ರನ್ ವೇಯಲ್ಲಿ ಎರಡು ವಿಮಾನಗಳ ನಡುವೆ ಅಪಘಾತ


ಟೋಕಿಯೊ (ಎಪಿ): ಜಪಾನ್ ರಾಜಧಾನಿ ಟೋಕಿಯೊದ ಹಾನೆಡ ವಿಮಾನ ನಿಲ್ದಾಣದ ರನ್ ವೇಯಲ್ಲಿ ಎರಡು ಪ್ರಯಾಣಿಕ ವಿಮಾನಗಳು ಒಂದಕ್ಕೊಂದು ಸ್ಪರ್ಶಿಸಿರುವ ಘಟನೆ ಶನಿವಾರ ನಡೆದಿದೆ. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ ಎಂದು ಜಪಾನ್‌ನ ಮಾಧ್ಯಮವೊಂದು ವರದಿ ಮಾಡಿದೆ.

ಥಾಯ್ ಏರ್‌ವೇಸ್ ಇಂಟರ್‌ನ್ಯಾಷನಲ್‌ನ ಒಂದು ವಿಮಾನ ಮತ್ತು ಈವಾ ಏರ್‌ವೇಸ್‌ನ ವಿಮಾನದ ನಡುವೆ ಈ ಅಪಘಾತ ಸಂಭವಿಸಿದೆ. ಎರಡೂ ವಿಮಾನಗಳನ್ನೂ ಒಂದೇ ರನ್‌ವೇಯಲ್ಲಿ ನಿಲ್ಲಿಸಲಾಗಿತ್ತು ಎಂದು ವರದಿ ಮಾಡಿದೆ.

ಅಪಘಾತದ ಕಾರಣವೇನೆಂಬುದು ತಿಳಿದುಬಂದಿಲ್ಲ ಎನ್ನಲಾಗಿದೆ.

ಎನ್‌ಸಿಪಿ ಪುನರ್‌ರಚನೆ: ನಂತರದ ಪೀಳಿಗೆಗೆ ಜವಾಬ್ದಾರಿ ವಹಿಸಿದ ಶರದ್ ಪವಾರ್

ಕಾರ್ಯಾಧ್ಯಕ್ಷರಾಗಿ ಸುಳೆ, ಪ್ರಫುಲ್


ಪ್ರಫುಲ್ ಪಟೇಲ್


ಸುಪ್ರಿಯಾ ಸುಳೆ

ಮುಂಬೈ (ಪಿಟಿಐ): ಆಶ್ಚರ್ಯಕರ ಬೆಳವಣಿಗೆಯಲ್ಲಿ, ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಕಾರ್ಯಾಧ್ಯಕ್ಷರಾಗಿ ಸಂಸದೆ ಸುಪ್ರಿಯಾ ಸುಳೆ ಮತ್ತು ಪ್ರಫುಲ್ ಪಟೇಲ್ ಅವರನ್ನು ಪಕ್ಷದ ಮುಖ್ಯಸ್ಥ ಶರದ್ ಪವಾರ್ ನೇಮಕ ಮಾಡಿದ್ದಾರೆ.

ಪಕ್ಷದ 25ನೇ ಸ್ಥಾಪನಾ ದಿನವಾದ ಶನಿವಾರ ಈ ಘೋಷಣೆ ಮಾಡಲಾಗಿದೆ. ಈ ದಿನದಂದೇ ಪಕ್ಷದ ಸಂಘಟನೆ ಹೊಣೆಯನ್ನು ನಂತರದ ಪೀಳಿಗೆಗೆ ದಾಟಿಸುವ ಹೆಜ್ಜೆಯನ್ನು ಶರದ್ ಪವಾರ್ ಇಟ್ಟಿದ್ದಾರೆ.

ಪಕ್ಷದಲ್ಲಿ ಬಂಡಾಯದ ಮನಃಸ್ಥಿತಿ ಪ್ರದರ್ಶಿಸಿದ್ದ, ಸೋದರಳಿಯನೂ ಆಗಿರುವ, ಮಹಾರಾಷ್ಟ್ರ ಎನ್‌ಸಿಪಿ ಶಾಸಕಾಂಗ ಪಕ್ಷದ ನಾಯಕ ಅಜಿತ್ ಪವಾರ್ ಅವರಿಗೆ ಯಾವುದೇ ಹೊಣೆಗಾರಿಕೆ ನೀಡದಿರುವುದು ಗಮನಾರ್ಹವಾಗಿದೆ.

ಶರದ್ ಪವಾರ್ ಅವರ ಪುತ್ರಿ ಸುಳೆ ಅವರನ್ನು ಪಕ್ಷದ ಕೇಂದ್ರ ಚುನಾವಣಾ ಪ್ರಾಧಿಕಾರದ ಅಧ್ಯಕ್ಷೆಯನ್ನಾಗಿಯೂ ನೇಮಿಸಲಾಗಿದೆ. ಮಹಾರಾಷ್ಟ್ರ, ಹರಿಯಾಣ, ಪಂಜಾಬ್‌ನಲ್ಲಿ ಪಕ್ಷದ ಉಸ್ತುವಾರಿ ಹಾಗೂ ಪಕ್ಷದ ಮಹಿಳೆ, ಯುವಜನ ಮತ್ತು ವಿದ್ಯಾರ್ಥಿ ಘಟಕದ ಉಸ್ತುವಾರಿ ಹೊಣೆಗಾರಿಕೆಯನ್ನು ಸುಳೆ ಅವರಿಗೆ ವಹಿಸಲಾಗಿದೆ.

ವಿವಿಧ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಕೇಂದ್ರ ಚುನಾವಣಾ ಪ್ರಾಧಿಕಾರವು ನಿರ್ಣಾಯಕವಾದ ಪಾತ್ರವನ್ನು ವಹಿಸಲಿದೆ.

ಅಜಿತ್ ಪವಾರ್‌ಗೆ ಸಿಗದ ಹೊಣೆಗಾರಿಕೆ

ಎನ್‌ಸಿಪಿಯ ಸಾಂಸ್ಥಿಕ ಪುನರ್‌ರಚನೆಯಲ್ಲಿ ಅಜಿತ್ ಪವಾರ್ ಅವರಿಗೆ ಯಾವುದೇ ಹೊಣೆಗಾರಿಕೆ ನೀಡಲಾಗಿಲ್ಲ.

ಅಜಿತ್ ಪವಾರ್ ಅವರು ಬಾರಾಮತಿ ಕ್ಷೇತ್ರದಿಂದ ಏಳು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದು, ನಾಲ್ಕು ಬಾರಿ ಉಪ ಮುಖ್ಯಮಂತ್ರಿ ಆಗಿದ್ದರು. ಪಕ್ಷದ ಮುಖ್ಯಸ್ಥನಾಗುವ ಇಂಗಿತವನ್ನು ತಿಂಗಳ ಹಿಂದಷ್ಟೇ ವ್ಯಕ್ತಪಡಿಸಿದ್ದರು.

ಅಜಿತ್ ಪವಾರ್ ಅವರು ಬಿಜೆಪಿಗೆ ಹತ್ತಿರವಾಗುತ್ತಿದ್ದಾರೆ, ಪಕ್ಷಾಂತರ ಮಾಡಬಹುದು ಎಂಬ ವದಂತಿಗಳು ಇತ್ತೀಚಿನ ದಿನಗಳಲ್ಲಿ ಕೇಳಿಬಂದಿದ್ದವು. ಆದರೆ, ಇದನ್ನು ಸ್ವತಃ ಅಜಿತ್ ಪವಾರ್ ಮತ್ತು ಶರದ್ ಪವಾರ್ ತಳ್ಳಿಹಾಕಿದ್ದರು.

ಪಕ್ಷದಲ್ಲಿ ಅಜಿತ್ ಮತ್ತು ಎನ್‌ಸಿಪಿ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಜಯಂತ್ ಪಾಟೀಲ್ ಸ್ಥಾನ ಕುರಿತ ಪ್ರಶ್ನೆಗೆ ಶರದ್ ಪವಾರ್, 'ಅಜಿತ್ ಅವರು ಶಾಸಕಾಂಗ ಪಕ್ಷದ ನಾಯಕರಾಗಿದ್ದು, ಜಯಂತ್ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

ಶರದ್ ಪವಾರ್ ಅವರು ಪಕ್ಷದ ಮುಖ್ಯಸ್ಥ ಸ್ಥಾನಕ್ಕೆ ಈಚೆಗೆ ರಾಜೀನಾಮೆ ಪ್ರಕಟಿಸಿ, ಕಾರ್ಯಕರ್ತರು ಮತ್ತು ಮುಖಂಡರ ವಲಯದಲ್ಲಿ ಸಂಚಲನ ಮೂಡಿಸಿದ್ದರು. ಬಳಿಕ ಕಾರ್ಯಕರ್ತರ ಒತ್ತಡಕ್ಕೆ ಮಣಿದು ತಮ್ಮ ನಿರ್ಧಾರದಿಂದ ಹಿಂದೆ ಸರಿದಿದ್ದರು. ಆ ಬೆಳವಣಿಗೆಯ ಒಂದು ತಿಂಗಳ ತರುವಾಯ ಪಕ್ಷದ ಸಾಂಸ್ಥಿಕ ರಚನೆಯಲ್ಲಿ ಪ್ರಮುಖ ಬದಲಾವಣೆ ಮಾಡುವ ನಿರ್ಧಾರ ಹೊರಬಿದ್ದಿದೆ.

ಸಂಘಟಿತ ಯತ್ನ–ಸುಳೆ: ಪಕ್ಷದಲ್ಲಿ ಹೊಸ ಜವಾಬ್ದಾರಿ ವಹಿಸಿಕೊಂಡ ಬಳಿಕ ಮಾತನಾಡಿರುವ ಸುಳೆ, ಪಕ್ಷವನ್ನು ಬಲಪಡಿಸಲು ಹಾಗೂ ರಾಷ್ಟ್ರಕ್ಕೆ ದೊಡ್ಡ ಮಟ್ಟದಲ್ಲಿ ಸೇವೆಯನ್ನು ಸಲ್ಲಿಸಲು ಸಂಘಟಿತ ಪ್ರಯತ್ನ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದ್ದಾರೆ.

'ನನ್ನ ಹಾಗೂ ಪ್ರಫುಲ್ ಪಟೇಲ್ ಅವರ ಮೇಲೆ ಕಾರ್ಯಾಧ್ಯಕ್ಷ ಸ್ಥಾನದ ಪ್ರಮುಖ ಹೊಣೆಗಾರಿಕೆಯನ್ನು ಶರದ್ ಪವಾರ್, ಹಿರಿಯ ಮುಖಂಡರು, ಕಾರ್ಯಕರ್ತರು ವಹಿಸಿದ್ದಾರೆ. ಅದಕ್ಕಾಗಿ ಆಭಾರಿಯಾಗಿದ್ದೇವೆ' ಎಂದೂ ಅವರು ಟ್ವೀಟ್ ಮಾಡಿದ್ದಾರೆ.

'ತಾರಿಖ್ ಅನ್ವರ್, ಪಿ.ಎ.ಸಂಗ್ಮಾ ಜೊತೆಗೂಡಿ ಶರದ್ ಪವಾರ್ ಅವರು 1999ರ ಜೂನ್ 10ರಂದು ಎನ್‌ಸಿಪಿ ಸ್ಥಾಪಿಸಿದ್ದರು. ಕಾರ್ಯಕರ್ತರಿಂದಾಗಿ ಪಕ್ಷ ಯಶಸ್ಸು ಸಾಧಿಸಿದೆ. ಪಕ್ಷ ಸಂಘಟನೆಗೆ ಎಲ್ಲರ ಜೊತೆಗೂಡಿ ಶ್ರಮಿಸುತ್ತೇನೆ' ಎಂದು ಸುಪ್ರಿಯಾ ಅವರು ಹೇಳಿದ್ದಾರೆ.


ಸುದ್ದಿ 2 ನಿಮಿಷ

'ಗೋಡ್ಸೆ ಭಾರತದ ಸುಪುತ್ರ': ಗಿರಿರಾಜ್ ಹೇಳಿಕೆಗೆ ಸಿಬಲ್ ಟೀಕೆ

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು 'ನಾಥುರಾಂ ಗೋಡ್ಸೆ ಭಾರತದ ಸುಪುತ್ರ' ಎಂದು ನೀಡಿರುವ ಹೇಳಿಕೆಯನ್ನು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಶನಿವಾರ ಟೀಕಿಸಿದ್ದಾರೆ. 'ಈ ಹೇಳಿಕೆ ನೀಡಿದ್ದಾರೆ ಎಂಬ ಕಾರಣಕ್ಕೆ ಹಲವರು ಈ ಬಿಜೆಪಿ ನಾಯಕನನ್ನು ದೇಶದ ಸುಪುತ್ರ ಎಂದು ಕರೆಯಲಾರರು' ಎಂದಿದ್ದಾರೆ.

ಛತ್ತೀಸಗಢದ ದಾಂತೇವಾಡದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ್ದ ಗಿರಿರಾಜ್ ಸಿಂಗ್, 'ಗೋಡ್ಸೆ, ಮಹಾತ್ಮ ಗಾಂಧಿ ಅವರನ್ನು ಹತ್ಯೆ ಮಾಡಿದ್ದರೂ ಆತ ಮೊಘಲ್ ದೊರೆಗಳಾದ ಬಾಬರ್ ಮತ್ತು ಔರಂಗಜೇಬರಂತೆ ಹೊರಗಿನಿಂದ ಬಂದ ವ್ಯಕ್ತಿಯಲ್ಲ. ಈ ದೇಶದ ಸುಪುತ್ರ' ಎಂದಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಸಿಬಲ್, 'ಹಂತಕರನ್ನು ಅವರ ಹುಟ್ಟಿನಿಂದ ಗುರುತಿಸಲಾಗದು. ಗಿರಿರಾಜ್ ಅವರ ಈ ಹೇಳಿಕೆಯನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಖಂಡಿಸುವ ವಿಶ್ವಾಸ ಇದೆ' ಎಂದು ಹೇಳಿದ್ದಾರೆ.



ವೈದ್ಯಕೀಯ ಪದವಿ: ದೇಶದಾದ್ಯಂತ ಏಕರೂಪ ಕೌನ್ಸೆಲಿಂಗ್

ನವದೆಹಲಿ (ಪಿಟಿಐ): ದೇಶದ ಎಲ್ಲ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ 'ಎನ್‌ಇಇಟಿ– ಯುಜಿ' ಮೆರಿಟ್ ಪಟ್ಟಿ ಆಧರಿಸಿ ಏಕರೂಪ ಕೌನ್ಸೆಲಿಂಗ್ ಆಯೋಜಿಸುವ ವಿಷಯವನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ತನ್ನ ಹೊಸ ನಿಯಮಾವಳಿಯಲ್ಲಿ ಪ್ರಸ್ತಾಪಿಸಿದೆ.

ಈ ಹೊಸ ನಿಯಮಗಳನ್ನು ವೈದ್ಯಕೀಯ ಪದವಿ ಶಿಕ್ಷಣ ನಿಯಮಗಳು (ಜಿಎಂಇಆರ್– 2023) ಎಂದು ಕರೆಯಲಾಗಿದೆ.

ಈ ಕುರಿತು ಎನ್‌ಎಂಸಿ ಜೂನ್ 2ರಂದು ಗೆಜೆಟ್ ಅಧಿಸೂಚನೆ ಹೊರಡಿಸಿದೆ. ಎನ್‌ಎಂಸಿ ಒದಗಿಸಿದ ಸೀಟ್ ಮ್ಯಾಟ್ರಿಕ್ಸ್ ಆಧರಿಸಿಯೇ ಈ ಕೌನ್ಸೆಲಿಂಗ್ ಇರುತ್ತದೆ. ಅಗತ್ಯವಿದ್ದಲ್ಲಿ ಕೌನ್ಸೆಲಿಂಗ್ ಹಲವು ಸುತ್ತುಗಳನ್ನು ಹೊಂದಿರಬಹುದು ಎಂದು ಅದು ತಿಳಿಸಿದೆ.

ವೈದ್ಯಕೀಯ ಪದವಿ ಶಿಕ್ಷಣ ಮಂಡಳಿಯು (ಯುಜಿಎಂಇಬಿ) ಸಾಮಾನ್ಯ ಕೌನ್ಸೆಲಿಂಗ್‌ನ ಮಾರ್ಗಸೂಚಿಗಳನ್ನು ಪ್ರಕಟಿಸುತ್ತದೆ. ಸರ್ಕಾರ ನೇಮಿಸುವ ಪ್ರಾಧಿಕಾರವು ಈ ಮಾರ್ಗಸೂಚಿಗಳ ಅನ್ವಯವೇ ಕೌನ್ಸೆಲಿಂಗ್ ನಡೆಸುತ್ತದೆ.

ಯಾವುದೇ ವೈದ್ಯಕೀಯ ಸಂಸ್ಥೆಗಳು ಈ ನಿಯಮಗಳಿಗೆ ವಿರುದ್ಧವಾಗಿ ವೈದ್ಯಕೀಯ ಪದವಿ ಶಿಕ್ಷಣ ಕೋರ್ಸ್‌ಗೆ ಪ್ರವೇಶಾತಿ ನೀಡುವಂತಿಲ್ಲ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಮಣಿಪುರ: 130 ಶಸ್ತ್ರಾಸ್ತ್ರ ಹಿಂದಿರುಗಿಸಿದ ಯುವಕರು

ಶಾಂತಿ ಸ್ಥಾಪನೆಗೆ ಕೇಂದ್ರದ ಸಮಿತಿ

ನವದೆಹಲಿ (ಪಿಟಿಐ): ಮೈತೇಯಿ ಮತ್ತು ಕುಕಿ ಸಮುದಾಯದ ನಡುವಣ ಹಿಂಸಾಚಾರದಿಂದ ತತ್ತರಿಸಿರುವ ಮಣಿಪುರದಲ್ಲಿ ಶಾಂತಿ ಮತ್ತು ಸೌಹಾರ್ದ ಕಾಪಾಡಲು ಹರಸಾಹಸ ಪಡುತ್ತಿರುವ ಕೇಂದ್ರ ಸರ್ಕಾರವು, ಶನಿವಾರ ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದೆ.

ಕಳೆದ ತಿಂಗಳು ಸಂಘರ್ಷ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕಣಿವೆ ರಾಜ್ಯದಲ್ಲಿ ಶಾಂತಿ ಪುನರ್ ಸ್ಥಾಪನೆಗೆ ಸಮಿತಿ ರಚಿಸುವುದಾಗಿ ಘೋಷಿಸಿದ್ದರು. ಇದರ ಅನ್ವಯ ಸಮಿತಿ ರಚಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಮುಖ್ಯಮಂತ್ರಿ, ಸಚಿವರು, ಸಂಸದರು, ಶಾಸಕರು, ವಿವಿಧ ಪಕ್ಷದ ನಾಯಕರು, ಸಂಘ–ಸಂಸ್ಥೆಗಳು, ನಿವೃತ್ತ ಅಧಿಕಾರಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಕಲಾವಿದರು, ಸಾಮಾಜಿಕ ಕಾರ್ಯಕರ್ತರು ಸೇರಿದಂತೆ ಸಂತ್ರಸ್ತ ಬುಡಕಟ್ಟು ಸಮುದಾಯಗಳ ಪ್ರತಿನಿಧಿಗಳೂ ಈ ಸಮಿತಿಯಲ್ಲಿದ್ದಾರೆ.

ಸಂಘರ್ಷಕ್ಕೆ ತುತ್ತಾಗಿರುವ ಸಮುದಾಯಗಳ ನಡುವಣ ಮತ್ತೆ ಶಾಂತಿ ನೆಲೆಗೊಳ್ಳಲು ಅಗತ್ಯವಿರುವ ಕ್ರಮಕೈಗೊಳ್ಳುವಂತೆ ಸಮಿತಿಗೆ ಸೂಚಿಸಲಾಗಿದೆ. ಬುಡಕಟ್ಟು ಜನರ ನಡುವೆ ಮಾತುಕತೆ ಮೂಲಕ ಶಾಂತಿ, ಸೌಹಾರ್ದದ ವಾತಾವರಣ ಮೂಡಿಸಲು ಸಮಿತಿಯು ಕಾರ್ಯ ನಿರ್ವಹಿಸಲಿದೆ ಎಂದು ಸಚಿವಾಲಯ ತಿಳಿಸಿದೆ.

130 ಶಸ್ತ್ರಾಸ್ತ್ರ ಹಿಂದಿರುಗಿಸಿದ ಯುವಕರು: ಭದ್ರತಾ ಪಡೆಗಳಿಂದ ಕಳವು ಮಾಡಿರುವ ಶಸ್ತ್ರಾಸ್ತ್ರಗಳನ್ನು ವಾಪಸ್ ನೀಡುವಂತೆ ಸಚಿವ ಎಲ್. ಸುಸಿಂದ್ರೋ ಮೈತೇಯಿ ಮಾಡಿದ ಮನವಿಗೆ ಯುವಕರು ಸ್ಪಂದಿಸಿದ್ದು, 130 ಶಸ್ತ್ರಾಸ್ತ್ರಗಳನ್ನು ಹಿಂದಿರುಗಿಸಿದ್ದಾರೆ.

ಇಂಫಾಲ್‌ನ ಪೂರ್ವ ಭಾಗದಲ್ಲಿರುವ ತಮ್ಮ ಮನೆಯ ಮುಂಭಾಗ ಸಚಿವರು, ಪೆಟ್ಟಿಗೆಯೊಂದನ್ನು ಇಟ್ಟು ಅದರೊಳಗೆ ಶಸ್ತ್ರಾಸ್ತ್ರಗಳನ್ನು ಹಾಕುವಂತೆ ದೊಡ್ಡ ಪೋಸ್ಟರ್ ಅಳವಡಿಸಿ ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿರುವ ಯುವಕರು ಅದರೊಳಗೆ ಶಸ್ತ್ರಾಸ್ತ್ರಗಳನ್ನು ಹಾಕಿ ಹೋಗಿದ್ದಾರೆ.

'ಪೊಲೀಸರ ಬಳಿ ಈ ಪೆಟ್ಟಿಗೆಯ ಕೀಲಿ ಇದ್ದು, ಅವರು ಯಾವಾಗ ಬೇಕಾದರೂ ಅವುಗಳನ್ನು ತೆಗೆದುಕೊಂಡು ಹೋಗಬಹುದು' ಎಂದು ಸಚಿವರು ತಿಳಿಸಿದ್ದಾರೆ.

ಹಿಂಸಾಚಾರಕ್ಕೆ ಇಲ್ಲಿಯವರೆಗೆ 100 ಮಂದಿ ಮೃತಪಟ್ಟಿದ್ದು, 300ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. 37,450 ಜನರು ನಿರಾಶ್ರಿತರಾಗಿದ್ದು, ಅವರಿಗೆ 272 ಶಿಬಿರಗಳಲ್ಲಿ ತಾತ್ಕಾಲಿಕ ನೆಲೆ ಕಲ್ಪಿಸಲಾಗಿದೆ.


ಭದ್ರತಾ ಪಡೆಯ ಯೋಧರು ಇಂಫಾಲ್‌ನಲ್ಲಿ ಕಾರ್ಯಾಚರಣೆ ನಡೆಸಿ ವಶಪಡಿಸಿಕೊಂಡಿರುವ ಶಸ್ತ್ರಾಸ್ತ್ರಗಳು –ಪಿಟಿಐ ಚಿತ್ರ

ಮೋದಿ ಮೌನ ಪ್ರಶ್ನಿಸಿದ ಮಲ್ಲಿಕಾರ್ಜುನ ಖರ್ಗೆ

ಹಿಂಸಾಚಾರದ ಬಗ್ಗೆ ಮಾತನಾಡದೆ ಮೌನವಹಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರ ಧೋರಣೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಟುವಾಗಿ ಟೀಕಿಸಿದ್ದಾರೆ.

'ಹಿಂಸಾಚಾರ ಇನ್ನೂ ತಹಬಂದಿಗೆ ಬಂದಿಲ್ಲ. ಆದರೆ, ಶಾಂತಿ ಕಾಪಾಡುವಂತೆ ಸಂಘರ್ಷದಿಂದ ನಲುಗಿರುವ ಜನರಿಗೆ ಮೋದಿ ಮನವಿ ಮಾಡದೆ ಮೌನಕ್ಕೆ ಜಾರಿದ್ದಾರೆ. ಇದು ಮಣಿಪುರದ ನಾಗರಿಕರಿಗೆ ಬಗೆದ ದ್ರೋಹವಾಗಿದೆ' ಎಂದು ಆರೋಪಿಸಿದ್ದಾರೆ.

'ಮೇ 3ರಂದು ಹಿಂಸಾಚಾರ ಶುರುವಾಯಿತು. ಒಂದು ತಿಂಗಳ ಬಳಿಕ ಕೇಂದ್ರ ಗೃಹ ಸಚಿವರನ್ನು ಸಂಘರ್ಷ ಪೀಡಿತ ನೆಲಕ್ಕೆ ಕಳುಹಿಸಿದ್ದೀರಿ. ಅಮಿತ್ ಶಾ ಭೇಟಿ ನೀಡಿದ ಎಂಟು ದಿನಗಳ ಬಳಿಕ ಮತ್ತೆ ಹಿಂಸಾಚಾರ ಮುಂದುವರಿಸಿದೆ. ಈಶಾನ್ಯ ಭಾರತಕ್ಕೆ ಪ್ರತ್ಯೇಕ ಕಾಯ್ದೆ ಜಾರಿಗೊಳಿಸುವ ಬಗೆಗಿನ ಪ್ರತಿಪಾದನೆ ಹಾಗೂ ನಿಮ್ಮ ಮೌನವು ಜನರ ಗಾಯದ ಮೇಲೆ ಉಪ್ಪು ಸವರಿದಂತಾಗಿದೆ' ಎಂದು ದೂರಿದ್ದಾರೆ.

ಬಿಜೆಪಿಯೇ ಹಿಂಸಾಚಾರದ ಜವಾಬ್ದಾರಿ ಹೊರಬೇಕು. ಆ ಪಕ್ಷದ ಒಡೆದಾಳುವ ರಾಜಕೀಯ ನೀತಿಯೇ ಇದಕ್ಕೆ ಕಾರಣ. ಗಡಿ ರಾಜ್ಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಮುಖ್ಯಮಂತ್ರಿ ಬಿರೇನ್ ಸಿಂಗ್ ಸರ್ಕಾರ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

'ಮಹಿಳೆಯರಿಗೆ ಮಾಸಿಕ ₹1,000 ನೆರವು'

ಜಬಲ್‌ಪುರ್: ಮಧ್ಯಪ್ರದೇಶ ವಿಧಾನಸಭೆ ಚುನಾವಣೆ ಪ್ರಚಾರಕ್ಕೆ ಶನಿವಾರ ಚಾಲನೆ ನೀಡಿರುವ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ವಿವಾಹಿತೆಯರಿಗೆ ಮಾಸಿಕ ₹ 1,000 ಆರ್ಥಿಕ ನೆರವು ನೀಡುವ 'ಲಾಡ್ಲಿ ಬೆಹನಾ ಯೋಜನೆ' ಪ್ರಕಟಿಸಿದರು.

ಸತತ ನಾಲ್ಕನೇ ಬಾರಿಗೆ ಆಡಳಿತ ಚುಕ್ಕಾಣಿ ಹಿಡಿದಿರುವ ಅವರು ಈಗ ತೀವ್ರ ಆಡಳಿತ ವಿರೋಧಿ ಅಲೆಯನ್ನು ಎದುರಿಸುತ್ತಿದ್ದಾರೆ. ಮತಗಳಿಕೆಯ ಕ್ರಮವಾಗಿ ಈಗ ವಿಚ್ಛೇದಿತೆಯರು, ವಿಧವೆಯರಿಗೂ ಯೋಜನೆಯಡಿ ನೆರವು ನೀಡುವ ಭರವಸೆ ನೀಡಿದ್ದಾರೆ.

ಬ್ರಿಜ್ ಭೂಷಣ್ ವಿರುದ್ಧ ಲೈಂಗಿಕ ಕಿರುಕುಳ ಪ್ರಕರಣ

'ಹೇಳಿಕೆ ಬದಲಿಸುವಂತೆ ಒತ್ತಡ'

ಸೋನೆಪತ್, ಹರಿಯಾಣ (ಪಿಟಿಐ): ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಸಂತ್ರಸ್ತರು ಹೇಳಿಕೆಯನ್ನು ಬದಲಿಸುವಂತೆ ಒತ್ತಡ ಹೇರಲು ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ತನ್ನ ಪ್ರಭಾವವನ್ನು ಬಳಸುತ್ತಿದ್ದಾರೆ ಎಂದು ಕುಸ್ತಿಪಟುಗಳು ಆರೋಪಿಸಿದ್ದಾರೆ.

ಜೂನ್ 15ರ ಒಳಗೆ ತಮ್ಮ ಬೇಡಿಕೆ ಕುರಿತಂತೆ ಕಠಿಣ ಕ್ರಮವನ್ನು ಕೈಗೊಳ್ಳದಿದ್ದಲ್ಲಿ ಧರಣಿ ಪ್ರತಿಭಟನೆಯನ್ನು ಪುನಾರಾರಂಭಿಸುತ್ತೇವೆ ಎಂದೂ ಎಚ್ಚರಿಸಿದ್ದಾರೆ. ಬ್ರಿಜ್ ಭೂಷಣ್ ವಿರುದ್ಧ ಜೂನ್ 15ರೊಳಗೆ ಆರೋಪಪಟ್ಟಿ ದಾಖಲಿಸಲಾಗುವುದು ಎಂಬ ಸರ್ಕಾರದ ಭರವಸೆ ಹಿನ್ನೆಲೆಯಲ್ಲಿ ಕುಸ್ತಿಪಟುಗಳು ಇತ್ತೀಚೆಗೆ ತಮ್ಮ ಪ್ರತಿಭಟನೆ ಹಿಂಪಡೆದಿದ್ದರು.

ಹರಿಯಾಣ ಸೋನೆಪತ್ ಜಿಲ್ಲೆಯ ಛೋಟುರಾಮ್ ಧರ್ಮಶಾಲಾದಲ್ಲಿ ಕುಸ್ತಿಪಟುಗಳು 'ಪಂಚಾಯತ್' ಕರೆದಿದ್ದರು. ತಮ್ಮ ಹೋರಾಟವನ್ನು ಬೆಂಬಲಿಸಿರುವ ಖಾಪ್ ಸದಸ್ಯರು, ಕೃಷಿಕರು, ಮಹಿಳಾ ಸಂಘಟನೆಗಳ ಸದಸ್ಯರನ್ನು ಆಹ್ವಾನಿಸಿದ್ದರು. ಕಳೆದ ಬುಧವಾರ ಕ್ರೀಡಾ ಸಚಿವರ ಜೊತೆಗೆ ನಡೆದ ಮಾತುಕತೆ ವಿವರಗಳನ್ನು ಕುಸ್ತಿಪಟುಗಳು ಈ ಸಭೆಯ ಗಮನಕ್ಕೆ ತಂದರು.

ಕುಸ್ತಿಪಟು ಸಾಕ್ಷಿ ಮಲಿಕ್ ಅವರು, 'ಸಂತ್ರಸ್ತ ಕುಸ್ತಿಪಟುಗಳನ್ನು ಬೇರ್ಪಡಿಸುವ ಯತ್ನ ನಡೆದಿದೆ. ಸೆಕ್ಷನ್ 161 ಮತ್ತು 164ರ ಅನ್ವಯ ದಾಖಲಿಸಲಾಗಿದ್ದ ಹೇಳಿಕೆಗಳನ್ನು ಬದಲಿಸಿರುವುದು ಸಾಬೀತಾಗಿದೆ' ಎಂದು ಹೇಳಿದರು. ಏಳು ಮಂದಿ ದೂರುದಾರರಲ್ಲಿ ಒಬ್ಬರಾಗಿರುವ ಬಾಲಕಿಯು, ಲೈಂಗಿಕ ಕಿರುಕುಳ ಆರೋಪ ಹಿಂಪಡೆದಿದ್ದಾರೆ ಎಂಬ ಬೆಳವಣಿಗೆ ಉಲ್ಲೇಖಿಸಿ ಈ ಮಾತು ಹೇಳಿದರು.

'ಬಾಲಕಿ ತಂದೆ ಒತ್ತಡದಲ್ಲಿರುವುದು ಸ್ಪಷ್ಟ. ಅವರ ಮೇಲೆ ಒತ್ತಡ ಹೇರಲಾಗುತ್ತಿದೆ. ಇನ್ನು ಎಷ್ಟು ದಿನ ಹೋರಾಟ ನಡೆಸಬೇಕು? ಭಜರಂಗ್ ಅವರಿಗೂ ಕರೆಗಳು ಬರುತ್ತಿವೆ. 'ಲಂಚ ತೆಗೆದುಕೊ, ಪ್ರತಿಭಟನೆ ಕೈಬಿಡು' ಎಂದು ಆಮಿಷ ಒಡ್ಡಲಾಗುತ್ತಿದೆ. ಮಾಧ್ಯಮಗಳಲ್ಲಿಯೂ ತಪ್ಪಾಗಿ ಬಿಂಬಿಸಲಾಗುತ್ತಿರುವುದು ನಮಗೆ ಹೆಚ್ಚು ನೋವುಂಟು ಮಾಡಿದೆ' ಎಂದು ಹೇಳಿದರು.

'ಇದೇ ಕಾರಣದಿಂದಲೇ ಮೊದಲಿಗೆ ಅವರನ್ನು (ಬ್ರಿಜ್ ಭೂಷಣ್) ಬಂಧಿಸಿ, ನಂತರ ತನಿಖೆ ಮಾಡಿ ಎಂದು ನಾವು ಒತ್ತಾಯಿಸಿದ್ದೆವು. ಅವರು ಪೊಲೀಸ್ ವಶದಲ್ಲಿದ್ದರೆ ಪ್ರಭಾವ ಬಳಸಿ ಒತ್ತಡವನ್ನು ಹೇರಲು ಸಾಧ್ಯವಿಲ್ಲ. ಇಲ್ಲದಿದ್ದರೆ ಒಬ್ಬೊಬ್ಬರೇ ಸಂತ್ರಸ್ತರು ನಮ್ಮ ಪ್ರತಿಭಟನೆಯಿಂದ ಹಿಂದೆ ಸರಿಯುತ್ತಾರೆ' ಎಂದು ಸಾಕ್ಷಿ ಅವರು ಆತಂಕವನ್ನು ತೋಡಿಕೊಂಡರು.

'ಪ್ರಧಾನಿ ಮೌನ ನೋವುಂಟುಮಾಡಿದೆ'

ಸೋನೆಪತ್ (ರಾಯಿಟರ್ಸ್): 'ಕುಸ್ತಿ ಫೆಡರೇಷನ್‌ನ ಅಧ್ಯಕ್ಷರ ವಿರುದ್ಧದ ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೂ ಮೌನ ವಹಿಸಿರುವುದು ತಮಗೆ ತೀವ್ರ ನೋವುಂಟು ಮಾಡಿದೆ' ಎಂದು ಕುಸ್ತಿಪಟು ವಿನೇಶಾ ಫೋಗಟ್ ಹೇಳಿದ್ದಾರೆ.

'ಈ ವಿಷಯ ಕುರಿತು ಪ್ರಧಾನಿ ಅವರೂ ಏನನ್ನೂ ಹೇಳಿಲ್ಲ. ನಾವು ಭಾವನಾತ್ಮಕವಾಗಿ ಕುಗ್ಗಿಹೋಗುತ್ತಿದ್ದೇವೆ' ಎಂದು ಹರಿಯಾಣದ ತಮ್ಮ ನಿವಾಸದ ಬಳಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು ಹೇಳಿದರು.

ಪೊಲೀಸರ ತನಿಖೆಯ ಕಾರ್ಯವೈಖರಿಯ ಕುರಿತಂತೆಯೂ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಬ್ರಿಜ್ ಭೂಷಣ್ ವಿರುದ್ಧ ದೂರು ನೀಡಿರುವ ಏಳು ಜನರಲ್ಲಿ ವಿನೇಶಾ ಕೂಡಾ ಒಬ್ಬರು. 'ಪ್ರಭಾವಿ ವ್ಯಕ್ತಿಯಿಂದ ತಮಗೆ ಕಿರುಕುಳವಾಗಿದೆ ಎಂದು ಹೇಳುವ ಧೈರ್ಯ ತೋರಿದ ನಂತರ ನಾನು ತೀವ್ರವಾದ ಅವಮಾನವನ್ನು ಅನುಭವಿಸುತ್ತಿದ್ದೇನೆ' ಎಂದು ಪ್ರತಿಕ್ರಿಯಿಸಿದರು.

ಈ ಪ್ರಕರಣದಲ್ಲಿ ಸ್ಪಷ್ಟ ನಿರ್ಧಾರ ಹೊರಬರದೇ ನಾವು ಏಷಿಯನ್ ಗೇಮ್ಸ್‌ನಲ್ಲಿ ಭಾಗವಹಿಸಲು ಆಗದು. ನಮ್ಮ ಮಾನಸಿಕ ತೊಳಲಾಟ ನಿಮಗೆ ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ

ಸಾಕ್ಷಿ ಮಲ್ಲಿಕ್, ಕುಸ್ತಿಪಟು

ಈ ಹೋರಾಟದಲ್ಲಿ ಯಾವುದೇ ರಾಜಕೀಯ ಇಲ್ಲ. ಜೂನ್ 15ರ ಒಳಗೆ ಕಠಿಣ ಕ್ರಮ ಕುರಿತು ನಿರ್ಧರಿಸದಿದ್ದರೆ ಜಂತರ್ ಮಂತರ್ ಅಥವಾ ರಾಮ್‌ಲೀಲಾ ಮೈದಾನದಲ್ಲಿ ಪ್ರತಿಭಟನೆ ಪುನರಾರಂಭಿಸುತ್ತೇವೆ

ಭಜರಂಗ್ ಪುನಿಯಾ, ಕುಸ್ತಿಪಟು

ಅನುಚಿತ ವರ್ತನೆ: ಕಣ್ಣಾರೆ ನೋಡಿದ್ದೇನೆ –ಜಗ್‌ಬೀರ್ ಸಿಂಗ್

ನವದೆಹಲಿ (ಪಿಟಿಐ): '2013ರಿಂದಲೂ ಹಲವು ಸಂದರ್ಭಗಳಲ್ಲಿ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳ ಜೊತೆಗೆ ಅನುಚಿತವಾಗಿ ವರ್ತಿಸಿದ್ದನ್ನು ನಾನು ನೋಡಿದ್ದೇನೆ' ಎಂದು ಅಂತರರಾಷ್ಟ್ರೀಯ ರೆಫರಿ ಜಗ್‌ಬೀರ್ ಸಿಂಗ್ ಹೇಳಿದ್ದಾರೆ.

'2007ರಿಂದಲೂ ನಾನು ಯುಡಬ್ಲ್ಯುಡಬ್ಲ್ಯು ರೆಫರಿ ಆಗಿದ್ದೇನೆ. ಪ್ರತಿಭಟಿಸುತ್ತಿರುವ ಕುಸ್ತಿಪಟುಗಳು ಜನಿಸುವ ಮೊದಲಿನಿಂದಲೂ ರೆಫರಿ ಆಗಿದ್ದೇನೆ. ಬ್ರಿಜ್ ಭೂಷಣ್ ಕೂಡಾ ನನಗೆ ದೀರ್ಘಕಾಲದಿಂದ ಪರಿಚಿತರು' ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಪ್ರತಿಭಟನನಿರತ ಕುಸ್ತಿಪಟುಗಳು ದೂರು ದಾಖಲಿಸುವವರೆಗೂ ನಾನು ಈ ಬಗ್ಗೆ ಮಾತನಾಡುವಂತಿರಲಿಲ್ಲ. ನಾನು ಏನು ಮಾಡಲು ಆಗಿರಲಿಲ್ಲ. ಈಗಿನ ಇಡೀ ಪ್ರಕರಣವನ್ನು ಗಮನಿಸಿದ್ದೇನೆ. ತುಂಬಾ ಬೇಸರವಾಗಿದೆ' ಎಂದು ಹೇಳಿದರು.

'ಬ್ರಿಜ್ ಭೂಷಣ್ ಹಲವು ಸಂದರ್ಭಗಳಲ್ಲಿ ಅನುಚಿತವಾಗಿ ವರ್ತಿಸಿದ್ದಾರೆ. ಅವರು ಅಧ್ಯಕ್ಷರಾದ ಬಳಿಕ 2013ರಲ್ಲಿ ಕಜಕಿಸ್ತಾನ್‌ಗೆ 2ನೇ ಬಾರಿ ಪ್ರವಾಸ ತೆರಳಿದ್ದೆವು. ಆಗ, ಕಿರಿಯ ಕುಸ್ತಿಪಟುಗಳಿದ್ದ ಹೋಟೆಲ್‌ನಲ್ಲಿ ಪಾರ್ಟಿ ಆಯೋಜಿಸಿದ್ದರು. ಬ್ರಿಜ್ ಭೂಷಣ್, ಅವರ ಸಹವರ್ತಿಗಳು ಕುಡಿದಿದ್ದರು. ಆಗ ಬಾಲಕಿಯರ ಜೊತೆ ಅನುಚಿತವಾಗಿ ವರ್ತಿಸಿದ್ದನ್ನು ಕಣ್ಣಾರೆ ಕಂಡಿದ್ದೇನೆ' ಎಂದರು.

ವಿದೇಶದಲ್ಲಿ ಭಾರತದ ಟೀಕೆ ಸರಿಯಲ್ಲ: ಶಾ

ಪಟನ್, ಗುಜರಾತ್ (ಪಿಟಿಐ): ವಿದೇಶಗಳಲ್ಲಿ ತನ್ನ ದೇಶವನ್ನು ಟೀಕಿಸುವುದು ಯಾವುದೇ ಪಕ್ಷದ ನಾಯಕನಿಗೂ ತಕ್ಕುದಾದ ವರ್ತನೆಯಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಉದ್ದೇಶಿಸಿ ಶನಿವಾರ ವಾಗ್ದಾಳಿ ನಡೆಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು ಒಂಬತ್ತು ವರ್ಷಗಳನ್ನು ಪೂರೈಸಿದ ಕಾರಣಕ್ಕೆ ಪಟನ್ ಜಿಲ್ಲೆಯ ಸಿದ್ಧ್‌ಪುರ ಪಟ್ಟಣದಲ್ಲಿ ಆಯೋಜಿಸಲಾಗಿದ್ದ ರ‍್ಯಾಲಿಯಲ್ಲಿ ಅಮಿತ್ ಶಾ ಮಾತನಾಡಿದರು.

ರಾಹುಲ್ ಅವರು ಅಮೆರಿಕಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದಾಗ ಮೋದಿ ನೇತೃತ್ವದ ಸರ್ಕಾರವನ್ನು ಟೀಕಿಸಿದ್ದನ್ನು ಉಲ್ಲೇಖಿಸಿ ಹೀಗೆ ಹೇಳಿದ್ದಾರೆ.

ಕನಸುಗಳು ಮೋದಿ ನನಸು: 'ಪ್ರಧಾನಿ ನರೇಂದ್ರ ಮೋದಿ ಅವರು ಹೊಸ ಶಿಕ್ಷಣ ಸಂಸ್ಥೆಗಳನ್ನು ತೆರೆದು, ಮನೆ ನಿರ್ಮಾಣಕ್ಕೆ ಸಹಾಯಧನ ನೀಡಿ ಮತ್ತು ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸುವ ಮೂಲಕ ಮಧ್ಯಮ ವರ್ಗದ ಜನರ ಕನಸುಗಳನ್ನು ಸಾಕಾರಗೊಳಿಸಿದ್ದಾರೆ ಎಂದು ಟ್ವೀಟ್ ಮಾಡಿದ್ದಾರೆ.

ದೇಶಭಕ್ತ ಮಕ್ಕಳ ಜನನಕ್ಕಾಗಿ ಆರ್‌ಎಸ್‌ಎಸ್‌ನಿಂದ 'ಗರ್ಭ ಸಂಸ್ಕಾರ' ಅಭಿಯಾನ

'ಗರ್ಭಿಣಿಯರಿಂದ ಗೀತೆ, ರಾಮಾಯಣ ಪಠಣ'

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಅಂಗ ಸಂಸ್ಥೆಯಾಗಿರುವ ರಾಷ್ಟ್ರಸೇವಿಕಾ ಸಂಘದ ಸಂವರ್ಧಿನಿ ನ್ಯಾಸ್ ಘಟಕವು ಇದೇ ಭಾನುವಾರ (ಜೂನ್ 11) 'ಗರ್ಭ ಸಂಸ್ಕಾರ' ಅಭಿಯಾನವನ್ನು ಆರಂಭಿಸಲಿದೆ.

ಗರ್ಭಿಣಿಯರಿಗೆ ಈ ಅಭಿಯಾನದಡಿ ಧಾರ್ಮಿಕ ಗ್ರಂಥಗಳಾದ ಭಗವದ್ಗೀತೆ ಮತ್ತು ರಾಮಾಯಣ ಓದಲು ಪ್ರೋತ್ಸಾಹಿಸಲಾಗುವುದು. ಅಷ್ಟೇ ಅಲ್ಲ, ಸಂಸ್ಕೃತ ಮಂತ್ರಗಳ ಉಚ್ಚಾರ ಹಾಗೂ ಯೋಗಾಭ್ಯಾಸ ಸಹ ಮಾಡಿಸಲಾಗುವುದು. ಇದರಿಂದ ಗರ್ಭಿಣಿಯರಿಗೆ ಸಂಸ್ಕಾರವಂತ ಹಾಗೂ ದೇಶಭಕ್ತ ಮಕ್ಕಳು ಜನಿಸುತ್ತವೆ. ಯೋಗಾಭ್ಯಾಸದಿಂದ ಗರ್ಭಿಣಿಯರಿಗೆ ಸಹಜ ಹೆರಿಗೆ ಆಗಲಿದೆ ಎಂದು ಘಟಕವು ಹೇಳಿದೆ.

ಈ ವರ್ಚುವಲ್ ಅಭಿಯಾನಕ್ಕೆ ಭಾನುವಾರ ಚಾಲನೆ ನೀಡಲಿದ್ದು, ತೆಲಂಗಾಣ ರಾಜ್ಯಪಾಲರಾದ ತಮಿಳ್ ಇಸೈ ಸೌಂದರರಾಜನ್ ಮತ್ತು ಇತರ ಗಣ್ಯರು ಉಪಸ್ಥಿತರಿರುತ್ತಾರೆ ಎಂದು ಸಂವರ್ಧಿನಿ ನ್ಯಾಸ್ ಘಟಕವು ತಿಳಿಸಿದೆ.

'ಗರ್ಭಸಂಸ್ಕಾರ ಕಾರ್ಯಕ್ರಮವನ್ನು ಸಮಗ್ರ ಮತ್ತು ವೈಜ್ಞಾನಿಕ ವಿಧಾನದೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಗರ್ಭಾವಸ್ಥೆಯಿಂದ ಹೆರಿಗೆಯವರೆಗೆ ಶಿಶುಗಳು ಗರ್ಭದಲ್ಲಿ ಸಂಸ್ಕಾರವನ್ನು (ಸಂಸ್ಕೃತಿ ಮತ್ತು ಮೌಲ್ಯಗಳು) ಕಲಿಯುತ್ತವೆ. ಈ ಕಲಿಕೆಯನ್ನು ಖಚಿತಪಡಿಸಿಕೊಳ್ಳಲು ಈ ಪ್ರಕ್ರಿಯೆಯು ಮಗುವಿಗೆ ಎರಡು ವರ್ಷ ಆಗುವವರೆಗೆ ಮುಂದುವರಿಸಲಾಗುವುದು. ಸಂವರ್ಧಿನಿ ನ್ಯಾಸ್ ಜೊತೆಗೆ ಕೆಲಸ ಮಾಡುವ ವೈದ್ಯರು ಈ ಕಾರ್ಯಕ್ರಮವನ್ನು ದೇಶದಾದ್ಯಂತ ಅನುಷ್ಠಾನಗೊಳಿಸುವರು' ಎಂದು ಸಂವರ್ಧಿನಿ ನ್ಯಾಸ್ ಪದಾಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ.



'ಸಂಸ್ಕಾರವಂತ ಮಗು ಜನಿಸಲು ಪೌಷ್ಟಿಕ ಆಹಾರ ಸೇವನೆ, ಉತ್ತಮ ವಾತಾವರಣ ಸೇರಿದಂತೆ ವಿವಿಧ ಅಂಶಗಳ ಕುರಿತು ಗರ್ಭಿಣಿಯರು ಮತ್ತು ಅವರ ಕುಟುಂಬಗಳಿಗೆ ಮಾರ್ಗದರ್ಶನ ನೀಡಲಾಗುವುದು' ಎಂದೂ ಅವರು ಹೇಳಿದ್ದಾರೆ.

'ಹುಟ್ಟುವ ಮಗು ಹೆಣ್ಣು ಅಥವಾ ಗಂಡು ಆಗಿರಲಿ, ಅದು ಒಳ್ಳೆಯ ಸಂಸ್ಕಾರ, ಒಳ್ಳೆಯ ಆಲೋಚನೆ ಮತ್ತು ದೇಶಭಕ್ತಿಯನ್ನು ಹೊಂದಿರಬೇಕು. ಜಗತ್ತಿಗೆ ಬರುವ ನಮ್ಮ ಮುಂದಿನ ಪೀಳಿಗೆಯು ಸೇವಾ ಭಾವನೆ, ಮೌಲ್ಯಗಳು ಮತ್ತು ಸಂಸ್ಕೃತಿಯೊಂದಿಗೆ ಬೆಳೆಯಬೇಕು ಹಾಗೂ ಮಹಿಳೆಯರಿಗೆ ಗೌರವ ನೀಡಬೇಕು. ಗರ್ಭಸಂಸ್ಕಾರ ಕಾರ್ಯಕ್ರಮವು ಭಾರತ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಲಿದೆ' ಎಂದು ಅವರು ತಿಳಿಸಿದ್ದಾರೆ.

ಭಾನುವಾರ, ಜೂನ್ 11, 2023 | ₹ 7.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿದ್ಯುತ್ ದರ ಏರಿಕೆ: ಏಪ್ರಿಲ್ 1ರಿಂದ ಪೂರ್ವಾನ್ವಯ

100 ಯೂನಿಟ್ ಮೀರಿದರೆ ದರ ₹7

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಪ್ರಸಕ್ತ ಸಾಲಿನ ಏಪ್ರಿಲ್ 1ರಿಂದ ಪೂರ್ವಾನ್ವಯವಾಗುವಂತೆ ವಿದ್ಯುತ್ ದರ ಹೆಚ್ಚಿಸಿ ಆದೇಶ ಹೊರಡಿಸಿದ್ದು, ಜೂನ್ ತಿಂಗಳಿನಿಂದ ಗ್ರಾಹಕರಿಗೆ ಎರಡು ಸ್ತರಗಳಲ್ಲಿ (ಸ್ಲ್ಯಾಬ್‌ಗಳಲ್ಲಿ) ವಿದ್ಯುತ್ ಯೂನಿಟ್ ದರ ನಿಗದಿಪಡಿಸಲಾಗಿದೆ.

ಕೆಇಆರ್‌ಸಿ ಮೇ 12ರಂದು ಹೊರಡಿಸಿದ ಆದೇಶದ ಪ್ರಕಾರ, ಗ್ರಾಹಕರು ಬಳಸಿದ 100 ಯೂನಿಟ್‌ವರೆಗಿನ ವಿದ್ಯುತ್‌ಗೆ ಪ್ರತಿ ಯೂನಿಟ್‌ಗೆ ₹4.15 ಪೈಸೆ ವಿಧಿಸಲಾಗುತ್ತದೆ. 100 ಯೂನಿಟ್ ಮೀರಿದರೆ, ಬಳಸಿದ ಅಷ್ಟೂ ಯೂನಿಟ್ ವಿದ್ಯುತ್‌ಗೆ ₹7ರಂತೆ ದರ ವಿಧಿಸಲಾಗುತ್ತದೆ. ಹೀಗಾಗಿ, ಜುಲೈ ತಿಂಗಳಲ್ಲಿ 100 ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಕೆ ಮಾಡಿದ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ₹7ರಂತೆ ದರ ಲೆಕ್ಕ ಹಾಕಿ ಬಿಲ್ ನೀಡಲಾಗಿದೆ ಎಂದು ಬೆಸ್ಕಾಂ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ನಾಲ್ಕು ಸ್ತರದ ವಿದ್ಯುತ್ ಬಿಲ್ ವ್ಯವಸ್ಥೆ ಎರಡೇ ಸ್ತರಕ್ಕೆ ಬದಲಾವಣೆ
- ಮೇ ತಿಂಗಳಿಗೆ ಹೋಲಿಸಿದರೆ ಜೂನ್ ತಿಂಗಳ ವಿದ್ಯುತ್ ಬಿಲ್ ಭಾರಿ ಏರಿಕೆ
- ನೂರಕ್ಕಿಂತ ಹೆಚ್ಚು ಯೂನಿಟ್ ಬಳಸುವವರಿಗೆ ದುಬಾರಿಯಾಗಲಿದೆ ವಿದ್ಯುತ್

ಇದರ ಜೊತೆಗೆ, ನಿಗದಿತ ವೆಚ್ಚ, ತೆರಿಗೆ, ದಂಡ ಮತ್ತು ಇಂಧನ ವೆಚ್ಚವನ್ನು ಪ್ರತ್ಯೇಕವಾಗಿ ಪಾವತಿಸಬೇಕು.

ವಿದ್ಯುತ್ ದರ ಏರಿಕೆ ಪ್ರಸ್ತಾವನೆಯನ್ನು ಎಸ್ಕಾಂಗಳು ಕೆಇಆರ್‌ಸಿ ಮುಂದೆ ಇಟ್ಟಿದ್ದರೂ ಚುನಾವಣೆ ನಡೆಯುತ್ತಿದ್ದ ಹೊತ್ತಿನಲ್ಲಿ ಅನುಮೋದನೆ ನೀಡಿರಲಿಲ್ಲ. ಫಲಿತಾಂಶದ ಮುನ್ನಾದಿನವಷ್ಟೇ (ಮೇ 12ರಂದು) ದರ ಏರಿಕೆಗೆ ಒಪ್ಪಿಗೆ ನೀಡಲಾಗಿತ್ತು.

ಕಡಿಮೆ ವಿದ್ಯುತ್ ಬಳಸುವವರಿಗೆ ಕಡಿಮೆ ದರ, ಹೆಚ್ಚು ವಿದ್ಯುತ್ ಬಳಕೆದಾರರಿಗೆ ಪ್ರತಿ ಯೂನಿಟ್‌ಗೆ ಹೆಚ್ಚಿನ ದರದ ಪದ್ಧತಿ ಇತ್ತು. ಹೀಗೆ ನಾಲ್ಕು ಸ್ತರಗಳಲ್ಲಿ ವಿಧಿಸುತ್ತಿದ್ದ ದರವನ್ನು ಎರಡು ಸ್ತರಕ್ಕೆ ಬದಲಾವಣೆ ಮಾಡಲಾಯಿತು. ಇದರಿಂದಾಗಿ, ಜೂನ್ ತಿಂಗಳಿನಲ್ಲಿ ನೀಡಲಾದ ವಿದ್ಯುತ್ ಬಿಲ್‌ನಲ್ಲಿ ಮೇ ತಿಂಗಳಿಗೆ ಹೋಲಿಸಿದರೆ ಭಾರಿ ಹೆಚ್ಚಳವಾಗಿದೆ.

100 ಯೂನಿಟ್ ಒಳಗಿನವರಿಗಷ್ಟೇ ಕಡಿಮೆ ಬಿಲ್ ಬಂದಿದೆ. 110 ಯೂನಿಟ್ ಬಳಸುತ್ತಿದ್ದವರಿಗೆ ಮೊದಲ 50 ಯೂನಿಟ್‌ವರೆಗೆ ₹4.10 ರಂತೆ ₹205, ನಂತರದ 50 ಯೂನಿಟ್‌ವರೆಗೆ ₹5.60 ರಂತೆ ₹280 ಹಾಗೂ 10 ಯೂನಿಟ್‌ಗೆ ತಲಾ ₹7.15 ರಂತೆ ₹71.50 ಸೇರಿ ₹556.50 ಬಿಲ್ ಬರುತ್ತಿತ್ತು. ಈಗ 110 ಯೂನಿಟ್ ಬಳಸಿದವರಿಗೆ ₹770 ಬಿಲ್ ಬಂದಿದೆ. ಅಂದರೆ ಏಕಾಏಕಿ ₹223.50 ಹೆಚ್ಚಳವಾದಂತಾಗಿದೆ. 100 ಯೂನಿಟ್‌ಗಿಂತ ಹೆಚ್ಚು ಬಳಸುವವರಿಗೆ ಪ್ರತಿ ಯೂನಿಟ್‌ಗೆ ₹7 ನಿಗದಿ ಮಾಡಿರುವುದರಿಂದ, 150 ಯೂನಿಟ್ ಬಳಸುವವರು ₹208 ಹೆಚ್ಚಿಗೆ ಪಾವತಿಸುವಂತಾಗಿದೆ.

ಪ್ರಧಾನಿ ಕಾರ್ಯಕ್ರಮಕ್ಕೆ ಜನರನ್ನು ಕರೆತಂದಿದ್ದ ಖಾಸಗಿ ಬಸ್‌ಗಳು

3 ತಿಂಗಳಾದರೂ ಬಸ್ ಚಾರ್ಜ್ ಕೊಟ್ಟಿಲ್ಲ!

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ಸೋಗಾನೆಯಲ್ಲಿ ನೂತನ ವಿಮಾನ ನಿಲ್ದಾಣ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಬಂದು, ಹೋಗಿ ಮೂರು ತಿಂಗಳು ಕಳೆದರೂ ಆಗ ಕಾರ್ಯಕ್ರಮಕ್ಕೆ ಜನರನ್ನು ಕರೆತಂದಿದ್ದ ಖಾಸಗಿ ಬಸ್‌ಗಳ ಮಾಲೀಕರಿಗೆ ಜಿಲ್ಲಾಡಳಿತ ಇನ್ನೂ ಹಣ ಪಾವತಿಸಿಲ್ಲ.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ಜನ್ಮದಿನದ ಅಂಗವಾಗಿ ಫೆ. 27ರಂದು ನಡೆದಿದ್ದ ಕಾರ್ಯಕ್ರಮಕ್ಕೆ 58 ಸಿಟಿ ಬಸ್, 14 ಶಾಲಾ ಬಸ್ ಸೇರಿ ಒಟ್ಟು 301 ಖಾಸಗಿ ಬಸ್‌ಗಳಲ್ಲಿ ಜನರನ್ನು ಕರೆತರಲಾಗಿತ್ತು. ಪ್ರತಿ ಕಿ.ಮೀಗೆ ₹43ರಂತೆ 300 ಕಿ.ಮೀ ಲೆಕ್ಕದಲ್ಲಿ ಹಣ ಪಾವತಿಸಬೇಕಿದೆ ಎಂದು ಜಿಲ್ಲಾಡಳಿತಕ್ಕೆ ಪಟ್ಟಿ ನೀಡಲಾಗಿದೆ. ಆ ಮಾಹಿತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ವಿಶೇಷವೆಂದರೆ ಇದೇ ಕಾರ್ಯಕ್ರಮಕ್ಕೆ ಜನರನ್ನು ಕರೆತರಲು ಬಳಕೆಯಾಗಿದ್ದ 1,200ಕ್ಕೂ ಹೆಚ್ಚು ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಜಿಲ್ಲಾಡಳಿತ ಹಣ ಪಾವತಿಸಿದೆ. 'ಕೆಎಸ್‌ಆರ್‌ಟಿಸಿಗೆ ಹಣ ಕೊಟ್ಟು ಎರಡು ತಿಂಗಳಾಯಿತು. ನಮಗೆ ಇನ್ನೂ ಹಣ ಪಾವತಿಸಿಲ್ಲ. ಹೊಸ ಸರ್ಕಾರ ಬಂದಿದೆ. ಈಗಲಾದರೂ ಹಣ ಕೊಡುತ್ತಾರೋ ಇಲ್ಲವೋ ನೋಡಬೇಕು' ಎಂದು ಖಾಸಗಿ ಬಸ್ ಮಾಲೀಕರು ಅಳಲು ತೋಡಿಕೊಂಡಿದ್ದಾರೆ.

ಅಧಿಕಾರಿ ಮಾಡಿದ ಯಡವಟ್ಟು?: ಮೋದಿ ಕಾರ್ಯಕ್ರಮಕ್ಕೆ ಜನರನ್ನು ಕರೆತಂದ ಖಾಸಗಿ ಬಸ್‌ಗಳ ಕುರಿತಾಗಿ ಅಧಿಕಾರಿಯೊಬ್ಬರು ಜಿಲ್ಲಾಡಳಿತಕ್ಕೆ ತಪ್ಪು ಲೆಕ್ಕ ನೀಡಿದ್ದರಿಂದಲೇ ಹಣ ಪಾವತಿ ವಿಳಂಬವಾಯಿತು. ಇಲ್ಲದಿದ್ದರೆ ಕೆಎಸ್‌ಆರ್‌ಟಿಸಿಗೆ ಹಣ ಪಾವತಿಸಿದಾಗಲೇ ಇವರಿಗೂ ಹಣ ನೀಡಲಾಗುತ್ತಿತ್ತು ಎಂದು ತಿಳಿದುಬಂದಿದೆ.

'ಅಧಿಕಾರಿ ಕೊಟ್ಟಿದ್ದ ಪಟ್ಟಿಯಲ್ಲಿರುವಷ್ಟು ಖಾಸಗಿ ಬಸ್‌ಗಳಲ್ಲಿ ಕಾರ್ಯಕ್ರಮಕ್ಕೆ ಜನರನ್ನು ಕರೆತಂದಿರಲಿಲ್ಲ. ಖಾಸಗಿಯವರು ತಾವು ಕಳುಹಿಸಿದ್ದ ಬಸ್‌ಗಳ ನಿಖರ ಪಟ್ಟಿ ಒದಗಿಸಿದ್ದರು. ಆದರೆ ಅಧಿಕಾರಿ ಬಸ್‌ಗಳ ಸಂಖ್ಯೆಯನ್ನು ಹೆಚ್ಚಾಗಿ ನಮೂದಿಸಿ ಆ ಪಟ್ಟಿಯನ್ನು ಜಿಲ್ಲಾಡಳಿತಕ್ಕೆ ರವಾನಿಸಿದ್ದಾರೆ. ಈ ವಿಷಯ ತಿಳಿದು ಖಾಸಗಿ ಬಸ್ ಮಾಲೀಕರ ಸಂಘದವರು ಅಚ್ಚರಿಗೆ ಒಳಗಾಗಿದ್ದಾರೆ. ಹೆಚ್ಚುವರಿ ಜಿಲ್ಲಾಧಿಕಾರಿಯನ್ನು ಭೇಟಿಯಾಗಿರುವ ಅವರು ವಾಸ್ತವ ಸಂಗತಿಯನ್ನು ವಿವರಿಸಿದ್ದಾರೆ. ಜಿಲ್ಲಾಡಳಿತವು ಸತ್ಯಾಸತ್ಯತೆ ಪರಿಶೀಲಿಸಲು ಮುಂದಾಗಿರುವುದರಿಂದ ಹಣ ಪಾವತಿ ವಿಳಂಬವಾಗಿದೆ' ಎಂದು ಮೂಲಗಳು ಹೇಳಿವೆ.

ಹಣದ ನಿರೀಕ್ಷೆಯಲ್ಲಿದ್ದೇವೆ: ಜಿಲ್ಲಾಧಿಕಾರಿ

'ಸರ್ಕಾರ ಕಾರ್ಯಕ್ರಮಕ್ಕೆ ಮೊದಲ ಕಂತಿನಲ್ಲಿ ಬಿಡುಗಡೆ ಮಾಡಿದ್ದ ಹಣವನ್ನು ಆದ್ಯತೆಯ ಮೇರೆಗೆ ಪಾವತಿ ಮಾಡಿದ್ದೇವೆ. ಎರಡನೇ ಕಂತಿನ ಹಣದ ನಿರೀಕ್ಷೆಯಲ್ಲಿದ್ದೇವೆ. ಅದು ಬಂದ ತಕ್ಷಣ ಖಾಸಗಿ ಬಸ್ ಮಾಲೀಕರಿಗೆ ಹಣ ಪಾವತಿಸಲಾಗುವುದು' ಎಂದು ಜಿಲ್ಲಾಧಿಕಾರಿ ಡಾ.ಆರ್. ಸೆಲ್ವಮಣಿ 'ಪ್ರಜಾವಾಣಿ'ಗೆ ತಿಳಿಸಿದರು.

ಖಾಸಗಿ ಬಸ್ ಮಾಲೀಕರಿಗೆ ಹಣ ಪಾವತಿಯಾಗದ ವಿಚಾರ ನನ್ನ ಗಮನಕ್ಕೆ ಬಂದಿರಲಿಲ್ಲ. ಕೂಡಲೇ ಜಿಲ್ಲಾಡಳಿತದೊಂದಿಗೆ ಮಾತನಾಡಿ ಹಣ ಕೊಡಿಸಲು ವ್ಯವಸ್ಥೆ ಮಾಡುವೆ

ಬಿ.ವೈ. ರಾಘವೇಂದ್ರ
ಸಂಸದ

ಬೇರೆ ಕಾಮಗಾರಿಗಳ ಬಿಲ್ ತಡೆ ಹಿಡಿದಂತೆ ಈ ಬಿಲ್ ತಡೆ ಹಿಡಿದರೆ ಏನು ಮಾಡುವುದು ಎಂಬುದು ಬಸ್ ಮಾಲೀಕರ ಆತಂಕ. ಶೀಘ್ರ ಹಣ ಪಾವತಿ ಭರವಸೆಯನ್ನು ಜಿಲ್ಲಾಧಿಕಾರಿ ನೀಡಿದ್ದಾರೆ

ಮೀಸೆ ರಂಗಪ್ಪ, ಶಿವಮೊಗ್ಗ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ

ವಿಧಾನ ಪರಿಷತ್ ಸದಸ್ಯ ಎಂ.ಟಿ.ಬಿ ನಾಗರಾಜ್ ಆರೋಪ

‘ಬೊಮ್ಮಾಯಿ ಮೋಸ ಮಾಡಿದ್ರು’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸುಧಾಕರ್‌ಗೆ ಜಿಲ್ಲಾ ಉಸ್ತುವಾರಿ ನೀಡಿದ್ದು ತಪ್ಪು ನಿರ್ಧಾರ: ಆರೋಪ
- ಕ್ಷೇತ್ರದ ಅಲ್ಪಸಂಖ್ಯಾತರು ನನಗೆ ಮತ ನೀಡಿಲ್ಲ
- ಲೋಕಸಭಾ ಚುನಾವಣೆಗೆ ನಾನು ಟಿಕೆಟ್ ಆಕಾಂಕ್ಷಿಯಲ್ಲ

ಹೊಸಕೋಟೆ: ‘ವಿಧಾನಸಭಾ ಚುನಾವಣೆಯಲ್ಲಿ ನಾನು ಸೋಲಲು ಚಿಕ್ಕಬಳ್ಳಾಪುರದ ಡಾ.ಕೆ.ಸುಧಾಕರ್ ಮಾತ್ರವಲ್ಲ, ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಸಹ ಕಾರಣ. ಅವರೂ ನನಗೆ ಮೋಸ ಮಾಡಿದರು. ಹಾಗಾಗಿ, ನಾನು ಸೋಲಬೇಕಾಯಿತು’ ಎಂದು ಹೊಸಕೋಟೆ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ, ವಿಧಾನ ಪರಿಷತ್ ಸದಸ್ಯ ಎಂ.ಟಿ.ಬಿ ನಾಗರಾಜ್ ನೇರವಾಗಿ ವಾಗ್ದಾಳಿ ನಡೆಸಿದ್ದಾರೆ.

ನಗರದಲ್ಲಿ ಶನಿವಾರ ನಡೆದ ಬಿಜೆಪಿ ಆತ್ಮಾವಲೋಕನ ಸಭೆಯಲ್ಲಿ ಮಾತನಾಡಿದ ಅವರು, ‘ಮುಂದಿನ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆಗೆ ನಾನು ಆಕಾಂಕ್ಷಿ ಅಲ್ಲ. ಚುನಾವಣೆಗೆ ಸ್ಪರ್ಧಿಸುವ ಆಸಕ್ತಿಯೂ ಇಲ್ಲ’ ಎಂದು ಸ್ಪಷ್ಟಪಡಿಸಿದರು.

‘ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಸ್ತುವಾರಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಿಕ್ಕಬಳ್ಳಾಪುರದ ಡಾ.ಕೆ.ಸುಧಾಕರ್ ಅವರಿಗೆ ನೀಡಿದರು. ಆ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವ ಸುವರ್ಣ ಅವಕಾಶ ತಪ್ಪಿಸಿ ಮೋಸ ಮಾಡಿದರು’ ಎಂದು ಹರಿಹಾಯ್ದರು.

‘ಹೊಸಕೋಟೆ ತಾಲ್ಲೂಕಿನ ಪಕ್ಷದ ಮುಖಂಡರಿಗೆ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ಸೇರಿದಂತೆ ಸರ್ಕಾರದಲ್ಲಿ ಸ್ಥಾನಮಾನ ನೀಡಲಿಲ್ಲ. ಸ್ಥಳೀಯ ಕೆಲವರಿಗಾದರೂ ಅವಕಾಶ ನೀಡಿದ್ದಿದ್ದರೆ ನನ್ನ ಕೈ ಮತ್ತಷ್ಟು ಬಲಗೊಳ್ಳುತ್ತಿತ್ತು. ಆದರೆ ಹಾಗಾಗಲಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.



ಎಂ.ಟಿ.ಬಿ.ನಾಗರಾಜ್

ಆರಂಭದಿಂದ ಕೊನೆಯವರೆಗೂ ನೋವಿನಿಂದ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಸೋಲಿಗೆ ಯಾರ್‍ಯಾರು ಕಾರಣ ಎಂದು ಹೇಳಿದರು. ಸ್ವಪಕ್ಷೀಯರ ವಿರುದ್ಧ ವಾಗ್ದಾಳಿ ನಡೆಸಿದ ಅವರು, ನಂತರ ಕ್ಷೇತ್ರದ ಮುಸ್ಲಿಮರನ್ನು ತರಾಟೆಗೆ ತೆಗೆದುಕೊಂಡರು.

‘ನಾನು ಅಪಾರವಾಗಿ ನಂಬಿದ್ದ ಕ್ಷೇತ್ರದ ಅಲ್ಪಸಂಖ್ಯಾತರು ಕೂಡ ಚುನಾವಣೆಯಲ್ಲಿ ನನಗೆ ಮೋಸ ಮಾಡಿದರು. ನನಗೇ ಮತ ನೀಡುವುದಾಗಿ ಕುರಾನ್ ಮತ್ತು ಅಲ್ಲಾಹುವಿನ ಮೇಲೆ ಆಣೆ, ಪ್ರಮಾಣ ಮಾಡಿದ್ದ ಅವರು ನನಗೆ ಮತ ನೀಡದೆ ಮೋಸ ಮಾಡಿದರು. ಇನ್ನೆಂದಿಗೂ ಅವರನ್ನು ನಾನು ನಂಬುವುದಿಲ್ಲ’ ಎಂದು ಹೇಳಿದರು.

‘ನನ್ನ ಕ್ಷೇತ್ರದ ಅಲ್ಪಸಂಖ್ಯಾತರಿಗೆ ನಾನು ನನ್ನ ಶಕ್ತಿ ಮೀರಿ ಸಹಾಯ ಮಾಡಿದ್ದೇನೆ. ಆದರೂ, ಅವರು ನನಗೆ ಮೋಸ ಮಾಡಿದರು. ಮುಸ್ಲಿಮರು ಬಿಜೆಪಿಗೆ ಮತ ಹಾಕಲಿಲ್ಲ. ಬಿಜೆಪಿ ನೀಡಿದ ನೋಟು ಪಡೆದು ಅವರು ಕಾಂಗ್ರೆಸ್‌ಗೆ ವೋಟು ಹಾಕಿದರು. ಕಳೆದ ಮೂರು ಚುನಾವಣೆಗಳಲ್ಲಿ ಬಿಜೆಪಿ ನೀಡಿದ ಎಲ್ಲಾ ಸವಲತ್ತು ಪಡೆದು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದ್ದಾರೆ’ ಎಂದು ಅಸಮಾಧಾನ ಹೊರ ಹಾಕಿದರು. ‘ಕ್ಷೇತ್ರದಲ್ಲಿ ಕಾರ್ಯಕರ್ತರ ಕಷ್ಟಗಳಿಗೆ ಸ್ಪಂದಿಸುತ್ತೇನೆ. ಯಾವುದೇ ಕಾರಣಕ್ಕೂ ಕಾರ್ಯಕರ್ತರು ಎದೆಗುಂದಬೇಡಿ. ನಾನು ಹೊಸಕೋಟೆಯಲ್ಲಿಯೇ ಇರುತ್ತೇನೆ’ ಎಂದು ಅಭಯ ನೀಡಿದರು.

ತಾಲ್ಲೂಕು ಮುಖಂಡರು ಇದ್ದರು.

ರೇಷ್ಮೆ ಹುಳು ಸಾವು: ಇಳುವರಿ ಕುಸಿತ?

ಮೊಳಕಾಲ್ಮುರು: ರೋಗಕ್ಕೆ ‘ಬೈವೋಲ್ಟೇನ್’ ರೇಷ್ಮೆ ಗೂಡು ಬೆಳೆಗಾರರು ತತ್ತರ

• ಕೊಂಡ್ಲಹಳ್ಳಿ ಜಯಪ್ರಕಾಶ

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): ಗೂಡುಕಟ್ಟುವ ಹಂತದಲ್ಲಿ ರೇಷ್ಮೆ ಹುಳುಗಳು ಏಕಾಏಕಿ ಸಾಯುತ್ತಿರುವ ಪರಿಣಾಮವಾಗಿ ಬಿಳಿ ರೇಷ್ಮೆಗೂಡು (ಬೈವೋಲ್ಟೋನ್) ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ವರ್ಷದಿಂದ ಬಾಧಿಸುತ್ತಿದ್ದ ‘ಸಪ್ಪೆರೋಗ’ ಮತ್ತು ‘ಹಾಲುರೋಗ’ ಐದು ತಿಂಗಳಿಂದ ಉಲ್ಬಣಗೊಂಡಿದೆ. ಇದರಿಂದ ಬೇಸತ್ತಿರುವ ಬೆಳೆಗಾರರು ಬೆಳೆ ನಾಶಕ್ಕೆ ಮುಂದಾಗಿದ್ದಾರೆ.

ರೇಷ್ಮೆಗೂಡಿನ ಉತ್ಪಾದನಾ ಅವಧಿ 21 ದಿನ. ಆದರೆ, 14-15 ದಿನಕ್ಕೇ ರೋಗ ಬಾಧಿಸುತ್ತಿದೆ. ಹುಳುಗಳು ಸೊಪ್ಪು ತಿನ್ನದೆಯೇ ನಿತ್ರಾಣಗೊಂಡು ಸಾಯುತ್ತಿವೆ. ಬದುಕುಳಿದ ಹುಳುಗಳು ಚಂದ್ರಿಕೆಯಲ್ಲಿ ಸರಿಯಾಗಿ ಗೂಡು ಕಟ್ಟುತ್ತಿಲ್ಲ. ಹೀಗಾಗಿ ಕಡಿಮೆ ದರಕ್ಕೆ ಗೂಡು ಮಾರುವ ಅನಿವಾರ್ಯತೆ ಸೃಷ್ಟಿಯಾಗಿದೆ.

‘ಮೊದಲೆಲ್ಲಾ ಪ್ರತಿ 100 ಮೊಟ್ಟೆಗೆ 100 ರಿಂದ 120 ಕೆ.ಜಿ ಇಳುವರಿ



ಮೊಳಕಾಲ್ಮುರು ತಾಲ್ಲೂಕಿನ ಸಾಕಣೆ ಮನೆಯಲ್ಲಿ ಸತ್ತಿರುವ ರೇಷ್ಮೆ ಹುಳುಗಳು

ಲಭಿಸುತ್ತಿತ್ತು. ರೋಗ ಬಾಧೆಯಿಂದಾಗಿ ಇದು 25 ರಿಂದ 50 ಕೆ.ಜಿ.ಗೆ ಕುಸಿತವಾಗಿದೆ’ ಎಂದು ಕೊಂಡ್ಲಹಳ್ಳಿಯ ಬೆಳೆಗಾರ ಎಚ್.ಎನ್. ಮಂಜುನಾಥ್ ಬೇಸರ ವ್ಯಕ್ತಪಡಿಸಿದರು.

‘ಹುಳು ಸಾಕಣೆಗೆಂದೇ ₹ 20 ಲಕ್ಷದಿಂದ ₹ 30 ಲಕ್ಷ ವ್ಯಯಿಸಿ, ರೇಷ್ಮೆ ಸಾಕಣೆ ಮನೆ ನಿರ್ಮಿಸಿಕೊಂಡಿರುವವರು ಈಗ ದಿಕ್ಕು ತೋಚದಾಗಿದ್ದಾರೆ. ಹುಳುಗಳು ಆರಂಭದಲ್ಲೇ ಮೃತಪಟ್ಟರೆ ನಷ್ಟ ಕಡಿಮೆ. ಅವು ಕೊನೆ ಕ್ಷಣದಲ್ಲಿ ಸಾಯುತ್ತಿರುವುದರಿಂದ ಖರ್ಚು ಮಾಡಿರುವವರು ಸಂಕಷ್ಟಕ್ಕೆ ಸಿಲುಕುವಂತಾಗಿದೆ’ ಎಂದು ಅವರು ಹೇಳಿದರು.

‘ಈಗೀಗ ಹುಳು ತಂದುಕೊಡುವವರ ಸಂಖ್ಯೆ ಹೆಚ್ಚಾಗಿದೆ. ರೋಗ ಬಾಧೆಗೆ ಅದು ಕೂಡ ಕಾರಣವಾಗಿರಬಹುದು. ರೇಷ್ಮೆ ಹುಳು 28 ಡಿಗ್ರಿ ಗರಿಷ್ಠ ಉಷ್ಣಾಂಶ ತಡೆದುಕೊಳ್ಳುವ ಶಕ್ತಿ ಹೊಂದಿದೆ. ಆದರೆ, ಈ ವರ್ಷ 36 ರಿಂದ 38 ಡಿಗ್ರಿಯಷ್ಟು ತಾಪಮಾನ ಇದ್ದು, ಗುಣಮಟ್ಟದ ಸೊಪ್ಪು ಉತ್ಪಾದನೆ, ಹುಳು ಆರೋಗ್ಯದ ಮೇಲೆ ಪರಿಣಾಮ ಬೀರಿದೆ’ ಎಂದು ರೇಷ್ಮೆ ವಿಸ್ತರಣಾಧಿಕಾರಿ ಮಹೇಶ್ ವಿವರಿಸಿದರು.

‘2022ರ ಡಿಸೆಂಬರ್‌ನಲ್ಲಿ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಪ್ರಥಮವಾಗಿ ಈ ರೋಗ ವರದಿಯಾಗಿತ್ತು. ಈಚೆಗೆ ಎಲ್ಲೆಡೆ ವ್ಯಾಪಿಸಿದೆ. ರೇಷ್ಮೆ ಕೃಷಿ ವಿಜ್ಞಾನಿಗಳ ಗಮನಕ್ಕೆ ತರಲಾಗಿದೆ. ಈವರೆಗೆ ಕಾರಣ ತಿಳಿಸಿಲ್ಲ. ರೇಷ್ಮೆ ಸೊಪ್ಪಿಗೆ ರೋಗ ಕಾಣಿಸಿಕೊಂಡಲ್ಲಿ ಯಾವ ಔಷಧ ಸಿಂಪಡಣೆ ಮಾಡಬೇಕು ಎಂದು ಇಲಾಖೆ ಸೂಚಿಸಿಲ್ಲ. ಕೀಟನಾಶಕದ ಅಂಗಡಿಯವರು ನೀಡುವ ಔಷಧ ಸಿಂಪಡಿಸುತ್ತಿರುವ ಕಾರಣಕ್ಕೂ ಹುಳುಗಳು ಸಾಯುತ್ತಿವೆ’ ಎಂದು ಹಲವು ವರ್ಷಗಳಿಂದ ಹುಳು ಸರಬರಾಜು ಮಾಡುತ್ತಿರುವ ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಕಿರಣಗೆರೆ ಛಾಕಿಕೇಂದ್ರದ (ಹುಳು ಸಾಕಣೆ ಕೇಂದ್ರ) ಮಾಲೀಕ ವಿಜಯ್ ಎಚ್. ಗೌಡ ಹೇಳಿದರು.

ಗಿಡಕ್ಕೂ ರೋಗ: ‘ಹಿಪ್ಪುನೇರಳೆ ಗಿಡ ಒಣಗುವ ರೋಗವೂ ಕಾಣಿಸಿಕೊಂಡಿದೆ. ಅಧಿಕಾರಿಗಳ ಸಲಹೆಯಂತೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಂಡರೂ ಪ್ರಯೋಜನವಾಗಿಲ್ಲ. ಪ್ರತಿ ಎಕರೆಯಲ್ಲಿ ಶೇ 20ರಷ್ಟು ಗಿಡಗಳು ರೋಗಕ್ಕೆ ಬಲಿಯಾಗುತ್ತಿವೆ. ಈಗ ಒಂದು ಕೆ.ಜಿ ಗೂಡು ₹ 400 ರಿಂದ ₹ 450ಕ್ಕೆ ಮಾರಾಟವಾಗುತ್ತಿದ್ದು, ಖರ್ಚು ಕೂಡ ವಾಪಸ್ ಬರುತ್ತಿಲ್ಲ’ ಎಂದು ಬೆಳೆಗಾರ ಬಿ.ಟಿ. ಹನುಮರೆಡ್ಡಿ ಹೇಳಿದರು.



ಭಾಗವತರು ಸಂಘಟನೆ ನಗರದಲ್ಲಿ ಶನಿವಾರ ಆಯೋಜಿಸಿದ್ದ ‘ಸುವರ್ಣ ರಂಗಪಥ’ ಕಲಾಗಂಗೋತ್ರಿ ನಾಟಕೋತ್ಸವದಲ್ಲಿ ಕಲಾವಿದ ‘ಮುಖ್ಯಮಂತ್ರಿ’ ಚಂದ್ರು ಹಾಗೂ ಪದ್ಮಾ ದಂಪತಿ, ರಂಗಕರ್ಮಿ ಬಿ.ವಿ. ರಾಜಾರಾಂ ಹಾಗೂ ಸಂಧ್ಯಾ ದಂಪತಿಗೆ ‘ರಂಗ ಗೌರವ’ ಸಲ್ಲಿಸಲಾಯಿತು. (ಎಡದಿಂದ) ನಾಟಕೋತ್ಸವದ ಸಂಘಟಕ ಚಂದ್ರೇಗೌಡ, ಲೇಖಕಿ ವಿಜಯಾ, ರಂಗಕರ್ಮಿ ಶಶಿಧರ್ ಭಾರೀಘಾಟ್, ಶಿವಲಿಂಗ ಪ್ರಸಾದ್, ಚಲನಚಿತ್ರ ಕಲಾವಿದ ಎಚ್.ಜಿ. ದತ್ತಾತ್ರೇಯ (ದತ್ತಣ್ಣ), ಭಾಗವತರು ಸಂಘಟನೆಯ ಅಧ್ಯಕ್ಷ ಕೆ. ರೇವಣ್ಣ ಹಾಗೂ ಪತ್ನಿ ರೂಪಾ, ಪ್ರಾಧ್ಯಾಪಕ ಕೆ.ವೈ. ನಾರಾಯಣಸ್ವಾಮಿ ಇದ್ದರು –ಪ್ರಜಾವಾಣಿ ಚಿತ್ರ

ಕನಿಷ್ಠ ಪಿಂಚಣಿಗೆ 24ಕ್ಕೆ ಬೃಹತ್ ಸಮಾವೇಶ

ಬೆಂಗಳೂರು: ಕನಿಷ್ಠ ₹7,500 ಪಿಂಚಣಿ ನಿಗದಿ, ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜೂನ್ 24ರಂದು ರಾಜಾಜಿನಗರದಲ್ಲಿರುವ ರಾಮ ಮಂದಿರ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಸಲಾಗುವುದು ಎಂದು ಇಪಿಎಸ್–95, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಕಾರ್ಯಾಧ್ಯಕ್ಷ ನಂಜುಂಡೇಗೌಡ ತಿಳಿಸಿದರು.

ಲಾಲ್‌ಬಾಗ್ ಆವರಣದಲ್ಲಿ ಜರುಗಿದ ಇಪಿಎಸ್–95 ಪಿಂಚಣಿದಾರರ ಮಾಸಿಕ ಸಭೆಯಲ್ಲಿ ಅವರು ಮಾತನಾಡಿದರು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇರುವ ಮಾರ್ಗೋಪಾಯಗಳ ಬಗ್ಗೆ ಸಂಘದ ಉಪಾಧ್ಯಕ್ಷ ಆರ್. ಸುಬ್ಬಣ್ಣ ಮಾಹಿತಿ ನೀಡಿದರು. ಅಶೋಕ್ ರಾವತ್ ನೇತೃತ್ವದ ಹೋರಾಟದಲ್ಲಿ ಎಲ್ಲರೂ ಭಾಗಿಯಾಗಿ ಕನಿಷ್ಠ ಪಿಂಚಣಿಗಾಗಿ ಹೋರಾಟ ಮುಂದುವರಿಸಬೇಕು ಎಂದು ಮನವಿ ಮಾಡಿದರು.

ಸಂಘದ ಪದಾಧಿಕಾರಿಗಳಾದ ಡೋಲಪ್ಪ, ಕೆ.ಆರ್. ರಂಗನಾಥ್, ಆರ್. ಮನೋಹರ್, ರುಕ್ಮಿಶ್, ಆರ್. ನಾಗರಾಜು ಇದ್ದರು.

ಇಂದಿರಾ ಕ್ಯಾಂಟೀನ್ ಗುಣಮಟ್ಟ ಪರಿಶೀಲನೆ

ಬೆಂಗಳೂರು: ಇಂದಿರಾ ಕ್ಯಾಂಟೀನ್‌ನಲ್ಲಿನ ಆಹಾರದ ಗುಣಮಟ್ಟವನ್ನು ಪರೀಕ್ಷಿಸಲು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅಲ್ಲಿನ ರೈಸ್‌ಬಾತ್ ಸವಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿರಾ ಕ್ಯಾಂಟೀನ್ ಆಹಾರದ ಗುಣಮಟ್ಟದ ಬಗ್ಗೆ ಪರಿಶೀಲಿಸಲು ಸೂಚಿಸಿದರು. ಡೇರಿ ವೃತ್ತದ ಬಳಿಯ ಇಂದಿರಾ ಕ್ಯಾಂಟೀನ್‌ಗೆ ಶನಿವಾರ ಭೇಟಿ ನೀಡಿದ್ದ ರಾಕೇಶ್ ಸಿಂಗ್, ಅಲ್ಲಿನ ಸೌಲಭ್ಯ ಹಾಗೂ ಸ್ವಚ್ಛತೆಯನ್ನು ಪರಿಶೀಲಿಸಿದರು. ಕೆಲವು ನ್ಯೂನತೆ ಕಂಡುಬಂದ ಹಿನ್ನೆಲೆಯಲ್ಲಿ ಸರಿಪಡಿಸಲು ಸೂಚಿಸಿದರು.

ಕೆಲವರ ಹಿಡಿತದಲ್ಲಿರುವ ಬಿಜೆಪಿ: ಜಗದೀಶ ಶೆಟ್ಟರ್ ಆರೋಪ

‘ಬಿಜೆಪಿಗೆ ಮತ್ತೆ ಸೋಲಿನ ಪಾಠ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಕೆಲವರ ಹಿಡಿತದಲ್ಲಿರುವ ಬಿಜೆಪಿಯು ವಿಧಾನಸಭೆ ಚುನಾವಣೆಯ ಸೋಲಿನ ಪಾಠದಿಂದ ಬುದ್ಧಿ ಕಲಿಯದಿದ್ದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲೂ ಮತ್ತೆ ಪಾಠ ಕಲಿಯಬೇಕಾಗುತ್ತದೆ’ ಎಂದು ಕಾಂಗ್ರೆಸ್ ಮುಖಂಡ ಜಗದೀಶ್ ಶೆಟ್ಟರ್ ಮಾರ್ಮಿಕವಾಗಿ ನುಡಿದರು.

ನಗರದಲ್ಲಿ ಶನಿವಾರ ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಡಾ.ಬಿ.ಆರ್. ಅಂಬೇಡ್ಕರ್ ಪೀಠ ಏರ್ಪಡಿಸಿದ್ದ ‘16ನೇ ವಿಧಾನಸಭೆ ಚುನಾವಣೆ: ಪ್ರಭಾವ, ಪರಿಣಾಮ ಮತ್ತು ಭವಿಷ್ಯದ ರಾಜಕೀಯ ಆಯಾಮಗಳು’ ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ‘ರಾಜ್ಯ ಬಿಜೆಪಿ ಈಗಲೂ ಅದೇ ಕೆಲವರ ಹಿಡಿತದಲ್ಲೇ ಇದೆ. ಯಾವುದೇ ರಾಜಕೀಯ ಪಕ್ಷಕ್ಕೆ ಸ್ಥಳೀಯ ನಾಯಕತ್ವವಿರಬೇಕು. ರಾಮಮಂದಿರ ಚಳವಳಿ ಶುರುವಾದ ನಂತರ ಕರ್ನಾಟಕದಲ್ಲಿ ಬಿಜೆಪಿ ಬೆಳವಣಿಗೆ ಕಾಣಲು, ಇಲ್ಲಿ ಸ್ಥಳೀಯ ಮುಖಂಡರಿದ್ದರು. ಆದರೆ, ಆಂಧ್ರಪ್ರದೇಶ, ತಮಿಳುನಾಡು, ಕೇರಳದಲ್ಲಿ ಸ್ಥಳೀಯ ನಾಯಕತ್ವದ ಕೊರತೆಯಿಂದ ಪಕ್ಷ ಬೆಳೆಯಲಿಲ್ಲ’ ಎಂದು ಪ್ರತಿಪಾದಿಸಿದರು.

‘ನರೇಂದ್ರ ಮೋದಿ ಅವರ ಪ್ರಭಾವವಿದ್ದರೂ ದಕ್ಷಿಣದ ರಾಜ್ಯಗಳಲ್ಲಿ ಬಿಜೆಪಿ ಅಧಿಕ ಸ್ಥಾನ ಗಳಿಸದಿರಲು ನಾಯಕತ್ವದ ಕೊರತೆಯೇ ಕಾರಣ’ ಎಂದರು.

‘ಬೆಲೆ ಏರಿಕೆ, ನಿರುದ್ಯೋಗ, ವಸತಿ ಸಮಸ್ಯೆಯಂಥ ಹಲವು ಕಾರಣಗಳಿಂದ ವಿಧಾನಸಭೆ ಚುನಾವಣೆಯಲ್ಲಿ ಜನ ಕಾಂಗ್ರೆಸ್ ಬೆಂಬಲಿಸಿದರು. ‘ಗ್ಯಾರಂಟಿ’ ಪ್ರಣಾಳಿಕೆಯೂ ಕೆಲಸ ಮಾಡಿತು. ಈಗಿನ ಸರ್ಕಾರ ಗೊಂದಲವಿಲ್ಲದೆ ಪ್ರಾಮಾಣಿಕವಾಗಿ ಜನಪರ ಆಡಳಿತ ನೀಡಿದರೆ ಮಾತ್ರ ಮುಂದಿನ ಚುನಾವಣೆಯಲ್ಲಿಯೂ ಅಧಿಕಾರ ಹಿಡಿಯಲು ಸಾಧ್ಯ’ ಎಂದರು.

ಎದೆಯಲ್ಲಿ ಬೆಂಕಿ ಬೀಳುವುದಿಲ್ಲವೇ?

‘ದೇಶದ ಎಲ್ಲ ರಾಜ್ಯಗಳಿಗಿಂತ ಕರ್ನಾಟಕ ಪ್ರಬುದ್ಧವಾಗಿದೆ. ಯೋಚನೆ, ಉತ್ಪಾದನೆ, ಅಭಿವ್ಯಕ್ತಿ ಕ್ರಮದಲ್ಲಿ ರಾಜ್ಯ ಮುಂಚೂಣಿಯಲ್ಲಿದೆ. ಪರಿಸ್ಥಿತಿ ಹೀಗಿರುವಾಗ ಕೆಲವು ಮುಖಂಡರು ರಾಜ್ಯದ ಪ್ರೌಢಿಮೆ ತಿಳಿಯದೆ ಕರ್ನಾಟಕದಲ್ಲಿ ಗುಜರಾತ್ ಮಾಡೆಲ್, ಉತ್ತರಪ್ರದೇಶ ಮಾಡೆಲ್ ಮಾಡುತ್ತೇವೆ ಎಂದು ಹೇಳಿದ ಮಾತು ನನ್ನೆದೆಗೆ ಚೂರಿ ಇರಿದಂತಾಯಿತು. ಎದ್ದೇಳು ಕರ್ನಾಟಕ ಅಭಿಯಾನ ಆರಂಭಿಸಲು, ಸಕ್ರಿಯವಾಗಿ ತೊಡಗಿಸಿಕೊಳ್ಳಲು ಇದು ಕಾರಣವಾಯಿತು’ ಎಂದು ಎದ್ದೇಳು ಕರ್ನಾಟಕ ಅಭಿಯಾನಕ್ಕೆ ಕಾರಣವಾದ ಅಂಶಗಳನ್ನು ಪ್ರಗತಿಪರ ಚಿಂತಕ ಪ್ರೊ.ಪುರುಷೋತ್ತಮ ಬಿಳಿಮಲೆ ಬಿಡಿಸಿಟ್ಟರು.

ಆಶಯ ಮಾತುಗಳನ್ನಾಡಿದ ಅವರು, ‘ರಾಜ್ಯದಲ್ಲಿ 72 ಭಾಷೆಗಳಿವೆ. ಬಹು ಧರ್ಮಗಳಿರುವ ರಾಜ್ಯವಿದು. ಎಲ್ಲರನ್ನೂ ಒಳಗೊಳ್ಳುವುದು ನಮ್ಮ ರಾಜ್ಯದ ಸಂಸ್ಕೃತಿ. ಕುವೆಂಪು ಸರ್ವ ಜನಾಂಗದ ಶಾಂತಿಯ ತೋಟ ಎಂದು ಕರೆದರು. ಆದರೆ, ಅದನ್ನು ಯಾರೋ ಒಬ್ಬ ಒಡೆಯಲು ಯತ್ನಿಸಿದಾಗ, ನನ್ನ ಎದೆಯಲ್ಲಿ ಬೆಂಕಿ ಬೀಳುವುದಿಲ್ಲವೇ’ ಎಂದರು.



ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಡಾ. ಬಿ.ಆರ್. ಅಂಬೇಡ್ಕರ್ ಪೀಠ ಮೈಸೂರಿನಲ್ಲಿ ಶನಿವಾರ ಏರ್ಪಡಿಸಿದ್ದ ‘16ನೇ ವಿಧಾನಸಭೆ ಚುನಾವಣೆ: ಪ್ರಭಾವ, ಪರಿಣಾಮ ಮತ್ತು ಭವಿಷ್ಯದ ರಾಜಕೀಯ ಆಯಾಮಗಳು’ ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಜಗದೀಶ ಶೆಟ್ಟರ್ ಅವರಿಗೆ ಕಾರ್ಯಕ್ರಮದ ಸಂಘಟಕರು ಸಂವಿಧಾನದ ಪ್ರಸ್ತಾವನೆಯನ್ನು ನೀಡಿದರು. ಪ್ರೊ.ಎಸ್. ನರೇಂದ್ರ ಕುಮಾರ್, ಪ್ರೊ.ಜೆ. ಸೋಮಶೇಖರ್, ಪ್ರೊ.ಆರ್. ಇಂದಿರಾ, ಪುರುಷೋತ್ತಮ ಬಿಳಿಮಲೆ ಇದ್ದಾರೆ – ಪ್ರಜಾವಾಣಿ ಚಿತ್ರ

ಭಾನುವಾರ, ಜೂನ್ 11, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 161 | ಪುಟ 24
• www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



'ಇಂಧನ ದರ: ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲ' 5
ಅಮೆಜಾನ್ ಕಾಡಿನಲ್ಲಿ ಲಘು ವಿಮಾನ ಪತನ ಪ್ರಕರಣ
ಹಣಕಾಸು, ಆಟೊ ವಲಯ: ಹೆಚ್ಚಿದ ವಿದೇಶಿ ಹೂಡಿಕೆ 5
40 ದಿನ ಬಳಿಕ ನಾಲ್ವರು ಮಕ್ಕಳು ಜೀವಂತ ಪತ್ತೆ 5

ಕಾಮೆಡ್‌–ಕೆ ನಂದ ಗೋಪಿಕೃಷ್ಣ ಮೊದಲಿಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾ ಮೆ ಡ್ - ಕೆ) ಶನಿವಾರ ಯುಜಿಇಟಿ ಫಲಿತಾಂಶ ಪ್ರಕಟಿಸಿದ್ದು, ಮೊದಲ 10ರಲ್ಲಿ ಪ್ರಥಮ ರ‍್ಯಾಂಕ್ ಸೇರಿದಂತೆ ಕರ್ನಾಟಕದ ವಿದ್ಯಾರ್ಥಿಗಳು ಐದು ರ‍್ಯಾಂಕ್‌ಗಳನ್ನು ಪಡೆದುಕೊಂಡಿದ್ದಾರೆ.


ನಂದ ಗೋಪಿಕೃಷ್ಣ

ಬೆಂಗಳೂರಿನ ಡಿಪಿಎಸ್ ಕಾಲೇಜು ವಿದ್ಯಾರ್ಥಿ ಎನ್.ನಂದ ಗೋಪಿಕೃಷ್ಣ ಪ್ರಥಮ ರ‍್ಯಾಂಕ್, ಹರಿಯಾಣ ಗುರುಗಾಂವ್‌ನ ಮನುಸ್ ಅಗರ್‌ವಾಲ್ ಹಾಗೂ ಬೆಂಗಳೂರು ಬನಶಂಕರಿಯ ಸಿದ್ಧಾರ್ಥ್ ಪಮಿಡಿ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ರ‍್ಯಾಂಕ್ ಪಡೆದಿದ್ದಾರೆ.

5ನೇ ಪುಟ ನೋಡಿ

ಸಂಸದ ಸ್ಥಾನ ತೊರೆದ ಬೋರಿಸ್ ಜಾನ್ಸನ್ 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ದಕ್ಷಿಣ ರಾಜ್ಯಗಳ ಪೈಕಿ ಕರ್ನಾಟಕದಲ್ಲಿಯೇ ಅತಿಹೆಚ್ಚು ತಾಯಂದಿರ ಸಾವು

ತಾಯ್ತನ ಸುರಕ್ಷೆಯೇ ಮರೀಚಿಕೆ

• ಕೆ.ಎಚ್. ಓಬಳೇಶ್

ಬೆಂಗಳೂರು: 2022ರ ಜುಲೈ ತಿಂಗಳ ಕೊನೆಯ ದಿನ. ಕುಣಿಗಲ್ ಸಮೀಪದ ತೆರೆದಕೊಪ್ಪ ಗ್ರಾಮದ ಗರ್ಭಿಣಿ ಪಲ್ಲವಿಗೆ ಹೆರಿಗೆ ನೋವು ಕಾಣಿಸಿತು. ತಕ್ಷಣವೇ ಮನೆಯವರು ಆಕೆಯನ್ನು ತಾಲ್ಲೂಕು ಆಸ್ಪತ್ರೆಗೆ ದಾಖಲಿಸಿದರು. ವೈದ್ಯರು ಚಿಕಿತ್ಸೆ ಪ್ರಾರಂಭಿಸಿದರು. ಆಕೆ ಗಂಡು ಮಗುವಿಗೆ ಜನ್ಮವಿತ್ತಳು. ತಾಯಿ, ಮಗು ಚೆನ್ನಾಗಿಯೇ ಇದ್ದರು. ಇದಕ್ಕಿದ್ದಂತೆ ಆಕೆ ರಕ್ತಸ್ರಾವದಿಂದ ನಿತ್ರಾಣಗೊಂಡಳು.

ತೀವ್ರ ಅಸ್ವಸ್ಥಗೊಂಡ ಆಕೆಯನ್ನು ಬೆಂಗಳೂರಿನ ಯಾವುದಾದರೊಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಕರೆದೊಯ್ಯಲು ವೈದ್ಯರು ಶಿಫಾರಸು ಮಾಡಿದರು. ಕುಟುಂಬಸ್ಥರು ಅಲ್ಲಿಗೂ ಕರೆದೊಯ್ಯಲು ಮುಂದಾದರು. ಆದರೆ, ಆ ವೇಳೆಗಾಗಲೇ ಎಳೆ ಕುಡಿಯನ್ನು ಆಕೆ ಅಗಲಿದಳು.

ಕುಣಿಗಲ್ ಆಸ್ಪತ್ರೆಗೆ ಬಂದ ಕುಟುಂಬಸ್ಥರು ವೈದ್ಯರು ಸಕಾಲದಲ್ಲಿ ಸೂಕ್ತ ಚಿಕಿತ್ಸೆ ನೀಡದಿರುವುದೇ ಸಾವಿಗೆ ಕಾರಣ ಎಂದು ಪ್ರತಿಭಟನೆಗೆ ಇಳಿದರು. ಅವರ ಹೋರಾಟಕ್ಕೆ ರಾಜಕೀಯ ಮುಖಂಡರು ಕೈಜೋಡಿಸಿದರು. ಸ್ಥಳಕ್ಕೆ ಬಂದ ಶಾಸಕರು ಸಹ ಆಸ್ಪತ್ರೆಯಲ್ಲಿ ಸೂಕ್ತ ವೈದ್ಯಕೀಯ ಸೌಲಭ್ಯಗಳಿಲ್ಲ ಎಂದು ರಾಜ್ಯ ಸರ್ಕಾರದತ್ತ ಬೊಟ್ಟು ಮಾಡಿದರು.

ಹಾಗಿದ್ದರೆ ಪಲ್ಲವಿ ಪ್ರಸವ ಪೂರ್ವದಲ್ಲಿ ಆರೋಗ್ಯ ತಪಾಸಣೆ ಮಾಡಿಸಿರಲಿಲ್ಲವೇ, ಆಕೆ ಅಸುನೀಗಿದ್ದೇಕೆ? ಈ ಸಾವನ್ನು ಕೆದಕುತ್ತಾ ಹೋದರೆ ರಾಜ್ಯದ ಆರೋಗ್ಯ ವ್ಯವಸ್ಥೆಯನ್ನು ಸುತ್ತಿಕೊಂಡಿರುವ ಅವ್ಯವಸ್ಥೆಯ ಸುಳಿಗಳು ಬಿಚ್ಚಿಕೊಳ್ಳುತ್ತವೆ. ಸರ್ಕಾರಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೌಲಭ್ಯದ ಕೊರತೆಯಿಂದ ನರಳುತ್ತಿರುವುದು ಎದ್ದು ಕಾಣುತ್ತದೆ.

ಹೆಣ್ಣಿನ ಚೊಚ್ಚಿಲ ತಾಯ್ತನ ಆಕೆಯ ಬದುಕಿನ ಬಹುಮುಖ್ಯ ಘಟ್ಟ. ಆದರೆ, ಅಸುರಕ್ಷಿತ ಹೆರಿಗೆ, ತರಬೇತಿ ರಹಿತ ಶುಶ್ರೂಷೆಯು ಮಹಿಳೆಯರ ಬದುಕನ್ನು ಕಸಿದುಕೊಳ್ಳುತ್ತಿದೆ. ಇಂದಿಗೂ ಸುರಕ್ಷಿತ ಹೆರಿಗೆ ಎಂಬುದು ಬಡ ಕುಟುಂಬಗಳ ಪಾಲಿಗೆ ಗಗನಕುಸುಮವಾಗಿದೆ. ಪ್ರಸವದ ವೇಳೆ ತಾಯಂದಿರೇಕೆ ಸಾಯುತ್ತಾರೆ? ಇದಕ್ಕೆ ಮೊದಲ ಕಾರಣ ಅತಿಯಾದ ರಕ್ತಸ್ರಾವ. ಪ್ರಸವಪೂರ್ವ ಹಾಗೂ ನಂತರದ ಅವಧಿಯಲ್ಲಿ ಅವರು ಮೃತಪಡಲು ರಕ್ತಹೀನತೆಯೇ ಬಹುಮುಖ್ಯ ಕಾರಣವಾಗಿದೆ. ಶೇ 75ರಷ್ಟು ಸಾವು ಇದೇ ಕಾರಣಕ್ಕೆ ಸಂಭವಿಸುತ್ತವೆ ಎನ್ನುತ್ತಾರೆ ಆರೋಗ್ಯ ತಜ್ಞರು.

ರಕ್ತಹೀನತೆ: ರಕ್ತಹೀನತೆಯು ಗರ್ಭಿಣಿಯರಲ್ಲಿ ನಿಶ್ಶಕ್ತಿ ಉಂಟು ಮಾಡಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಸುಲಭವಾಗಿ ತಡೆಗಟ್ಟಬಹುದಾದ ಸಮಸ್ಯೆ ಇದು. ಆದರೆ, ಇದನ್ನು ತಡೆಗಟ್ಟಲು ಸರ್ಕಾರ ಜಾರಿಗೊಳಿಸಿರುವ ಯೋಜನೆಗಳ ಅನುಷ್ಠಾನದಲ್ಲಿನ ವೈಫಲ್ಯ ಎದ್ದು ಕಾಣುತ್ತದೆ.

ರಾಜ್ಯದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಹಿಳೆಯರು, ಕಿಶೋರಿಯರ ಸಂಖ್ಯೆ ಹೆಚ್ಚಿದೆ. ಇದಕ್ಕೆ 2019–20ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಅಂಕಿ–ಅಂಶಗಳು ಕನ್ನಡಿ ಹಿಡಿಯುತ್ತವೆ. ರಕ್ತಹೀನತೆಯಿಂದ ಬಳಲುತ್ತಿರುವ (15–49 ವರ್ಷದೊಳಗೆ ಗರ್ಭಿಣಿಯರು) ಮಹಿಳೆಯರ ಪ್ರಮಾಣ ನಗರ ಪ್ರದೇಶದಲ್ಲಿ ಶೇ 37.3ರಷ್ಟಿದ್ದರೆ; ಗ್ರಾಮೀಣ ಪ್ರದೇಶದಲ್ಲಿ ಶೇ 50.6ರಷ್ಟಿದೆ.

ಇಂದಿಗೂ ಗ್ರಾಮೀಣ ಕುಟುಂಬಗಳಲ್ಲಿ ಸೊಸೆಯ ಆಹಾರ ಕಟ್ಟಕಡೆಯ ಆದ್ಯತೆಯಾಗಿದೆ. ಕುಟುಂಬದ ಸದಸ್ಯರು ಊಟ ಮಾಡಿ ಉಳಿದ ಆಹಾರವನ್ನು ಸೇವಿಸುವಂತಹ ದಯನೀಯ ಸ್ಥಿತಿ ಆಕೆಯದ್ದು. ಮೊದಲೇ ಅಪೌಷ್ಟಿಕತೆಯಿಂದ ಬಳಲುವ ಆಕೆಯು ಪೌಷ್ಟಿಕ ಆಹಾರ ಇಲ್ಲದೆ ಬಹುಬೇಗ ರಕ್ತಹೀನತೆಗೆ ತುತ್ತಾಗುತ್ತಾಳೆ.

ಇದೇ ಕಾರಣದಿಂದ ಅಪೌಷ್ಟಿಕತೆ ನಿರ್ಮೂಲನೆಗೆ ಸರ್ಕಾರ 'ಮಾತೃಪೂರ್ಣ' ಯೋಜನೆ ಜಾರಿಗೊಳಿಸಿದೆ. ಆದರೆ, ಹಲವೆಡೆ ಇದು ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ ಎಂಬ ಆರೋಪ ಇದೆ. ಗರ್ಭಿಣಿಯರು ಮಧ್ಯಾಹ್ನ ಅಂಗನವಾಡಿ ಕೇಂದ್ರಕ್ಕೆ ಬಂದರೆ ಮಾತ್ರ ಊಟ ನೀಡಲಾಗುತ್ತದೆ. ಆದರೆ, ಕೆಲವೆಡೆ ಇದಕ್ಕೆ ಅವರು ಒಪ್ಪುತ್ತಿಲ್ಲ. ಕೋವಿಡ್ ವೇಳೆ ಮನೆಗೆ ಪೌಷ್ಟಿಕ ಆಹಾರ ಪೂರೈಸಲಾಗುತ್ತಿತ್ತು. ಹಾಗೆಯೇ ಮುಂದುವರಿಸಿ ಎಂದು ಒತ್ತಾಯ ಕೇಳಿಬರುತ್ತಿದೆ.

4ನೇ ಪುಟ ನೋಡಿ

ಒಳನೋಟ

ಮರಣಕ್ಕೆ ಅಪೌಷ್ಟಿಕತೆ ಕಾರಣ

ಪ್ರತಿಕ್ರಿಯಿಸಿ: 9606038256
feedback@prajavani.co.in


ತಾಯಂದಿರ ಮರಣ ಪ್ರಮಾಣ ಲೆಕ್ಕಾಚಾರ ಹೇಗೆ?

ಯಾವುದೇ ರಾಜ್ಯದ ಆರೋಗ್ಯದ ಮಾನದಂಡ ಅಳೆಯಲು ತಾಯಿ ಮತ್ತು ಶಿಶು ಮರಣವೇ ಅಳತೆಗೋಲು.

ಸಂತಾನೋತ್ಪತ್ತಿ ವಯಸ್ಸಿನ ಒಟ್ಟು ಮಹಿಳೆಯರನ್ನು (ಪ್ರತಿ ಲಕ್ಷ ಜೀವಂತ ಜನನ) ಸಾವನ್ನಪ್ಪಿದ ತಾಯಂದಿರ ಪ್ರಮಾಣದಿಂದ ಭಾಗಿಸಿದಾಗ ಬರುವ ಭಾಗಲಬ್ದವನ್ನು 'ತಾಯಂದಿರ ಮರಣ ಪ್ರಮಾಣ'ವೆಂದು ಕರೆಯುತ್ತಾರೆ.


ಕೊಪ್ಪಳದ 100 ಹಾಸಿಗೆ ಸಾಮರ್ಥ್ಯದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ನವಜಾತ ಶಿಶುಗಳ ತೀವ್ರ ನಿಗಾ ಘಟಕದಲ್ಲಿ ಶಿಶುಗಳ ಆರೈಕೆಯಲ್ಲಿ ತೊಡಗಿರುವ ದಾದಿ

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ



'ಶಕ್ತಿ'ಗೆ ಇಂದು ಚಾಲನೆ

ನಾರಿಯರಿಗೆ ಉಚಿತ ಪ್ರಯಾಣ: ಸರ್ಕಾರದ ಗ್ಯಾರಂಟಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಐದು 'ಗ್ಯಾರಂಟಿ'ಗಳ ಪೈಕಿ, ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ ಯೋಜನೆ 'ಶಕ್ತಿ'ಗೆ ರಾಜ್ಯದಾದ್ಯಂತ ಸರ್ಕಾರ ಭಾನುವಾರ (ಜೂನ್ 11) ಚಾಲನೆ ನೀಡಲಿದೆ.

ವಿಧಾನಸೌಧದ ಮುಂಭಾಗದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯೋಜನೆಯನ್ನು ಉದ್ಘಾಟಿಸಲಿದ್ದಾರೆ. ಮಧ್ಯಾಹ್ನ 1.00 ಗಂಟೆಯ ನಂತರ ಎಲ್ಲ ಮಹಿಳೆಯರು ಮತ್ತು ವಿದ್ಯಾರ್ಥಿನಿಯರಿಗೆ ಈ ಸೌಲಭ್ಯ ಸಿಗಲಿದೆ.

ಇದೇ ಸಂದರ್ಭದಲ್ಲಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸ್ಥಳೀಯ ಶಾಸಕರು ಈ ಯೋಜನೆಗೆ ಚಾಲನೆ ನೀಡಲಿದ್ದಾರೆ.

5ನೇ ಪುಟ ನೋಡಿ



ಯೋಜನೆಯ ಮುಖ್ಯಾಂಶಗಳು

- ಮಹಿಳೆಯರು, ವಿದ್ಯಾರ್ಥಿನಿಯರು, ಲಿಂಗತ್ವ ಅಲ್ಪಸಂಖ್ಯಾತರಿಗೆ ಅನುಕೂಲ
- ನಗರ ಸಾರಿಗೆ, ಸಾಮಾನ್ಯ, ವೇಗದೂತ ಬಸ್‌ಗಳಲ್ಲಿ ಮಾತ್ರ ಪ್ರಯಾಣ ಅವಕಾಶ
- ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಎನ್‌ಇಕೆಆರ್‌ಟಿಸಿ ಬಸ್‌ಗಳಲ್ಲಿ ಸಂಚರಿಸಬಹುದು
- ರಾಜ್ಯದಲ್ಲಿ ವಾಸಿಸುವ ಮಹಿಳೆಯರಿಗೆ ರಾಜ್ಯದೊಳಗೆ ಪ್ರಯಾಣಕ್ಕೆ ಮಾತ್ರ ಸೀಮಿತ
- 'ಶಕ್ತಿ ಸ್ಮಾರ್ಟ್ ಕಾರ್ಡ್'ಗಾಗಿ ಸೇವಾ ಸಿಂಧುವಿನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಬೇಕು
- 3 ತಿಂಗಳು ಗುರುತಿನ ಚೀಟಿ ತೋರಿಸಿ ಶೂನ್ಯ ಟಿಕೆಟ್ ಪಡೆದು ಪ್ರಯಾಣಿಸಲು ಅವಕಾಶ
- ಕೇಂದ್ರ– ರಾಜ್ಯ ಸರ್ಕಾರ ಅಥವಾ ಸರ್ಕಾರಿ ಸ್ವಾಮ್ಯದ ಕಚೇರಿಗಳು ನೀಡಿರುವ ಭಾವಚಿತ್ರ ಇರುವ ಗುರುತಿನ ಚೀಟಿ ಇರಬೇಕು

ಹಾಸ್ಟೆಲ್ ಹಾಸಿಗೆ ಖರೀದಿ ಅಕ್ರಮ?

• ಖಲೀಲಅಹ್ಮದ ಶೇಖ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಒಂಬತ್ತು ವಿದ್ಯಾರ್ಥಿ ನಿಲಯಗಳಿಗೆ ಅಗತ್ಯವಿದ್ದ ಹಾಸಿಗೆ–ದಿಂಬುಗಳ ಖರೀದಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿ ಬಂದಿದೆ.

ಪೂರೈಕೆಗೆ ಕರೆಯಲಾಗಿದ್ದ ಟೆಂಡರ್‌ನಲ್ಲಿ ಉಲ್ಲೇಖಿಸಲಾಗಿದ್ದ ಗುಣಮಟ್ಟವೂ ಇಲ್ಲ. ಪೂರೈಸುವುದಾಗಿ ತೋರಿಸಲಾಗಿದ್ದ ಹಾಸಿಗೆ–ದಿಂಬುಗಳ ಬದಲು ಕಳಪೆ ಗುಣಮಟ್ಟದ ಹಾಗೂ ಮಾರುಕಟ್ಟೆಯಲ್ಲಿ ಅತಿ ಕಡಿಮೆ ದರಕ್ಕೆ ಲಭ್ಯವಿರುವ ಹಾಸಿಗೆ–ದಿಂಬುಗಳನ್ನು ಪೂರೈಸಲಾಗಿದೆ.

ಹಾಸಿಗೆ ಮತ್ತು ದಿಂಬು ಖರೀದಿಸಲು 2021–22ನೇ ಸಾಲಿನಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. 2022ರ ಫೆಬ್ರುವರಿ 3ರಂದು ನಡೆದ ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಂಡ ಸಂಸ್ಥೆಯಿಂದ ಪ್ರತಿ ಹಾಸಿಗೆಗೆ ₹5,900 ಮತ್ತು ಪ್ರತಿ ದಿಂಬಿಗೆ ₹650 ದರ ನಿಗದಿ ಮಾಡಲಾಗಿತ್ತು.

> **ನಾನು ಅಧಿಕಾರ ವಹಿಸಿಕೊಳ್ಳುವ ಮೊದಲೇ ಹಾಸಿಗೆ, ದಿಂಬು ಖರೀದಿ ಪ್ರಕ್ರಿಯೆ ನಡೆದಿತ್ತು. ಈ ಪ್ರಕ್ರಿಯೆಯಲ್ಲಿ ಲೋಪಗಳಾಗಿದ್ದರೆ ತನಿಖೆಗೆ ಆದೇಶಿಸಲಾಗುವುದು**
> **ಜಯಕರ ಎಸ್.ಎಂ.,** ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ

5ನೇ ಪುಟ ನೋಡಿ


ವಿದ್ಯಾರ್ಥಿನಿಲಯಗಳಿಗೆ ಪೂರೈಕೆಯಾಗಿರುವ ಹಾಸಿಗೆ


ಆರತಕ್ಷತಾ ಸಮಾರಂಭ
ಶ್ರೀಮತಿ ದೀಪಾ. ಎಸ್ ಮತ್ತು
ಡಾ|| ಆರ್. ಪ್ರಭಾಕರ್ ರೆಡ್ಡಿ
ಕಾಂಗ್ರೆಸ್ ಮುಖಂಡರು ಹಾಗೂ ಸಮಾಜ ಸೇವಕರು
ನಮ್ಮ ಸುಪುತ್ರಿ
ರಕ್ಷಿತಾ ಪಿ. ರೆಡ್ಡಿ
ಮತ್ತು
ಅಭಿಜಿತ್ ಯು. ರೆಡ್ಡಿ
ಶ್ರೀ ಎಸ್. ಉದಯ್‌ಕುಮಾರ್ ಮತ್ತು
ಶ್ರೀಮತಿ ಸಿ.ವಿ. ಆರತಿ ರವರ ಸುಪುತ್ರ
ಯಡಿಯೂರು, ಬೆಂಗಳೂರು
ಇವರ
ಆರತಕ್ಷತೆ ಮತ್ತು ಬೀಗರ
ಔತಣಕೂಟ
ದಿನಾಂಕ : 11.06.2023ನೇ
ಭಾನುವಾರ ಬೆಳಗ್ಗೆ 11.00 ಗಂಟೆಗೆ
ಸ್ಥಳ : ಬೆಂಗಳೂರು ಅರಮನೆ
ಮೌಂಟ್ ಕಾರ್ಮೆಲ್ ಕಾಲೇಜು ಹತ್ತಿರ,
ವಸಂತನಗರ, ಬೆಂಗಳೂರು – 560052
ಮಹೋತ್ಸವವನ್ನು ನೆರವೇರಿಸಲು
ಗುರು-ಹಿರಿಯರು ನಿಶ್ಚಯಿಸಿರುವುದರಿಂದ
ತಾವುಗಳು ಸಕುಟುಂಬ ಸಮೇತರಾಗಿ ಆಗಮಿಸಿ
ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ.
ಶುಭ ಕೋರುವವರು
ಡಾ|| ಆರ್. ಪ್ರಭಾಕರ್ ರೆಡ್ಡಿಯವರ ಅಭಿಮಾನಿ ಬಳಗ

ಬಡ ಸಮುದಾಯದ ಅಗತ್ಯ ಪೂರೈಸಲು ನೆರವು: ಕಾಂಗ್ರೆಸ್ ಮುಖಂಡ, ತಜ್ಞರ ಪ್ರತಿಪಾದನೆ

‘ಐದು ಗ್ಯಾರಂಟಿಗಳು ಹೊರೆಯಲ್ಲ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬಡ ಜನರ ಜೀವನೋಪಾಯಕ್ಕೆ ಗ್ಯಾರಂಟಿಗಳು ರಹದಾರಿ
- ಸಂವಿಧಾನದ ಆಶಯದಂತೆ ಯೋಜನೆಗಳನ್ನು ರೂಪಿಸಲಾಗಿದೆ
- ಸರ್ಕಾರಕ್ಕೆ ₹ 50,500 ಕೋಟಿ ಹೆಚ್ಚುವರಿ ವೆಚ್ಚ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಜಾರಿಗೊಳಿಸುತ್ತಿರುವ ಐದು ಗ್ಯಾರಂಟಿಗಳು ಬೊಕ್ಕಸಕ್ಕೆ ಹೊರೆಯಾಗುವುದಿಲ್ಲ ಎಂದು ವಿಧಾನ ಪರಿಷತ್‌ನ ಮಾಜಿ ಸಭಾಪತಿ ಬಿ.ಕೆ. ಚಂದ್ರಶೇಖರ್, ಅರ್ಥಶಾಸ್ತ್ರಜ್ಞ ಆರ್.ಎಸ್. ದೇಶಪಾಂಡೆ ಹಾಗೂ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಜಿ ನಿರ್ದೇಶಕ ವಿ.ಎಸ್. ಪ್ರಕಾಶ್ ಪ್ರತಿಪಾದಿಸಿದ್ದಾರೆ.

ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಈ ಗ್ಯಾರಂಟಿಗಳು ಜನರ ಜೀವನೋಪಾಯವನ್ನು ಕಂಡುಕೊಳ್ಳುವ ಪ್ರಮುಖ ಮಾರ್ಗಗಳಾಗಿವೆ. ಸಮಾಜದ ಅತ್ಯಂತ ಬಡ ಸಮುದಾಯಗಳಿಗೆ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು ಬೇಕಾದ ನೆರವನ್ನು ಈ ಗ್ಯಾರಂಟಿಗಳು ನೀಡಲಿವೆ. ಘನತೆಯಿಂದ ಬದುಕುವ ಹಕ್ಕನ್ನು ಸಂವಿಧಾನ ನೀಡಿದ್ದು, ಅದರ ಆಶಯದಲ್ಲೇ ಈ ಯೋಜನೆಗಳು ರೂಪುಗೊಂಡಿವೆ ಎಂದು ಅವರು ಹೇಳಿದ್ದಾರೆ.

2023-24ರ ಬಜೆಟ್ ಪ್ರಕಾರ ಕರ್ನಾಟಕ ಸರ್ಕಾರಕ್ಕೆ ಬರುವ ಆದಾಯ ₹ 2.25 ಲಕ್ಷ ಕೋಟಿಯಷ್ಟಿದೆ. ಎಲ್ಲ ಯೋಜನೆಗಳಿಗೆ ₹ 50,500 ಕೋಟಿಯಷ್ಟು ವೆಚ್ಚವಾಗಬಹುದು ಎಂಬ ಅಂದಾಜಿದೆ. ಬೃಹತ್ ಆದಾಯ ಇರುವ ರಾಜ್ಯಕ್ಕೆ ಇದು ಹೊರೆಯಾಗುವುದಿಲ್ಲ ಎಂದು ಅವರು ವಿವರಿಸಿದ್ದಾರೆ.

ಗೃಹಜ್ಯೋತಿ ಯೋಜನೆಯಲ್ಲಿ ಎಲ್ಲ ಮನೆಗಳಿಗೆ ತಿಂಗಳಿಗೆ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ನೀಡಲಾಗುತ್ತದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮನೆಯ ಅಂಕಿ–ಅಂಶಗಳ ಆಧಾರದ ಮೇಲೆ ವೆಚ್ಚವು ವಾರ್ಷಿಕ ₹ 13,500 ಕೋಟಿ ಆಗಬಹುದು. ಗೃಹಲಕ್ಷ್ಮಿ ಯೋಜನೆಯಡಿ ಕುಟುಂಬದ ಯಜಮಾನಿಗೆ ತಿಂಗಳಿಗೆ ₹ 2,000 ನೀಡಲಾಗುತ್ತದೆ. ಇದಕ್ಕೆ ಅಂದಾಜು ₹ 30,000 ಕೋಟಿ ಖರ್ಚಾಗಬಹುದು ಎಂದು ಅವರು ವಿವರಿಸಿದ್ದಾರೆ.

ಅನ್ನ ಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಗೆ 10 ಕೆ.ಜಿ ಅಕ್ಕಿಯನ್ನು ಒದಗಿಸಲಾಗುತ್ತದೆ. ರಾಜ್ಯದಲ್ಲಿ ಈಗಾಗಲೇ ಪ್ರತಿಯೊಬ್ಬರಿಗೆ ತಿಂಗಳಿಗೆ 5 ಕೆ.ಜಿ. ಅಕ್ಕಿಯನ್ನು ನೀಡುತ್ತಿದೆ. ಹೆಚ್ಚುವರಿ ಅವಶ್ಯಕತೆ ಪ್ರತಿ ವ್ಯಕ್ತಿಗೆ 5 ಕೆ.ಜಿ. ನೀಡಲಾಗುತ್ತದೆ. 1.17 ಕೋಟಿ ಬಿಪಿಎಲ್ ಕುಟುಂಬಗಳಿವೆ. ಪ್ರತಿ ಕುಟುಂಬಕ್ಕೆ ತಿಂಗಳಿಗೆ 30 ಕೆ.ಜಿ ನೀಡಲು ವಾರ್ಷಿಕ ₹ 4,000 ಕೋಟಿ ಬೇಕಾಗುತ್ತದೆ. ಹೆಚ್ಚುವರಿ ವೆಚ್ಚ ಸುಮಾರು ₹ 5,500 ಕೋಟಿ ಆಗುವ ಅಂದಾಜಿದೆ ಎಂದು ಅವರು ತಿಳಿಸಿದ್ದಾರೆ.



ಸ್ನೇಹದೀಪ ಅಂಧ ಮತ್ತು ಅಂಗವಿಕಲರ ಸಂಸ್ಥೆಯು ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಂಪ್ಯೂಟರ್ ಮತ್ತು ಕೌಶಲ ಅಭಿವೃದ್ಧಿ ತರಬೇತಿ ಪಡೆದ 48 ಅಂಧ ವಿದ್ಯಾರ್ಥಿಗಳಿಗೆ ಇಂಧನ ಸಚಿವ ಕೆ.ಜೆ. ಜಾರ್ಜ್ ಪ್ರಮಾಣ ಪತ್ರ ವಿತರಿಸಿದರು. ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಪಾಲ್ ಮುದ್ದಾ ಇದ್ದಾರೆ

ಲೈಂಗಿಕ ಕಿರುಕುಳ: ಪಿಐಎಲ್ ವಿಲೇವಾರಿ

ಬೆಂಗಳೂರು: ‘ಉದ್ಯೋಗದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಯುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳನ್ನು ಕಡ್ಡಾಯವಾಗಿ ರಚಿಸುವಂತೆ ನಿರ್ದೇಶಿಸಬೇಕು’ ಎಂದು ಕೋರಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಲೇವಾರಿ ಮಾಡಿದೆ.

ದುಡಿಯುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಹಾಗೂ ಬಹುತೇಕ ಶಾಲೆಗಳಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಆಕ್ಷೇಪಿಸಿ ‘ಕ್ರೀಟಮ್ಸ್ ಪ್ರೊಬೋನೊ ಮತ್ತು ಸೆಂಟರ್ ಫಾರ್ ಲೀಗಲ್ ರೀಸರ್ಚ್’ ಈ ಅರ್ಜಿ ಸಲ್ಲಿಸಿತ್ತು.

ಪೊಲೀಸ್ ವರ್ಗಾವಣೆ: ಪತಿ– ಪತ್ನಿ ನಿಯಮ ತಿದ್ದುಪಡಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸರ ಅಂತರ ಜಿಲ್ಲಾ ವರ್ಗಾವಣೆ ಪ್ರಕ್ರಿಯೆಯಲ್ಲಿ, ಪತಿ– ಪತ್ನಿ ವರ್ಗಾವಣೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ನಿಯಮ ತಿದ್ದುಪಡಿ ಮಾಡಬೇಕು’ ಎಂದು ಆಗ್ರಹಿಸಿ ಅರ್ಹ ಪೊಲೀಸ್ ಸಿಬ್ಬಂದಿ, ಉಪಮುಖ್ಯಮಂತ್ರಿ ಹಾಗೂ ಗೃಹ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ.

‘ಅಂತರ ಜಿಲ್ಲಾ ವರ್ಗಾವಣೆಗೆ ಕನಿಷ್ಠ 7 ವರ್ಷ ಸೇವೆ ಕಡ್ಡಾಯಗೊಳಿಸಲಾಗಿದೆ. ಪತಿ–ಪತ್ನಿ ಪ್ರಕರಣದಲ್ಲಿ ಯಾವುದೇ ವಿನಾಯಿತಿ ನೀಡಿಲ್ಲ. ಇದರಿಂದಾಗಿ, ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಂಪತಿ ಸಂಕಷ್ಟಕ್ಕೆ ಸಿಲುಕಿದ್ದೇವೆ. ಮದುವೆಯಾದರೂ ಒಂದೇ ಕಡೆ ನೆಲೆಸಿ, ಸಂಸಾರ ಮಾಡಲು ಸಾಧ್ಯವಾಗುತ್ತಿಲ್ಲ. ಮಾನಸಿಕವಾಗಿ ತೊಂದರೆ ಅನುಭವಿಸುತ್ತಿದ್ದೇವೆ’ ಎಂದು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

‘ಪೊಲೀಸ್ ಇಲಾಖೆಯ ಸಿ ಮತ್ತು ಡಿ ಗ್ರೂಪ್ ಸಿಬ್ಬಂದಿಗೆ ಕರ್ನಾಟಕ ನಾಗರಿಕ ಸೇವಾ ನಿಯಮದ ಪ್ರಕಾರ ಕನಿಷ್ಠ ಎರಡೂವರೆ ವರ್ಷದ (ಪ್ರೊಬೇಷನರಿ ಅವಧಿ) ಬಳಿಕ ಅಂತರ ಜಿಲ್ಲಾ ವರ್ಗಾವಣೆಗೆ ಅವಕಾಶವಿತ್ತು. ಆದರೆ, ಈ ನಿಯಮವನ್ನು ತಿದ್ದುಪಡಿ ಮಾಡಿ ಮಾರ್ಚ್ 1ರಂದು ಆದೇಶ ಹೊರಡಿಸಲಾಗಿದೆ. ಪ್ರತಿಯೊಬ್ಬ ಸಿಬ್ಬಂದಿಯೂ ಕನಿಷ್ಠ 7 ವರ್ಷ ಸೇವಾವಧಿ ಪೂರೈಸಬೇಕೆಂದು ಹೊಸ ನಿಯಮ ರೂಪಿಸಲಾಗಿದೆ.’

‘ಹೊಸ ನಿಯಮದಿಂದಾಗಿ ದೂರದ ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿ ಸರ್ಕಾರಿ ಕೆಲಸ ಮಾಡುತ್ತಿರುವ ಪತಿ–ಪತ್ನಿಗೆ ತೊಂದರೆಯಾಗಿದೆ. ಕೌಟುಂಬಿಕ ಜೀವನದಲ್ಲಿ ಸಂಕಷ್ಟಗಳು ಎದುರಾಗುತ್ತಿವೆ. ಸಿಬ್ಬಂದಿ ಕೊರತೆಯಿಂದ ರಜೆಗಳು ಸಿಗುತ್ತಿಲ್ಲ ಎಂದು ಅರ್ಹ ಪೊಲೀಸರು ಪತ್ರದಲ್ಲಿ ತಿಳಿಸಿದ್ದಾರೆ.







₹ 16.23 ಲಕ್ಷ ಪಡೆದಿದ್ದ ಆರೋಪಿ; ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲು

ಎಂಬಿಬಿಎಸ್ ಸೀಟು ಆಮಿಷ; ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರದ ಅಲ್ ಅಮಿನ್ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ಹೇಳಿ ವಿದ್ಯಾರ್ಥಿನಿಯೊಬ್ಬರ ಪೋಷಕರಿಂದ ₹ 16.23 ಲಕ್ಷ ಪಡೆದು ವಂಚಿಸಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೀದರ್ ಜಿಲ್ಲೆಯ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳಾದ ಸನಾ ಇಸ್ಲಾಂ ಖಾನ್, ಶಬಾನಾ ಹಾಗೂ ಮೊಹಮ್ಮದ್ ಅರ್ಮಾನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರ ಮಗಳು 2022ರಲ್ಲಿ ನೀಟ್ ಬರೆದಿದ್ದರು. ಆದರೆ, ಕಡಿಮೆ ಅಂಕ ಬಂದಿದ್ದವು. ಫಲಿತಾಂಶದ ಮಾಹಿತಿ ತಿಳಿದುಕೊಂಡಿದ್ದ ಆರೋಪಿಗಳು, ಸಂಬಂಧಿಯೊಬ್ಬರ ಮೂಲಕ ದೂರುದಾರರನ್ನು ಪರಿಚಯ ಮಾಡಿಕೊಂಡಿದ್ದರು. 'ನಿಮ್ಮ ಮಗಳಿಗೆ ವಿಜಯಪುರದ ಅಲ್ ಅಮಿನ್ ವೈದ್ಯಕೀಯ ಕಾಲೇಜಿನಲ್ಲಿ ಆಡಳಿತ ಮಂಡಳಿ ಕೋಟಾದಡಿ ಸೀಟು ಕೊಡಿಸುತ್ತೇವೆ. ಇದಕ್ಕೆ ₹ 16.23 ಲಕ್ಷ ಖರ್ಚಾಗುತ್ತದೆ' ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ಹಣ ನೀಡಲು ಒಪ್ಪಿದ್ದರು. ₹ 5 ಸಾವಿರ ಮುಂಗಡ ಹಣವನ್ನು ಫೋನ್‌ಪೇ ಮೂಲಕ ವರ್ಗಾಯಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಬೆಂಗಳೂರಿಗೆ ಬಂದಿದ್ದ ದೂರುದಾರ, ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ಆರೋಪಿಗಳನ್ನು ಭೇಟಿಯಾಗಿದ್ದರು. ಮಗಳ ಶೈಕ್ಷಣಿಕ ದಾಖಲೆಗಳನ್ನು ನೀಡಿದ್ದರು. ಇದಾದ ನಂತರ ಹಂತ ಹಂತವಾಗಿ ಆರೋಪಿಗಳಿಗೆ ₹ 16.23 ಲಕ್ಷ ಕೊಟ್ಟಿದ್ದರು. ಹಣ ಪಡೆದು ಕೆಲ ದಿನಗಳ ನಂತರ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ' ಎಂದು ಮೂಲಗಳು ಹೇಳಿವೆ.

ವಿದ್ಯಾರ್ಥಿನಿ ಆತ್ಮಹತ್ಯೆ; ಮೆಡಿಕಲ್ ಕಾಲೇಜ್ ವೈದ್ಯ ಬಂಧನ

ಕೋಲಾರ: ಹೊಸಕೋಟೆಯ ಎಂವಿಜೆ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿನಿ ಪಿ.ದರ್ಶಿನಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿಯಾಗಿರುವ ಕಾಲೇಜಿನ ಹಿರಿಯ ವೈದ್ಯ ಡಾ.ಮಹೇಶ್ ಎಂಬುವರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಪ್ರಕರಣದ ತನಿಖೆ ಮುಂದುವರಿದಿದ್ದು, ಡಾ.ಮಹೇಶ್ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಇನ್ನೂ ನಾಲ್ಕೈದು ಮಂದಿಯನ್ನು ಬಂಧಿಸುವ ಸಾಧ್ಯತೆ ಇದ್ದು, ಶೋಧ ನಡೆಸುತ್ತಿರುವುದು ಗೊತ್ತಾಗಿದೆ.

ಈ ಕಾಲೇಜಿನಲ್ಲಿ ಎಂ.ಡಿ (ಮಕ್ಕಳ ರೋಗ ವಿಜ್ಞಾನ) ಮೊದಲ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದ ಬಳ್ಳಾರಿಯ ಕೌಲ್ ಬಜಾರ್ ನಿವಾಸಿ ದರ್ಶಿನಿ (24) ಜೂನ್ 4ರಂದು ತಾಲ್ಲೂಕಿನ ಕೆಂದಟ್ಟಿ ಬಳಿಯ ಕಲ್ಲುಗಣಿಯಲ್ಲಿ ನಿಂತಿದ್ದ ನೀರಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದರು.

'ಆತ್ಮಹತ್ಯೆಗೆ ಕಾಲೇಜು ಆಡಳಿತ ಮಂಡಳಿ ಹಾಗೂ ಹಿರಿಯ ವೈದ್ಯರ ಕಿರುಕುಳವೇ ಕಾರಣ' ಎಂದು ವಿದ್ಯಾರ್ಥಿನಿಯ ತಮ್ಮ ಪಿ.ಪ್ರಜ್ವಲ್ ದೂರು ದಾಖಲಿಸಿದ್ದರು.

'ದರ್ಶಿನಿ ದಿನದ 24 ತಾಸು ವಿಶ್ರಾಂತಿ ಇಲ್ಲದೆ ಕೆಲಸ ಮಾಡಬೇಕಾಗಿತ್ತು. ಊಟಕ್ಕೂ ಬಿಡುತ್ತಿರಲಿಲ್ಲ. ಹಿರಿಯ ವೈದ್ಯರ ಕಿರುಕುಳದ ಬಗ್ಗೆ ತಾಯಿ ಬಳಿ ಹೇಳಿಕೊಂಡಿದ್ದಳು. ಹಿರಿಯ ವೈದ್ಯ ಡಾ.ಮಹೇಶ್ ಎಂಬುವರ ಕಿರುಕುಳ ಹೆಚ್ಚಾಗಿತ್ತು. ನನ್ನ ಸಹೋದರಿಯ ಜೊತೆ ಅವರು ಅಸಭ್ಯವಾಗಿ ವರ್ತಿಸುತ್ತಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಘಟನೆ ಸಂಬಂಧ ಕೋಲಾರ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು.

ಮೊಬೈಲ್ ಹಿಂದಿರುಗಿಸಿದ ಆಟೊ ಚಾಲಕ

ದೇವನಹಳ್ಳಿ: ಪ್ರಯಾಣಿಕರೊಬ್ಬರು ಗಡಿಬಿಡಿಯಲ್ಲಿ ಆಟೊದಲ್ಲಿ ಮರೆತು ಹೋಗಿದ್ದ ₹30 ಸಾವಿರ ರೂಪಾಯಿ ಬೆಲೆ ಬಾಳುವ ಸ್ಮಾರ್ಟ್‌ಫೋನ್ ಅನ್ನು ಆಟೊ ಚಾಲಕರೊಬ್ಬರು ಹಿಂದಿರುಗಿಸಿದ್ದಾರೆ.

ಯಲಹಂಕದ ರೈಲ್ವೆ ನಿಲ್ದಾಣದ ಬಳಿಯ ಆಟೊ ನಿಲ್ದಾಣದ ಶ್ರೀನಿವಾಸ್ ಎಂಬುವರೇ ಫೋನ್ ಹಿಂದಿರುಗಿಸಿದ ಆಟೊ ಚಾಲಕ.

ಬೀದರ್‌ನಿಂದ ಶುಕ್ರವಾರ ಬೆಳಗ್ಗೆ ಬೆಂಗಳೂರಿನ ಯಲಹಂಕ ರೈಲು ನಿಲ್ದಾಣಕ್ಕೆ ಬಂದಿಳಿದ ಬೀದರ್ ಜಿಲ್ಲೆಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಹನುಮಂತರಾಯ ಕೌಟಗೆ ಎಂಬುವರು ಶ್ರೀನಿವಾಸ್ ಅವರ ಆಟೊದಲ್ಲಿ ಜಕ್ಕೂರಿನಲ್ಲಿರುವ ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಗೆ (ಎಂಜಿಐಆರ್‌ಇಡಿ) ತೆರಳಿದ್ದರು. ಅವಸರದಲ್ಲಿ ಸ್ಮಾರ್ಟ್‌ಫೋನ್ ಆಟೊದಲ್ಲೇ ಬಿಟ್ಟು ಇಳಿದು ಹೋಗಿದ್ದರು.

ಸುದ್ದಿ 2 ನಿಮಿಷ

ಎಂಜಿನಿಯರಿಂಗ್ ವಿದ್ಯಾರ್ಥಿ ಸಾವು: ಆತ್ಮಹತ್ಯೆ ಶಂಕೆ

ಬೆಂಗಳೂರು: ಯಲಹಂಕ ನ್ಯೂ ಟೌನ್ ಠಾಣೆ ವ್ಯಾಪ್ತಿಯಲ್ಲಿರುವ ಎಂಜಿನಿಯರಿಂಗ್ ಕಾಲೇಜೊಂದರ ವಿದ್ಯಾರ್ಥಿ ವಿವೇಕ್ (20) ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ದಾವಣಗೆರೆಯ ವಿವೇಕ್, ಕಾಲೇಜಿನ ಮಾಹಿತಿ ವಿಜ್ಞಾನ ವಿಭಾಗದಲ್ಲಿ ನಾಲ್ಕನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಕಾಲೇಜಿನ ವಿದ್ಯಾರ್ಥಿ ನಿಲಯದ ಕೊಠಡಿಯಲ್ಲಿ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ವಿವೇಕ್ ಮೃತದೇಹ ಶನಿವಾರ ಬೆಳಿಗ್ಗೆ ಪತ್ತೆಯಾಗಿದೆ. ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಹಪಾಠಿಗಳು ಬೆಳಿಗ್ಗೆ ಹೊರಗಡೆ ಹೋಗಿದ್ದರು. ಒಬ್ಬರೇ ಕೊಠಡಿಯಲ್ಲಿ ಉಳಿದುಕೊಂಡಿದ್ದ ವಿವೇಕ್, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ. ಆದರೆ, ಆತ್ಮಹತ್ಯೆಗೆ ಕಾರಣವೇನು ಎಂಬುದು ಗೊತ್ತಾಗಿಲ್ಲ. ವಸತಿ ನಿಲಯದ ಸಿಬ್ಬಂದಿ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

'ಹೊಯ್ಸಳ'ದಲ್ಲಿ ಕಮಿಷನರ್ ಗಸ್ತು



ಬೆಂಗಳೂರು: ನಗರದ ಪೊಲೀಸ್ ಕಮಿಷನರ್ ಬಿ.ದಯಾನಂದ್ ಹೊಯ್ಸಳ ವಾಹನದಲ್ಲಿ ಶನಿವಾರ ಗಸ್ತು ತಿರುಗಿ ಜನರ ಸಮಸ್ಯೆಗಳನ್ನು ಆಲಿಸಿದರು.

ಪೊಲೀಸ್ ನಿಯಂತ್ರಣ ಕೊಠಡಿ 'ನಮ್ಮ 112' ಸಂಖ್ಯೆಗೆ ಬರುವ ಕರೆಗಳಿಗೆ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಯಾವ ರೀತಿ ಸ್ಪಂದಿಸುತ್ತಿದ್ದಾರೆ ? ಎಂಬುದನ್ನು ದಯಾನಂದ್ ಅವರು ಖುದ್ದಾಗಿ ಪರಿಶೀಲಿಸಿದರು.

ಹಲಸೂರು ಠಾಣೆಯ ಹೊಯ್ಸಳ ಗಸ್ತು ವಾಹನದಲ್ಲಿ ದಯಾನಂದ್, ಸಿಬ್ಬಂದಿ ಜೊತೆ ಸುತ್ತಾಡಿದರು. ಸಾರ್ವಜನಿಕರ ಕರೆಗಳು ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಸಮಸ್ಯೆ ಆಲಿಸಿದರು. ಸ್ಥಳೀಯರು, ಹೊಯ್ಸಳ ವಾಹನದಲ್ಲಿ ಕಮಿಷನರ್ ನೋಡಿ ಬೆರಗಾದರು. ತಮ್ಮ ಪ್ರದೇಶದ ಸಮಸ್ಯೆಗಳನ್ನು ಕಮಿಷನರ್ ಬಳಿ ಹೇಳಿಕೊಂಡರು.

'ಹೊಯ್ಸಳ ಗಸ್ತು ಸಿಬ್ಬಂದಿ ಹೇಗೆ ಕೆಲಸ ಮಾಡುತ್ತಿದ್ದಾರೆ ? ಅವರ ಕೆಲಸ ತೃಪ್ತಿ ತಂದಿದೆಯಾ ? ಏನಾದರೂ ಬದಲಾವಣೆ ಬೇಕಾ?' ಎಂಬಿತ್ಯಾದಿ ಪ್ರಶ್ನೆಗಳಿಗೆ ಕಮಿಷನರ್ ಜನರಿಂದ ಉತ್ತರ ಪಡೆದುಕೊಂಡರು.

'ಹೊಯ್ಸಳ ವಾಹನದ ಸಿಬ್ಬಂದಿ ತುರ್ತಾಗಿ ಸ್ಥಳಕ್ಕೆ ಬರಬೇಕು' ಎಂದು ಸ್ಥಳೀಯರು ಕೋರಿದರು. ಅದಕ್ಕೆ ಪ್ರತಿಕ್ರಿಯಿಸಿದ ದಯಾನಂದ್, 'ಕಡಿಮೆ ಸಮಯದಲ್ಲಿ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ತಲುಪುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಪೊಲೀಸ್ ಬಗ್ಗೆ ದೂರುಗಳನ್ನು ಅಲಿಸಲು, ಹೊಯ್ಸಳ ಗಸ್ತು ವಾಹನದಲ್ಲಿ ಆಗಾಗ ಗಸ್ತು ತಿರುಗುತ್ತೇನೆ' ಎಂದರು.

ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಲು ಸರ್ಕಾರ ಸಂಚು: ತೇಜಸ್ವಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ, ಆರೆಸ್ಸೆಸ್ ಮತ್ತು ಹಿಂದುತ್ವವಾದಿ ಸಂಘಟನೆಗಳ ಕಾರ್ಯಕರ್ತರನ್ನು ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಿ, ಬಂಧಿಸಲು ಕಾಂಗ್ರೆಸ್ ನೇತೃತ್ವದ ಸರ್ಕಾರ ಸಂಚು ಮಾಡುತ್ತಿದೆ ಎಂದು ಬಿಜೆಪಿ ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷ, ಸಂಸದ ತೇಜಸ್ವಿ ಸೂರ್ಯ ಆರೋಪಿಸಿದರು.

ಬಿಜೆಪಿ ಹಾಗೂ ಸಂಘ ಪರಿವಾರದ ಕಾರ್ಯಕರ್ತರಿಗೆ ಕಾನೂನು ನೆರವು ನೀಡಲು ಬಿಜೆಪಿಯ ಕಾನೂನು ಪ್ರಕೋಷ್ಠವು ಆರಂಭಿಸಿರುವ ಕಾನೂನು ಸಹಾಯವಾಣಿಗೆ ಭಾನುವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ ಬಿಜೆಪಿ ಮತ್ತು ಸಂಘ ಪರಿವಾರದ ಕಾರ್ಯಕರ್ತರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗಿತ್ತು. ನಮ್ಮ ಕಾರ್ಯಕರ್ತರು ಖಾಸಗಿ ಉದ್ಯೋಗಗಳನ್ನು ಕಳೆದುಕೊಳ್ಳುವಂತೆ ಮಾಡಲಾಗಿತ್ತು. ಸಾಮಾಜಿಕ ಮಾಧ್ಯಮಗಳಲ್ಲಿ ಮುಖ್ಯಮಂತ್ರಿಯನ್ನು ಟೀಕಿಸಿದ ಕಾರಣಕ್ಕೆ ಪೊಲೀಸ್ ಠಾಣೆಗಳಿಗೆ ಕರೆದೊಯ್ದು ಹಿಂಸಿಸಲಾಗಿತ್ತು. ಈ ಬಾರಿಯೂ ಅಂತಹ ಪ್ರಯತ್ನ ಮಾಡಲು ಕಾಂಗ್ರೆಸ್ ಸರ್ಕಾರದಲ್ಲಿ ಇರುವವರು ಸಿದ್ಧತೆ ಮಾಡುತ್ತಿದ್ದಾರೆ' ಎಂದು ದೂರಿದರು.

'ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಿ, ನಮ್ಮ ಕಾರ್ಯಕರ್ತರನ್ನು ಬಂಧಿಸಲು ವೇದಿಕೆ ಸಿದ್ಧವಾಗುತ್ತಿದೆ. ಅದಕ್ಕೆ ಪೂರಕವಾಗಿ ಕೆಲವು ಸಚಿವರು ಮಾತನಾಡುತ್ತಿದ್ದಾರೆ. ಬಿಜೆಪಿ ಮತ್ತು ಸಂಘ ಪರಿವಾರದ ಪರವಾಗಿ ಕೆಲಸ ಮಾಡುವವರನ್ನು ರೌಡಿ ಪಟ್ಟಿಗೆ ಸೇರಿಸಿ ತೊಂದರೆ ಕೊಡಲು ತಯಾರಿ ನಡೆದಿದೆ' ಎಂದರು.

ಕಾನೂನು ಪ್ರಕೋಷ್ಠದ ಸಂಚಾಲಕ ಯೋಗೇಂದ್ರ ಹೊಡಾಘಟ್ಟ ಮಾತನಾಡಿ, 'ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ನಮ್ಮ ಕಾರ್ಯಕರ್ತರನ್ನು ಕಟ್ಟಿಹಾಕಲು ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ಅದನ್ನು ಎದುರಿಸುವುದಕ್ಕಾಗಿ ಸಹಾಯವಾಣಿ ಆರಂಭಿಸಿದ್ದೇವೆ. ತೇಜಸ್ವಿ ಸೂರ್ಯ ಮಾರ್ಗದರ್ಶನದಲ್ಲಿ ಇದು ಕಾರ್ಯನಿರ್ವಹಿಸಲಿದೆ' ಎಂದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಬಿಜೆಪಿ ಕಾನೂನು ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ವಸಂತಕುಮಾರ್, ಸಹಾಯವಾಣಿ ಸಂಯೋಜಕ ಸಂದೀಪ್ ರವಿ ಉಪಸ್ಥಿತರಿದ್ದರು.

ಸಹಾಯವಾಣಿ ಸಂಖ್ಯೆ: 18003091907



ಅಂಡರ್‌ಪಾಸ್ ಕಾಮಗಾರಿ...

ಈಚೆಗೆ ಬಿದ್ದ ಭಾರಿ ಮಳೆಯಿಂದಾಗಿ ಕೆ.ಆರ್.ವೃತ್ತದ ಬಳಿಯ ಅಂಡರ್‌ಪಾಸ್‌ನಲ್ಲಿ ನೀರು ತುಂಬಿಕೊಂಡಿತ್ತು. ಇದರ ಮಧ್ಯೆಯೇ ಸಂಚರಿಸುತ್ತಿದ್ದ ಕಾರು ಸಿಲುಕಿಕೊಂಡ ಪರಿಣಾಮ, ಅದರಲ್ಲಿದ್ದ ಮಹಿಳೆ ಮೃತಪಟ್ಟಿದ್ದರು. ಈ ಸ್ಥಳದಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಅನುಕೂಲವಾಗುವಂತೆ ಕಾಮಗಾರಿ ಆರಂಭಿಸಲಾಗಿದೆ

–ಪ್ರಜಾವಾಣಿ ಚಿತ್ರ



ಶಕ್ತಿ ಯೋಜನೆಯು ಭಾನುವಾರ ಅನುಷ್ಠಾನಗೊಳ್ಳುವ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಅವರು ಮಹಿಳೆಯರು ಉಚಿತವಾಗಿ ಪ್ರಯಾಣಿಸಲಿರುವ ಬಸ್‌ಗಳನ್ನು ಪರಿಶೀಲಿಸಿದರು

–ಪ್ರಜಾವಾಣಿ ಚಿತ್ರ

ಡೇಟಿಂಗ್ ಆ್ಯಪ್ ಸ್ನೇಹಿತ ಬಂಧನ

ಯುವತಿಯಿಂದ ₹ 1 ಲಕ್ಷ ಪಡೆದು ವಂಚಿಸಿದ್ದ ಆರೋಪಿ ಮುದಾಸೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೇಟಿಂಗ್ ಆ್ಯಪ್‌ವೊಂದರಲ್ಲಿ ನಕಲಿ ಖಾತೆ ತೆರೆದು ಯುವತಿಯೊಬ್ಬರನ್ನು ಪರಿಚಯ ಮಾಡಿಕೊಂಡು ವಂಚಿಸಿದ್ದ ಆರೋಪಿ ಮುದಾಸೀರ್‌ನನ್ನು (41) ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಠಾಣೆ ವ್ಯಾಪ್ತಿಯ ನಿವಾಸಿಯಾಗಿರುವ 31 ವರ್ಷ ವಯಸ್ಸಿನ ಯುವತಿ ಈಚೆಗೆ ದೂರು ನೀಡಿದ್ದರು. ಡೇಟಿಂಗ್ ಆ್ಯಪ್ ಖಾತೆ ವಿವರ ಹಾಗೂ ಮೊಬೈಲ್ ಸಂಖ್ಯೆ ಆಧರಿಸಿ ಆರೋಪಿ ಮುದಾಸೀರ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



ಮುದಾಸೀರ್

'ಆರೋಪಿ ಮುದಾಸೀರ್‌ಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. ಡೇಟಿಂಗ್ ಆ್ಯಪ್‌ವೊಂದರಲ್ಲಿ ಅನಿರುದ್ಧ ಹೆಸರಿನಲ್ಲಿ ನಕಲಿ ಖಾತೆ ತೆರೆದಿದ್ದ ಆರೋಪಿ, ಯುವತಿಗೆ ರಿಕ್ವೆಸ್ಟ್ ಕಳುಹಿಸಿದ್ದ. ಅದನ್ನು ಯುವತಿ ಸ್ವೀಕರಿಸಿದ್ದರು.'

'ಸಂದೇಶ ಕಳುಹಿಸಲಾರಂಭಿಸಿದ್ದ ಆರೋಪಿ, ಯುವತಿ ಜೊತೆ ಸಲುಗೆಯಿಂದ ಮಾತನಾಡಲಾರಂಭಿಸಿದ್ದ. 'ನಿನ್ನನ್ನು ಮದುವೆಯಾಗುತ್ತೇನೆ' ಎಂದು ಯುವತಿಗೆ ಹೇಳಿದ್ದ. 'ನನ್ನ ತಾಯಿಗೆ ಹುಷಾರಿಲ್ಲ. ಚಿಕಿತ್ಸೆ ಹಣ ಬೇಕು' ಎಂದಿದ್ದ ಆರೋಪಿ, ಯುವತಿಯಿಂದ ₹ 1 ಲಕ್ಷ ಪಡೆದುಕೊಂಡಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

'ಯುವತಿಯನ್ನು ಆಗಾಗ ಭೇಟಿಯಾಗುತ್ತಿದ್ದ ಆರೋಪಿ, ಲೈಂಗಿಕ ದೌರ್ಜನ್ಯ ಸಹ ಎಸಗಿದ್ದ. ಇತ್ತೀಚೆಗೆ ಯುವತಿಗೆ ಸಂದೇಶ ಕಳುಹಿಸಿದ್ದ ಆರೋಪಿ, ಸಂಬಂಧಿಕರನ್ನು ನೋಡಲು ದುಬೈಗೆ ಹೋಗುತ್ತಿರುವುದಾಗಿ ಹೇಳಿ ಮೊಬೈಲ್ ಸ್ವಿಚ್ ಆಫ್ ಮಾಡಿದ್ದ. ಅನುಮಾನಗೊಂಡ ಯುವತಿ, ಆರೋಪಿ ಬಗ್ಗೆ ಮಾಹಿತಿ ಕಲೆಹಾಕಿದ್ದರು.'

'ಆರೋಪಿ ಹೆಸರು ಅನಿರುದ್ಧ ಅಲ್ಲವೆಂಬುದು ಯುವತಿಗೆ ಗೊತ್ತಾಗಿತ್ತು. ಎಷ್ಟೇ ಪ್ರಯತ್ನಿಸಿದರೂ ಮುದಾಸೀರ್‌ನ ಸುಳಿವು ಸಿಕ್ಕಿರಲಿಲ್ಲ. ನೊಂದ ಯುವತಿ, ಠಾಣೆಗೆ ದೂರು ನೀಡಿದ್ದರು' ಎಂದು ಹೇಳಿವೆ.

'ಆರೋಪಿ ಹಲವು ಯುವತಿಯರನ್ನು ವಂಚಿಸಿರುವ ಮಾಹಿತಿ ಇದೆ. ಯಾರಾದರೂ ವಂಚನೆಗೀಡಾಗಿದ್ದರೆ, ಠಾಣೆಗೆ ದೂರು ನೀಡಬಹುದು' ಎಂದು ಮೂಲಗಳು ತಿಳಿಸಿವೆ.

'ಗಡಿನಾಡಿನಲ್ಲಿ ಕನ್ನಡದ ಕಂಪು ಹರಡಿದ್ದ ಕಯ್ಯಾರ'

ಬೆಂಗಳೂರು: ಗಡಿನಾಡಿನಲ್ಲಿ ಕನ್ನಡದ ಕಂಪು ಹರಡಿದ್ದ ಕಯ್ಯಾರ ಕಿಞ್ಞಣ್ಣ ರೈ ಅವರು ನಾಡಿನಲ್ಲೆಲ್ಲ ಐಕ್ಯಗಾನ ಮೊಳಗಿಸಿದವರು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ನೆನಪು ಮಾಡಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಕಯ್ಯಾರ ಕಿಞ್ಞಣ್ಣ ರೈ ಅವರ 108ನೇ ಜನ್ಮ ದಿನೋತ್ಸವದಲ್ಲಿ ಅವರು ಮಾತನಾಡಿದರು.

ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸುವ ಬಗ್ಗೆ ದೊಡ್ಡ ಹೋರಾಟವನ್ನು ಸಂಘಟಿಸಿದ್ದರು. ಕಾಸರಗೋಡು ಕೊನೆಗೂ ಕರ್ನಾಟಕಕ್ಕೆ ಸೇರದೇ ಇದ್ದಾಗ 'ಬೆಂಕಿ ಬಿದ್ದಿದೆ ಮನೆಗೆ' ಎಂಬ ಕವಿತೆ ಬರೆದು ಆತಂಕ ವ್ಯಕ್ತಪಡಿಸಿದ್ದರು. ಆದರೂ ಕಾಸರಗೋಡಿನಲ್ಲಿ ಕನ್ನಡದ ಕಂಪನ್ನು ಉಳಿಸುವಲ್ಲಿ ಮುಖ್ಯ ಪಾತ್ರವಹಿಸಿದ್ದರು ಎಂದರು.

ಮಾತೃಭಾಷೆ ತುಳು ಅಲ್ಲದೇ ಕನ್ನಡ, ಸಂಸ್ಕೃತ, ಇಂಗ್ಲಿಷ್, ಮಲಯಾಳಂ ಬಲ್ಲ ಅವರು ಕೃಷಿಕರಾಗಿ, ಶಿಕ್ಷಕರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಪತ್ರಕರ್ತರಾಗಿ, ಸಾಹಿತಿಯಾಗಿ ಛಾಪು ಮೂಡಿಸಿದ್ದ ಅವರು 66ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು ಎಂದು ಸ್ಮರಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕ ಪ್ರೊ.ಎನ್.ಎಸ್. ಶ್ರೀಧರಮೂರ್ತಿ, ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜು, ನೇ.ಭ. ರಾಮಲಿಂಗಶೆಟ್ಟಿ, ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು ಇದ್ದರು.

ಸಿಗ್ನಲ್ ಬಳಿ ಜೋಡಿ ಲಾಕಿಂಗ್; ಸೂಚನೆ

ನವದೆಹಲಿ (ಪಿಟಿಐ): ರೈಲ್ವೆ ಎಲ್ಲ ಸಿಗ್ನಲಿಂಗ್ ಸೌಲಭ್ಯಗಳ ಬಳಿ ಜೋಡಿ ಲಾಕಿಂಗ್ ವ್ಯವಸ್ಥೆ ಮಾಡಬೇಕು, ದುರಸ್ತಿ ನಿರ್ವಹಣೆಯ ಬಳಿಕ ರೈಲು ಸಂಚಾರಕ್ಕೂ ಮುನ್ನ ಅನುಸರಿಸಬೇಕಾದ ಶಿಷ್ಟಾಚಾರ ಪಾಲಿಸಬೇಕು ಎಂದು ರೈಲ್ವೆ ಮಂಡಳಿಯು ಆದೇಶಿಸಿದೆ.

ಈ ಕುರಿತಂತೆ ಎಲ್ಲ ವಲಯ ಕಚೇರಿಗಳಿಗೆ ಸೂಚನೆ ಕಳುಹಿಸಿದೆ. ರೈಲ್ವೆಯ ಎಲ್ಲ ರಿಲೇ ಕೊಠಡಿಗಳು, ನಿಯಂತ್ರಣ ಸೌಲಭ್ಯ ವ್ಯವಸ್ಥೆ ಇರುವೆಡೆ ಜೋಡಿ ಲಾಕಿಂಗ್ ಸೌಲಭ್ಯ ಜಾರಿಗೆ ಒತ್ತು ನೀಡಬೇಕು ಎಂದು ಆದೇಶಿಸಿದೆ.

ರೈಲ್ವೆಯ ಸಿಗ್ನಲಿಂಗ್ ಸೂಚನೆ ನೀಡುವಲ್ಲಿ ರಿಲೇ ಕೊಠಡಿಯ ಪಾತ್ರ ಮಹತ್ವದ್ದಾಗಿದೆ. ಸಿಗ್ನಲಿಂಗ್ ವ್ಯವಸ್ಥೆ ಯಲ್ಲಿ ಹಸ್ತಕ್ಷೇಪವೇ ಈಚೆಗೆ ಕೋರೊಮಂಡಲ್ ರೈಲು ಲೂಪ್ ಲೇನ್ ಪ್ರವೇಶಿಸಿ ಸರಕುಸಾಗಣೆ ರೈಲಿಗೆ ಡಿಕ್ಕಿಹೊಡೆಯಲು ಕಾರಣ ಎನ್ನಲಾಗಿದೆ. ಈ ಅಪಘಾತದ ಹಿಂದೆಯೇ ಸಿಗ್ನಲಿಂಗ್ ವ್ಯವಸ್ಥೆಯಲ್ಲಿ ಅನುಸರಿಸಬೇಕಾದ ಕ್ರಮ ಕುರಿತಂತೆ ರೈಲ್ವೆ ಮಂಡಳಿಯು ಸೂಚನೆ ನೀಡಿದೆ.

ಜೋಡಿ ಲಾಕಿಂಗ್ ವ್ಯವಸ್ಥೆ ಅನುಷ್ಠಾನದಿಂದ ಸುಲಭವಾಗಿ ಹಸ್ತಕ್ಷೇಪ ಮಾಡಲಾಗದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಖ್ಯಸಲಹೆಗಾರರ ಪಟ್ಟಿಯಿಂದ ಹೆಸರು ಕೈಬಿಡಿ: ಎನ್‌ಸಿಇಆರ್‌ಟಿಗೆ ಪತ್ರ

ನವದೆಹಲಿ (ಪಿಟಿಐ): ರಾಜಕೀಯ ವಿಜ್ಞಾನ ಪಠ್ಯಪುಸ್ತಕದ ಮುಖ್ಯ ಸಲಹೆಗಾರರ ಪಟ್ಟಿಯಿಂದ ತಮ್ಮ ಹೆಸರನ್ನು ಕೈಬಿಡಬೇಕು ಎಂದು ರಾಜಕೀಯ ಚಿಂತಕರಾದ ಸುಹಾಸ್ ಪಾಲ್‌ಶಿಕರ್ ಮತ್ತು ಯೋಗೇಂದ್ರ ಯಾದವ್ ಅವರು ಎನ್‌ಸಿಇಆರ್‌ಟಿಗೆ ಪತ್ರ ಬರೆದಿದ್ದಾರೆ.

ಮಾನ್ಯ ಮಾಡಲಾಗದ ಪಠ್ಯಪುಸ್ತಕವನ್ನು ಪರಿಚಯಿಸುವಂತೆ ತಮ್ಮ ಮೇಲೆ ಒತ್ತಡ ಹೇರಲಾಗದು ಎಂದು ಅವರು ಎನ್‌ಸಿಇಆರ್‌ಟಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆಯ ಕಸರತ್ತು ಪಠ್ಯಪುಸ್ತಕವನ್ನು ಗುರುತಿಸಲಾಗದಷ್ಟು ಹದಗೆಡಿಸಿದೆ. ಶೈಕ್ಷಣಿಕವಾಗಿ ಬಳಸಲಾಗದ ಸ್ಥಿತಿಗೆ ದೂಡಿದೆ ಎಂದು ಹೇಳಿದ್ದು, ಹೆಸರು ಕೈಬಿಡಬೇಕು ಎಂಬ ಬೇಡಿಕೆಯನ್ನು ಪುನರುಚ್ಚರಿಸಿದ್ದಾರೆ.



ಸಚಿವ ಶಿವರಾಜ್ ತಂಗಡಗಿ ಸಾಂಸ್ಕೃತಿಕ ಟ್ರಸ್ಟ್‌ಗಳ ಪ್ರತಿನಿಧಿಗಳ ಜತೆಗೆ ಸಭೆ ನಡೆಸಿದರು. ಅಧಿಕಾರಿಗಳು ಇದ್ದಾರೆ

ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ

ಪಕ್ಷ, ಪಂಥ, ಧರ್ಮ ಮೀರುವ ಸಾಕ್ಷಿಪ್ರಜ್ಞೆಗಳಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷ, ಪಂಥ, ಧರ್ಮ, ಜಾತಿಗಳನ್ನು ಮೀರಿ ವಿಮರ್ಶೆ ಮತ್ತು ಆತ್ಮವಿಮರ್ಶೆಗೆ ಒಡ್ಡಿಕೊಳ್ಳುವವರೇ ಸಾಕ್ಷಿಪ್ರಜ್ಞೆಗಳಾಗಲು ಸಾಧ್ಯ ಎಂದು ಬರಹಗಾರ ಬರಗೂರು ರಾಮಚಂದ್ರಪ್ಪ ಹೇಳಿದರು.

ಸ್ವಾಭಿಮಾನಿ ಕರ್ನಾಟಕ ವೇದಿಕೆಯಿಂದ ಶೇಷಾದ್ರಿಪುರ ಶಿಕ್ಷಣ ದತ್ತಿ ಸಭಾಂಗಣದಲ್ಲಿ ಶನಿವಾರ ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಯಾವುದೇ ಪಕ್ಷದ ಬಗ್ಗೆ ಸಹಾನುಭೂತಿ ಹೊಂದುವುದು ತಪ್ಪಲ್ಲ. ಆದರೆ, ವಕ್ತಾರರಂತೆ ಮಾತನಾಡಬಾರದು. ಸಹಾನುಭೂತಿ ಹೊಂದಿರುವ ಪಕ್ಷವನ್ನು ಕೂಡ ವಿಮರ್ಶೆ ಮಾಡುವಷ್ಟು ಅಂತರ ಕಾಪಾಡಿಕೊಳ್ಳಬೇಕು. ಏಕ ಕಾಲಕ್ಕೆ ಸಮೀಪ ಮತ್ತು ದೂರ ಕಾಪಾಡಿಕೊಳ್ಳುತ್ತಾರೋ ಅವರೇ ಸಾಕ್ಷಿಪ್ರಜ್ಞೆಗಳಾಗುತ್ತಾರೆ ಎಂದು ಪ್ರತಿಪಾದಿಸಿದರು.



ಬೆಂಗಳೂರಿನಲ್ಲಿ ಸ್ವಾಭಿಮಾನಿ ಪುಸ್ತಕ ಪ್ರಶಸ್ತಿಯನ್ನು ಗುರುರಾಜ್ ಎಸ್. ದಾವಣಗೆರೆ, ಮಮತಾ ಅರಸೀಕೆರೆ, ಚೆನ್ನಪ್ಪ ಕಟ್ಟಿ, ಮಲ್ಲಿಕಾರ್ಜುನ ಶೆಲ್ಲಿಕೇರಿ, ಶಶಿಧರ ಹಾಲಾಡಿ ಮತ್ತು ದಯಾನಂದ ಅವರಿಗೆ ಪ್ರದಾನ ಮಾಡಲಾಯಿತು –ಪ್ರಜಾವಾಣಿ ಚಿತ್ರ

'ವಿಭಜಕ ಸಮಾಜದಲ್ಲಿ ನಾವಿದ್ದೇವೆ. ಅಪವ್ಯಾಖ್ಯಾನ, ಹುಸಿ ವ್ಯಾಖ್ಯಾನಗಳಿಂದ ಎಲ್ಲ ಕ್ಷೇತ್ರಗಳನ್ನು ಕೆಡಿಸಲಾಗುತ್ತಿದೆ. ಗೊತ್ತಿಲ್ಲದೇ ಮಾಡುವ ಅಪವ್ಯಾಖ್ಯಾನವನ್ನಾದರೂ ತಿದ್ದಬಹುದು, ಕ್ಷಮಿಸಬಹುದು. ಪ್ರಜ್ಞಾಪೂರ್ವಕವಾಗಿ ಮಾಡುವ ಹುಸಿ ವ್ಯಾಖ್ಯಾನ ಹುನ್ನಾರಗಳಾಗಿರುತ್ತವೆ. ಇವೇ ರಾಜಕೀಯ, ಶೈಕ್ಷಣಿಕ, ಸಾಹಿತ್ಯ, ಧಾರ್ಮಿಕ ಕ್ಷೇತ್ರ ಕೆಡಿಸಿರುವುದು' ಎಂದರು.

ಪಕ್ಷದೊಳಗಿದ್ದು, ಪಕ್ಷವನ್ನು ಮೀರುವ ಕಣ್ಣೋಟ ಇರುವ ನಾಯಕತ್ವ ಇರಬೇಕು. ರಾಜಕಾರಣಿಗಳಂತೆ ಸಾಹಿತಿಗಳೂ ಸಮಾಜಕ್ಕೆ ಉತ್ತರದಾಯಿ ಗಳಾಗಬೇಕು. ಎಲ್ಲ ಕ್ಷೇತ್ರಗಳಲ್ಲಿ ಈಗ ವಾದಗಳೇ ನಡೆಯುತ್ತಿವೆ, ಸಂವಾದ ಗಳಾಗುತ್ತಿಲ್ಲ. ಪ್ರಜಾಪ್ರಭುತ್ವದ ಲಕ್ಷಣ ವಾದ ಸಂವಾದ ನಡೆಯಬೇಕು ಎಂದು ತಿಳಿಸಿದರು.

ಸ್ವಾಭಿಮಾನಿ ಕರ್ನಾಟಕ ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ಅಧ್ಯಕ್ಷತೆ ವಹಿಸಿದ್ದರು. ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ. ಸೋಮಶೇಖರ್, ಕನ್ನಡ ಹೋರಾಟಗಾರ ಬಿ.ಎ. ನಂಜುಂಡಸ್ವಾಮಿ, 'ಸುಧಾ' ವಾರಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ., ಕಥೆಗಾರ ಕಂನಾಡಿಗಾ ನಾರಾಯಣ ಇದ್ದರು.

'ಬುದ್ಧನ ಕಿವಿ' ಕಥಾಸಂಕಲನದ ದಯಾನಂದ, 'ದೀಡೆಕೆರೆ ಜಮೀನು' ಕಥಾ ಸಂಕಲನದ ಮಲ್ಲಿಕಾರ್ಜುನ ಶೆಲ್ಲಿಕೇರಿ, 'ಅಬ್ಬೆ' ಕಾದಂಬರಿಯ ಶಶಿಧರ ಹಾಲಾಡಿ, 'ನೀರ ಮೇಲಿನ ಮುಳ್ಳು' ಕವನ ಸಂಕಲನದ ಮಮತಾ ಅರಸೀಕೆರೆ, 'ಹಸಿರು ಮನ್ವಂತರ' ಲೇಖನ ಸಂಕಲನದ ಗುರುರಾಜ್ ಎಸ್. ದಾವಣಗೆರೆ, 'ಯುದ್ಧ ಕಾಲದ ಹುಡುಗಿಯರು' ಅನುವಾದ ಕೃತಿಯ ಚನ್ನಪ್ಪ ಕಟ್ಟಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಚಿವ ಶಿವರಾಜ್ ತಂಗಡಗಿ ಭರವಸೆ

'ಸಾಂಸ್ಕೃತಿಕ ಟ್ರಸ್ಟ್‌ಗಳಿಗೆ ಹೆಚ್ಚಿನ ಬಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂಸ್ಕೃತಿಕ ಟ್ರಸ್ಟ್‌ಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಹೆಚ್ಚಿನ ಬಲ ತುಂಬುವ ಕೆಲಸ ಮಾಡಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಭರವಸೆ ನೀಡಿದರು.

ಇಲ್ಲಿ ಶನಿವಾರ ವಿವಿಧ ಟ್ರಸ್ಟ್‌ಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳೊಂದಿಗೆ ಸಮಾಲೋಚನಾ ಸಭೆ ನಡೆಸಿದರು. 'ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 24 ಟ್ರಸ್ಟ್‌ಗಳಿಗೆ ಕಾರ್ಯ ಚಟುವಟಿಕೆ ಅನುಸಾರ ಅನುದಾನ ಒದಗಿಸಲಾಗುವುದು' ಎಂದು ತಿಳಿಸಿದ ಅವರು, 'ಜಿಲ್ಲಾ ಪ್ರವಾಸದ ವೇಳೆ ಟ್ರಸ್ಟ್‌ಗಳ ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲಿಸುತ್ತೇನೆ' ಎಂದು ಹೇಳಿದರು.

ಬೆಟಗೇರಿ ಕೃಷ್ಣಶರ್ಮರ ಮನೆಯನ್ನು ಸ್ಮಾರಕವಾಗಿಸುವುದರ ಬಗ್ಗೆ ಇಲಾಖೆಯ ಅಧಿಕಾರಿಗಳು ವಿವರಿಸಿದರು. ಇದಕ್ಕೆ ಸಕಾರಾತ್ಮವಾಗಿ ಸ್ಪಂದಿಸಿದ ಸಚಿವರು, ಈ ಬಗ್ಗೆ ವಿವರಗಳನ್ನು ತರಿಸಿಕೊಳ್ಳುತ್ತೇನೆ ಎಂದು ಹೇಳಿದರು.

ಕಲಾವಿದೆ ಬಿ.ಜಯಶ್ರೀ ಗುಬ್ಬಿ ವೀರಣ್ಣ ರಂಗಮಂದಿರಕ್ಕೆ ಅನುದಾನ ಹೆಚ್ಚಿಸುವಂತೆ ಮನವಿ ಮಾಡಿದರು. 'ಗಳಗನಾಥ ಮತ್ತು ರಾಜ ಪುರೋಹಿತ ಟ್ರಸ್ಟ್‌ಗಳ ಕಟ್ಟಡ ನಿರ್ಮಾಣಕ್ಕೆ ₹ 2 ಕೋಟಿ ಅನುದಾನ ಒದಗಿಸುವ ಬಗ್ಗೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದು ಹೇಳಿದರು. ಅನುದಾನ ಹೆಚ್ಚಳದ ಬಗ್ಗೆ ಪರಿಶೀಲಿಸುವುದಾಗಿ ತಂಗಡಗಿ ಭರವಸೆ ನೀಡಿದರು.

ಹಾಲಭಾವಿ ಟ್ರಸ್ಟ್‌ನ ಪ್ರತಿನಿಧಿಗಳು ಹಾಲಭಾವಿ ಅವರ ಹೆಸರಿನಲ್ಲಿ ಕಲಾ ಗ್ಯಾಲರಿ ನಿರ್ಮಿಸಬೇಕು ಎಂದು ಮನವಿ ಮಾಡಿಕೊಂಡರು.

ನಿಜಲಿಂಗಪ್ಪ ಟ್ರಸ್ಟ್ ಪರವಾಗಿ ಮಾಜಿ ಸಂಸದ ಹನುಮಂತಪ್ಪ ಮಾತನಾಡಿ, 'ಸರ್ಕಾರಿ ಅಧಿಕಾರಿಗಳ ನೇಮಕದ ಬಗ್ಗೆ ಪರಿಶೀಲನೆ ನಡೆಸಬೇಕು' ಎಂದು ಹೇಳಿದರು.

ಸ್ತಬ್ಧ ಚಿತ್ರ ಪ್ರದರ್ಶಿಸಿ: ಕುವೆಂಪು ಟ್ರಸ್ಟ್‌ನ ಕಾರ್ಯದರ್ಶಿ ಕಡಿದಾಳ್ ರಮೇಶ್, 'ಕುವೆಂಪು ಅವರ ಮನೆಯನ್ನು ರಾಷ್ಟ್ರದ ಅತ್ಯುತ್ತಮ ಕವಿಮನೆಯನ್ನಾಗಿ ಮಾಡಿದ್ದೇವೆ. ಇದು ಇಡೀ ರಾಷ್ಟ್ರದ ಗಮನ ಸೆಳೆಯುವಂತೆ ಮಾಡಲು ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ ಹಾಗೂ ದಸರಾ ಪ್ರದರ್ಶನಗಳಲ್ಲಿ ಸ್ತಬ್ಧಚಿತ್ರ ಪ್ರದರ್ಶಿಸಬೇಕು. ಆಗ ಕವಿ ಮನೆಗೆ ಒಳ್ಳೆಯ ಪ್ರಚಾರ ಸಿಗುತ್ತದೆ. ಅಲ್ಲದೆ, ಲಾಲ್‌ಬಾಗ್‌ನಲ್ಲಿ ಆಯೋಜಿಸುವ ಫಲಪುಷ್ಪ ಪ್ರದರ್ಶನದಲ್ಲಿ ಅವರ ಮನೆಯ ಮಾದರಿಯನ್ನು ರೂಪಿಸಬೇಕು' ಎಂದು ತಿಳಿಸಿದರು.

ದ.ರಾ. ಬೇಂದ್ರೆ ಅವರ ಜನ್ಮದಿನವನ್ನು 'ವಿಶ್ವಕವಿ ದಿನಾಚರಣೆ'ಯಾಗಿ ಆಚರಿಸಬೇಕು ಎಂದು ಬೇಂದ್ರೆ ಟ್ರಸ್ಟ್‌ನ ಪ್ರತಿನಿಧಿಗಳು ಮನವಿ ಮಾಡಿಕೊಂಡರು.

'ಎಲ್ಲ ಟ್ರಸ್ಟ್‌ಗಳ ಮನವಿಗಳನ್ನು ಸಕಾರಾತ್ಮಕ ದೃಷ್ಟಿಯಿಂದಲೇ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುತ್ತೇನೆ. ಟ್ರಸ್ಟ್‌ಗಳ ಕಾರ್ಯನಿರ್ವಹಣೆಗೆ ಅಗತ್ಯ ಅನುದಾನ ಹೆಚ್ಚಿಸಲು ಮುಂಬರುವ ಬಜೆಟ್‌ನಲ್ಲಿ ಹೆಚ್ಚಿನ ಅನುದಾನಕ್ಕೆ ಸಿ.ಎಂಗೆ ಮನವಿ ಮಾಡುತ್ತೇನೆ' ಎಂದು ಶಿವರಾಜ ತಂಗಡಗಿ ಭರವಸೆ ನೀಡಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ನ್ಯಾ. ಪಿ.ಬಿ. ವರಾಳೆ

‘ವೃತ್ತಿಪರ ಶಿಕ್ಷಣ: ಮಾನವ ಹಕ್ಕು ಪಠ್ಯವಾಗಲಿ’

ಪ್ರಜಾವಾಣಿ ವಾರ್ತೆ





ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕೆ.ಕಸ್ತೂರಿ ರಂಗನ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಕುಲಪತಿ ಡಾ.ಎಂ.ಕೆ. ರಮೇಶ್, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ, ಸಚಿವ ಶರಣಪ್ರಕಾಶ್ ಪಾಟೀಲ್ ಇದ್ದಾರೆ(ಎಡಚಿತ್ರ). ಘಟಿಕೋತ್ಸವದಲ್ಲಿ ತಲಾ ಮೂರು ಚಿನ್ನದ ಪದಕಗಳನ್ನು ಪಡೆದ ಬೆಂಗಳೂರಿನ ಪಿಇಎಸ್ ಕಾಲೇಜಿನ ಕೆ. ದೀಪ್ತಿ ಹಾಗೂ ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಎಂಎಲ್‌ಟಿಯ ರಜನಿ ಪಂತ್ ಪರಸ್ಪರ ಸಂತಸ ಹಂಚಿಕೊಂಡರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಆರೋಗ್ಯ ರಕ್ಷಣಾ ವ್ಯವಸ್ಥೆಗಳು ಪ್ರಮುಖ ಸಾಮಾಜಿಕ ಸಂಸ್ಥೆಗಳಾಗಿವೆ ಎಂಬ ಅಂಶವನ್ನು ಗಮನದಲ್ಲಿರಿಸಿಕೊಂಡು ವೃತ್ತಿಪರ ಶಿಕ್ಷಣದಲ್ಲಿ ಮಾನವ ಹಕ್ಕುಗಳನ್ನು ಪರಿಚಯಿಸುವ ಅಗತ್ಯವಿದೆ ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಪ್ರತಿಪಾದಿಸಿದರು.

ಭಾರತೀಯ ವಿಜ್ಞಾನ ಸಂಸ್ಥೆಯ ಜೆ.ಎನ್. ಟಾಟಾ ಸಭಾಂಗಣದಲ್ಲಿ ಶನಿವಾರ ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 25ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದರು.

‘ಆರೋಗ್ಯ ವೃತ್ತಿನಿರತರಿಗೆ ಮಾನವ ಹಕ್ಕುಗಳ ಶಿಕ್ಷಣ ನೀಡಿದರೆ ಅದು ಅವರ ಜ್ಞಾನವನ್ನು ವಿಸ್ತರಿಸಿ, ಸಮರ್ಥನೆಯನ್ನು ಬಲಪಡಿಸಲು ಅನುಕೂಲ ಹಾಗೂ ಮಾನವ ಹಕ್ಕುಗಳ ಮಾನದಂಡಗಳನ್ನು ಜನ ಸಮುದಾಯದ ಪ್ರಮುಖ ಸಾಮಾಜಿಕ ಸಂಸ್ಥೆಗಳಲ್ಲಿ ಅಳವಡಿಸಲು ಹೇಗೆ ಸಾಧ್ಯ ಎಂಬ ಬಗ್ಗೆ ಅನ್ವೇಷಣೆಯಾಗಬೇಕು’ ಎಂದು ಅವರು ಸಲಹೆ ನೀಡಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ‘ಪ್ರಪಂಚದ ಬಲಾಢ್ಯ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿರುವ ಭಾರತಕ್ಕೆ, ಇಲ್ಲಿನ ವೈದ್ಯರೂ ತಮ್ಮ ಕೊಡುಗೆ ನೀಡಬೇಕು. ಪ್ರಾಚೀನ ವೈದ್ಯ ಚಿಕಿತ್ಸೆ ಎನಿಸಿದ ಆಯುರ್ವೇದ ವೈದ್ಯ ಪದ್ಧತಿಗೂ ಆದ್ಯತೆ ನೀಡಬೇಕು. ಎಲ್ಲರೂ ಸ್ವಸ್ಥರಾಗಿದ್ದರೆ, ದೇಶವೂ ಆರೋಗ್ಯ ಪೂರ್ಣವಾಗಿರುತ್ತದೆ. ರೋಗಿಗಳನ್ನು ಮಾನವೀಯ ಮತ್ತು ಅಂತಃಕರಣಪೂರ್ವಕ ಭಾವನೆಯಿಂದ ಉಪಚರಿಸಬೇಕು’ ಎಂದು ಹೇಳಿದರು.

ರಾಜ್ಯದ ವಿವಿಧ ಕಾಲೇಜುಗಳ ಒಟ್ಟು 108 ಚಿನ್ನದ ಪದಕ ಪಡೆದ 97 ವಿದ್ಯಾರ್ಥಿಗಳಿಗೆ ರಾಜ್ಯಪಾಲರು ಪದವಿ ಪ್ರದಾನ ಮಾಡಿದರು.

ಕೆ.ಕಸ್ತೂರಿ ರಂಗನ್, ಪಿ. ಸತೀಶ್ ಚಂದ್ರ ಹಾಗೂ ಎಂ.ಕೆ.ಸುದರ್ಶನ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

51 ಪಿಎಚ್‌ಡಿ: ‘ಈ ಬಾರಿಯ ಘಟಿಕೋತ್ಸವದಲ್ಲಿ ವಿವಿಧ ವಿಷಯಗಳಲ್ಲಿ 49,560 ಅಭ್ಯರ್ಥಿಗಳು ಪದವಿ ಪಡೆದಿದ್ದಾರೆ. ಇವರಲ್ಲಿ 51 ಪಿಎಚ್‌ಡಿ, 150 ಸೂಪರ್ ಸ್ಪೆಷಾಲಿಟಿ, 7,351 ಸ್ನಾತಕೋತ್ತರ ಪದವಿ, 22 ಸ್ನಾತಕೋತ್ತರ ಡಿಪ್ಲೊಮಾ ಪದವಿ, 277 ಫೆಲೋಷಿಪ್ ಕೋರ್ಸ್, 9 ಸರ್ಟಿಫಿಕೆಟ್ ಕೋರ್ಸ್ ಹಾಗೂ 41,700 ಸ್ನಾತಕ ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗಿದೆ. ವಿಶ್ವವಿದ್ಯಾಲಯದ ಎಲ್ಲ ನಿಕಾಯಗಳ ಒಟ್ಟಾರೆ ಫಲಿತಾಂಶ ಶೇ 84.26ರಷ್ಟಿದೆ’ ಎಂದು ಕುಲಪತಿ ಡಾ.ಎಂ.ಕೆ.ರಮೇಶ್ ಮಾಹಿತಿ ನೀಡಿದರು.

> **ನನಗೆ ಈ ದಿನ ಅತ್ಯಂತ ಸಂತಸ ತಂದಿದೆ. ನಾನು ಹೃದಯ ತಜ್ಞನಾಗಿ ಭವಿಷ್ಯದಲ್ಲಿ ಯಶಸ್ಸನ್ನು ಸಾಧಿಸುತ್ತೇನೆ**
> **ಡಾ.ಅನೀಶ್ ಜೈನ್** ಹೃದಯರೋಗ ತಜ್ಞ, ಪುಣೆ ನಿವಾಸಿ

> **ಭವಿಷ್ಯದಲ್ಲಿ ಪೆರಿಯಡಾಂಟಿಕ್ಸ್ (ದಂತವೈದ್ಯ ಶಾಸ್ತ್ರ) ವಿಭಾಗದಲ್ಲೇ ಹೆಚ್ಚಿನ ನೈಪುಣ್ಯ ಸಾಧಿಸಿ ವೃತ್ತಿಪರ ವೈದ್ಯಳಾಗುತ್ತೇನೆ**
> **ಡಾ.ಕೀರ್ತಿ ಉಮಾಶಂಕರ್** ಎಂ.ಡಿ.ಎಸ್ ಆರ್ ಜಿ ಯು ಕಾಲೇಜು, ಹೆಬ್ಬಾಳ, ಬೆಂಗಳೂರು

> **ಆಯುರ್ವೇದದ ಶಸ್ತ್ರ ಚಿಕಿತ್ಸೆಯ ಶಲ್ಯತಂತ್ರದಲ್ಲೇ ವೃತ್ತಿ ಮುಂದುವರಿಸಿ ಆಯುರ್ವೇದದ ಮಹತ್ವವನ್ನು ಹೆಚ್ಚಿಸುತ್ತೇನೆ**
> **ಡಾ.ಅಂಜು ಜಿ.ದಾಸ್,** ಆಯುರ್ವೇದ ಸ್ನಾತಕೋತ್ತರ ಪದವೀಧರೆ ತಾರಾನಾಥ ಸರ್ಕಾರಿ ಆಯುರ್ವೇದ ಕಾಲೇಜು, ಬಳ್ಳಾರಿ



ನಗರದಲ್ಲಿ ಶನಿವಾರ ಹಾರ್ಪರ್ ಪ್ರಕಾಶನ ಆಯೋಜಿಸಿದ್ದ ‘ಫ್ರಮ್ ಮಂಜುನಾಥ್ ಟು ಮಂಜಮ್ಮ’ ಆತ್ಮಕಥನ ಬಿಡುಗಡೆ ಸಮಾರಂಭದಲ್ಲಿ ಮಂಜಮ್ಮ ಜೋಗತಿ ಮಾತನಾಡಿದರು. ಕಥೆಗಾರ ವಸುಧೇಂದ್ರ, ಲೇಖಕಿ ಹರ್ಷ ಭಟ್ ಇದ್ದಾರೆ.

ದೈವತ್ವದೊಂದಿಗೆ ಬೆಸೆದ ‘ಲಿಂಗ ಪರಿವರ್ತನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅವನು ಅವಳಾಗುವ, ಅವಳು ಅವನಾಗುವ’ ದೈಹಿಕ-ಭಾವನಾತ್ಮಕ ಪ್ರಕ್ರಿಯೆಗಳು ಭಾರತದಲ್ಲಿ ದೈವತ್ವದ ಜತೆ ಬೆಸೆದುಕೊಂಡು ಜೀವನೋಪಾಯದ ಮಾರ್ಗಗಳಾಗಿಯೂ ರೂಪು ಪಡೆದಿವೆ ಎಂದು ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷೆ ಮಂಜಮ್ಮ ಜೋಗತಿ ಹೇಳಿದರು.

ನಗರದ ಚರ್ಚ್‌ಸ್ಟ್ರೀಟ್‌ನ ದಿ ಬುಕ್‌ವರ್ಮ್‌ನಲ್ಲಿ ಶನಿವಾರ ಹಾರ್ಪರ್ ಪ್ರಕಾಶನ ಆಯೋಜಿಸಿದ್ದ ಅವರದೇ ಆತ್ಮಕಥನ ‘ಫ್ರಮ್ ಮಂಜುನಾಥ್ ಟು ಮಂಜಮ್ಮ’ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಲಿಂಗ ಬದಲಾವಣೆಗೆ ಒಳಗಾದವರು ದೈವದ ಸನ್ನಿಧಿಯಿಂದಲೇ ತಮ್ಮ ಪರಿವರ್ತನೆಯ ನಂತರದ ಹೊಸ ದಾರಿ ಹುಡುಕಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಯಲ್ಲಮ್ಮ, ಹುಚ್ಚಂಗ್ಯಮ್ಮ, ರೇಣುಕಾ ದೇವಿ ಹೆಸರಿನ ದೇವತೆಯರು ಇದ್ದಾರೆ. ಹಾಗೆಯೇ, ಬೇರೆಬೇರೆ ರಾಜ್ಯಗಳಲ್ಲೂ ವಿಭಿನ್ನತೆಗಳಿವೆ. ಪ್ರತಿಯೊಬ್ಬರೂ ಸ್ಥಳೀಯ ದೈವಗಳನ್ನೇ ಅನುಸರಿಸುತ್ತಾರೆ. ದೈವತ್ವದ ಸ್ವರೂಪ ಇರುವ ಕೆಲವರಿಗೆ ದೇವರು ಬಂದಂತಹ ಅನುಭವಗಳಾದರೂ, ಬಹುತೇಕರು ತಮ್ಮ ಅಸ್ತಿತ್ವ ಕಂಡುಕೊಳ್ಳಲು ದೈವತ್ವವನ್ನು ಬಳಸಿಕೊಳ್ಳುವುದು ಗುಟ್ಟಾಗಿ ಉಳಿದಿಲ್ಲ’

‘ಜಮದಗ್ನಿಯ ಕೋಪಕ್ಕೆ ಇಡೀ ಕುಟುಂಬ ನಾಶವಾದರೂ, ಪರಶುರಾಮನ ಬುದ್ಧಿವಂತಿಕೆ, ಕುಟುಂಬ ಪ್ರೀತಿಯ ಫಲವಾಗಿ ತಾಯಿ, ಸಹೋದರರು ಮರಳಿ ಜೀವ ಪಡೆದರು. ತಾಯಿ ರೇಣುಕಾ ನಾವು ಆರಾಧಿಸುವ ದೇವಿ. ಪರಶುರಾಮನ ಸಹೋದರರೇ ಜೋಗತಿಯರು’ ಎಂದು ವಿವರಿಸಿದರು.

ಲೇಖಕಿ ಹರ್ಷ ಭಟ್, ಕಥೆಗಾರ ವಸುಧೇಂದ್ರ ಉಪಸ್ಥಿತರಿದ್ದರು.

‘ಮಾನವೀಯತೆಯಿಂದ ಕಾರ್ಯನಿರ್ವಹಿಸಿ’

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಆಯ್ಕೆಯಾದವರಿಗೆ ಡಿ.ಕೆ.ಶಿವಕುಮಾರ್ ಕಿವಿಮಾತು

ಪ್ರಜಾವಾಣಿ ವಾರ್ತೆ



ಯುಪಿಎಸ್‌ಸಿ ಪರೀಕ್ಷೆಯಲ್ಲಿ 55ನೇ ರ‍್ಯಾಂಕ್ ವಿಜೇತರಿಗೆ ಎಚ್.ಎಸ್. ಭಾವನಾ ಅವರನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಆದಿಚುಂಚನಗಿರಿ ಮಹಾಸಂಸ್ಥಾನದ ನಿರ್ಮಲಾನಂದನಾಥ ಸ್ವಾಮೀಜಿ ಸನ್ಮಾನಿಸಿದರು. ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಸಚಿವ ಎನ್. ಚಲುವರಾಯಸ್ವಾಮಿ, ವಿಜಯನಗರ ಶಾಖಾ ಮಠ ಸೌಮ್ಯನಾಥ ಸ್ವಾಮೀಜಿ, ಸಾಹಿತಿ ಚಂದ್ರಶೇಖರ ಕಂಬಾರ, ಕೃಷಿಕ್ ಸರ್ವೋದಯ ಫೌಂಡೇಷನ್ ಅಧ್ಯಕ್ಷ ವೈ.ಕೆ. ಪುಟ್ಟಸೋಮೇಗೌಡ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂದೆ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುವವರು ಮಾನವೀಯತೆ ಮತ್ತು ಹೃದಯ ಶ್ರೀಮಂತಿಕೆಯಿಂದ ಕೆಲಸ ಮಾಡಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನಾಗರಿಕ ಸೇವೆಗಳಿಗೆ ಆಯ್ಕೆಯಾದವರಿಗೆ ಆದಿಚುಂಚನಗಿರಿ ಮಠದಿಂದ ಶನಿವಾರ ಬೆಂಗಳೂರಿನ ಆದಿಚುಂಚನಗಿರಿ ಮಠದ ಬಿಜಿಎಸ್ ಸಿಇಟಿ ಸಭಾಂಗಣದಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳು ಕಾನೂನು ರೂಪಿಸುತ್ತಾರೆ. ಅಧಿಕಾರಿಗಳಾಗಿ ಆಯ್ಕೆಯಾಗುವ ನೀವು ಅದನ್ನು ಅನುಷ್ಠಾನಗೊಳಿಸುತ್ತೀರಿ. ನಾವು, ನೀವು ತಪ್ಪು ಮಾಡಿದರೆ ಪ್ರಶ್ನಿಸಲು ನ್ಯಾಯಾಂಗ ಇದೆ. ಮೂರು ಅಂಗಗಳು ತಪ್ಪು ಮಾಡದಂತೆ ಎಚ್ಚರಿಸಲು ಮಾಧ್ಯಮ ರಂಗ ಇದೆ’ ಎಂದು ವಿವರಿಸಿದರು.

‘ಅಪಾಯದಲ್ಲಿ ಧೈರ್ಯ, ಕಷ್ಟದಲ್ಲಿ ತಾಳ್ಮೆ, ನಷ್ಟದಲ್ಲಿ ಸಹನೆ, ತೊಂದರೆಯಲ್ಲಿ ಶಾಂತಿ, ದುಃಖದಲ್ಲಿ ಸಮಾಧಾನದಿಂದ ಇದ್ದವರಿಗೆ ಭಯ ಇರುವುದಿಲ್ಲ. ಬದುಕಿನಲ್ಲಿ ಸಹಾಯ ಮಾಡಿದವರನ್ನು ಮರೆಯಬಾರದು. ಜನರು ಕಷ್ಟ ಎಂದು ನಿಮ್ಮ ಬಳಿ ಬಂದಾಗ ಸಹಾಯ ಮಾಡಿ’ ಎಂದು ಸಲಹೆ ನೀಡಿದರು.

ಸಾಧನೆ ಮಾಡಲು ನಾಲ್ಕು ‘ಡಿ’ಗಳಾದ ಡ್ರೀಂ, ಡಿಸೈರ್, ಡೆಡಿಕೇಶನ್, ಡಿಸಿಪ್ಲಿನ್ ಇರಬೇಕು. ಸರಿಯಾದ ಕನಸು, ಅದನ್ನು ನನಸು ಮಾಡುವ ವಿಶ್ವಾಸ, ಬದ್ಧತೆ, ಶಿಸ್ತು, ಪರಿಶ್ರಮಗಳಿದ್ದಾಗ ಗುರಿ ಸಾಧಿಸಲು ಸಾಧ್ಯವಾಗುತ್ತದೆ. ಇಂಥ ಸಾಧಕ, ಪ್ರತಿಭಾವಂತ ಯುವಜನರೇ ದೇಶದ ಆಸ್ತಿ ಎಂದರು.

ಪ್ರತಿ ಮನುಷ್ಯನಿಗೆ ತಂದೆತಾಯಿಯರ ಋಣ, ದೇವರ ಋಣ, ಗುರುವಿನ ಋಣ ಮತ್ತು ಸಮಾಜದ ಋಣಗಳಿರುತ್ತವೆ. ಈ ಋಣಗಳನ್ನು ತೀರಿಸುವ ಜವಾಬ್ದಾರಿ ಪ್ರತಿಯೊಬ್ಬರಲ್ಲಿ ಇರುತ್ತದೆ. ನೀವು ಉತ್ತಮ ಸ್ಥಾನಗಳಿಗೆ ಹೋದಾಗ ಈ ಋಣಗಳನ್ನು ಮರೆಯಬಾರದು ಎಂದು ತಿಳಿಸಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ‘ನೀವು ಅಧಿಕಾರಿಗಳಾಗಿ ಬರುವುದು ಸಮಾಜದ ಸೇವೆ ಮಾಡಲು. ಹಾಗಾಗಿ ಹಣದ ಹಿಂದೆ ಹೋಗಬೇಡಿ. ದುಡ್ಡಿನಿಂದ ನಿಮ್ಮ ಹುದ್ದೆಯನ್ನು ಅಳೆಯಬೇಡಿ’ ಎಂದು ತಿಳಿಸಿದರು.

‘ನಮಗೆ ಹೊರಗಿನ ಮಿತ್ರರು, ಶತ್ರುಗಳು ಮಾಡುವ ಒಳ್ಳೆಯದು, ಕೆಟ್ಟದಕ್ಕಿಂತ ನಮ್ಮೊಳಗೆ ಇರುವ ಮಿತ್ರ, ಶತ್ರು ಮಾಡುವ ಒಳ್ಳೆಯದು, ಕೆಟ್ಟದು ಜಾಸ್ತಿ. ನಮ್ಮನ್ನು ನಾವು ಹಾಳು ಮಾಡಿದಷ್ಟು ಹೊರಗಿನವರು ಮಾಡುವುದಿಲ್ಲ. ಒಳ್ಳೆಯದನ್ನೇ ಯೋಚಿಸಿ, ಒಳ್ಳೆಯದನ್ನೇ ಮಾಡಿ’ ಎಂದರು.

ವಿಜಯನಗರ ಶಾಖಾಮಠದ ಸೌಮ್ಯನಾಥ ಸ್ವಾಮೀಜಿ, ಕೃಷಿ ಸಚಿವ ಚಲುವರಾಯ ಸ್ವಾಮಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಸಾಹಿತಿ ಚಂದ್ರಶೇಖರ ಕಂಬಾರ, ಕೃಷಿಕ್ ಸರ್ವೋದಯ ಫೌಂಡೇಷನ್ ಅಧ್ಯಕ್ಷ ವೈ.ಕೆ. ಪುಟ್ಟಸ್ವಾಮಿ ಗೌಡ, ವಿಜಯವಾಣಿ ಪ್ರಧಾನ ಸಂಪಾದಕ ಚನ್ನೇಗೌಡ ಇದ್ದರು.

ಎಮ್ಮೆ ಹಾಲಿನ ಖರೀದಿ ದರ ₹9.20 ಹೆಚ್ಚಳ

ಕಲಬುರಗಿ: ‘ಎಮ್ಮೆ ಹಾಲಿನ ಉತ್ಪಾದನೆ ಉತ್ತೇಜಿಸಲು ರೈತರಿಂದ ಖರೀದಿಸುವ ಎಮ್ಮೆ ಹಾಲಿನ ದರವನ್ನು ಪ್ರತಿ ಲೀಟರ್‌ಗೆ ಜೂನ್ 11ರಿಂದ ₹9.20 ಹೆಚ್ಚಿಸಲಾಗುತ್ತಿದೆ. ಇದು ರಾಜ್ಯದಲ್ಲಿ ಹಾಲು ಒಕ್ಕೂಟವೊಂದು ಮಾಡಿದ ಗರಿಷ್ಠ ಹೆಚ್ಚಳವಾಗಿದೆ’ ಎಂದು ಕಲಬುರಗಿ, ಬೀದರ್, ಯಾದಗಿರಿ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷ ಆರ್. ಕೆ.ಪಾಟೀಲ ತಿಳಿಸಿದರು.

‘ಪ್ರಸ್ತುತ ಪ್ರತಿ ಲೀಟರ್ ಎಮ್ಮೆ ಹಾಲಿನ ಖರೀದಿ ದರ ₹36.80 ಇತ್ತು. ಅದು ಇದೀಗ ₹46ಕ್ಕೆ ಹೆಚ್ಚಾಗಲಿದೆ. ಈ ಮೊತ್ತವನ್ನು ಹಾಲು ಉತ್ಪಾದಕರ ಸಂಘಗಳಿಗೆ ಪಾವತಿಸಲಾಗುವುದು’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಮೂರು ಜಿಲ್ಲೆಗಳಿಂದ ನಿತ್ಯ ಸರಾಸರಿ 2,500 ಲೀಟರ್ ಎಮ್ಮೆ ಹಾಲು ಉತ್ಪಾದನೆಯಾಗುತ್ತಿದೆ. ಪ್ರತಿತಿಂಗಳು ಅಂದಾಜು ₹ 7 ಲಕ್ಷವನ್ನು ಒಕ್ಕೂಟವು ಹೆಚ್ಚುವರಿಯಾಗಿ ರೈತರಿಗೆ ಪಾವತಿಸಲಿದೆ. ಎಮ್ಮೆ ಹಾಲಿನ ಉತ್ಪಾದನೆ ನಿತ್ಯ 10 ಸಾವಿರ ಲೀಟರ್‌ಗಳಿಗೆ ಹೆಚ್ಚಿಸುವ ಗುರಿ ಇದೆ’ ಎಂದು ಹೇಳಿದರು.

ನೂರು ದಿನ: 11 ಲಕ್ಷ ಜನರ ಪಯಣ

• ಸಂದೀಪ್



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2 ಕಾರ್ಯಾಚರಣೆ ಆರಂಭಿಸಿದ ಮೊದಲ ನೂರು ದಿನಗಳಲ್ಲಿ 11 ಲಕ್ಷಕ್ಕೂ ಹೆಚ್ಚಿನ ಪ್ರಯಾಣಿಕರು ಇಲ್ಲಿಂದ ಪ್ರಯಾಣಿಸಿದ್ದಾರೆ.


ಇದೇ ಜನವರಿ 15ರಿಂದ ಕಾರ್ಯಾಚರಣೆ ಆರಂಭಿಸಿದ ಮೊದಲ ನೂರು ದಿನಗಳಲ್ಲಿ ಈ ಟರ್ಮಿನಲ್ ಅನ್ನು ಒಟ್ಟು 11,33,645 ಪ್ರಯಾಣಿಕರು ಬಳಸಿದ್ದಾರೆ. ಒಟ್ಟು 7501 ವಿಮಾನಗಳು ಹಾರಾಟ ನಡೆಸಿದ್ದು, ಶೇ 76ರಷ್ಟು ವಿಮಾನ ನಿಗದಿತ ಸಮಯಕ್ಕೆ ಆಗಮಿಸಿ, ನಿರ್ಗಮಿಸಿವೆ ಎಂಬ ದತ್ತಾಂಶವನ್ನು ವಿಮಾನ ನಿಲ್ದಾಣ ಪ್ರಾಧಿಕಾರ ಹಂಚಿಕೊಂಡಿದೆ.

ಪ್ರಸ್ತುತ ಕೇವಲ ದೇಶೀಯ ವಿಮಾನ ಮಾತ್ರ ಇಲ್ಲಿಂದ ಹಾರಾಟ ಮಾಡುತ್ತಿದ್ದು, ಸೆಪ್ಟೆಂಬರ್ 1ರಿಂದ ಅಂತರರಾಷ್ಟ್ರೀಯ ವಿಮಾನಗಳ ಹಾರಾಟಕ್ಕೆ ಮುಕ್ತವಾಗಲಿದ್ದು, ಅಲ್ಲಿಂದ ಅಂತರರಾಷ್ಟ್ರೀಯ ವಿಮಾನಗಳ ಹಾರಾಟಕ್ಕೆ ಮಾತ್ರ ಟರ್ಮಿನಲ್-2 ಸೀಮಿತವಾಗಲಿದೆ.

ಒಟ್ಟು 2,55,661 ಚದರ ಮೀಟರ್ ವಿಸ್ತೀರ್ಣ ಹೊಂದಿರುವ ಟರ್ಮಿನಲ್-2 ಪ್ರಾರಂಭಿಕ ದಿನಗಳಲ್ಲಿ ಆಕಾಸ್ ಏರ್‌ವೇಸ್, ಏರ್ ಏಷ್ಯಾ, ವಿಸ್ತಾರ ಸಂಸ್ಥೆಗಳ ವಿಮಾನಗಳು ಮಾತ್ರ ಬಳಕೆ ಮಾಡಿವೆ. ಮೊದಲಿಗೆ ಆಕಾಸ್ ಏರ್ ವೇಸ್ ಮಾತ್ರವೇ ಹಾರಾಟ ಮಾಡುತಿತ್ತು, ಒಂದು ತಿಂಗಳ ನಂತರ ಏರ್ ಏಷ್ಯಾ ತನ್ನ ಸೇವೆಯನ್ನು ಈ ಟರ್ಮಿನಲ್‌ಗೆ ವಿಸ್ತರಣೆ ಮಾಡಿತ್ತು.

ಹೊಸ ಟರ್ಮಿನಲ್‌ನಿಂದ ದೇಶದ 43 ವಿವಿಧ ನಗರಗಳಿಗೆ ಏರ್ ಏಷ್ಯಾ ವಿಮಾನಯಾನ ಸಂಸ್ಥೆಯೂ ಸೇವೆ ನೀಡುತ್ತಿದ್ದು, ಒಟ್ಟಾರೆಯಾಗಿ ಮೊದಲ ನೂರು ದಿನಗಳಲ್ಲಿ ಒಟ್ಟು 7,71,650 ಪ್ರಯಾಣಿಕರು ಹೊತ್ತು ತಂದ ಬ್ಯಾಗ್‌ಗಳನ್ನು ಹೊಸ ಟರ್ಮಿನಲ್ ನಿರ್ವಹಣೆ ಮಾಡಿದೆ.

ಹಳೆಯ ಟರ್ಮಿನಲ್-1 ನಿಂದ ಹೊಸ ಟರ್ಮಿನಲ್-2ಗೆ ಪ್ರಯಾಣಿಕನ್ನು ಉಚಿತವಾಗಿ ಬಸ್‌ಗಳ ಮೂಲಕ ಸಾಗಿಸಲು ಶೆಟಲ್ ಬಸ್ ಸೇವೆಯನ್ನೂ ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರ ಒದಗಿಸುತ್ತಿದೆ. ದಿನವಿಡಿ ಬಸ್‌ಗಳು ಟರ್ಮಿನಲ್1 ರಿಂದ ಟರ್ಮಿನಲ್2ಗೆ ಸಂಚಾರ ಮಾಡುತ್ತಿರುತ್ತವೆ. ಮೊದಲ ನೂರು ದಿನಗಳಲ್ಲಿ ಎರಡು ಟರ್ಮಿನಲ್ ನಡುವೆ ಶೆಟಲ್ ಬಸ್ ಒಟ್ಟು 28,040 ಟ್ರಿಪ್ ಪೂರ್ಣಗೊಳಿಸಿವೆ ಎಂದು ವಿಮಾನ ನಿಲ್ದಾಣ ಪ್ರಾಧಿಕಾರ ಮಾಹಿತಿ ನೀಡಿದೆ.



ಪಠ್ಯ ಪರಿಷ್ಕರಣೆಗೆ ಮಾಜಿ ಶಿಕ್ಷಣ ಸಚಿವ ನಾಗೇಶ್ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೈಕ್ಷಣಿಕ ವರ್ಷ ಆರಂಭವಾಗಿರುವ ಸಮಯದಲ್ಲಿ ಮುಖ್ಯ ಕೆಲಸಗಳತ್ತ ಗಮನಹರಿಸದೇ ಪಠ್ಯಪುಸ್ತಕ ಪರಿಷ್ಕರಣೆ ಕುರಿತು ಚರ್ಚಿಸುತ್ತಾ ತಮ್ಮ ಸುತ್ತಲು ಇರುವ ಬುದ್ಧಿಜೀವಿಗಳನ್ನು ಖುಷಿಪಡಿಸುವ ಕೆಲಸದಲ್ಲಿ ಸರ್ಕಾರ ನಿರತವಾಗಿದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾಜಿ ಸಚಿವ ಬಿ.ಸಿ.ನಾಗೇಶ್ ಟೀಕಿಸಿದ್ದಾರೆ.

ಕಲಿಕಾ ಚೇತರಿಕೆ ಅನುಷ್ಠಾನ, ಸರ್ಕಾರಿ ಶಾಲಾ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರ ವಿತರಣೆ ಹಾಗೂ ಶಿಕ್ಷಕರ ನೇಮಕ ಪ್ರಕ್ರಿಯೆ ಸೇರಿ ಅನೇಕ ವಿಷಯಗಳು ರಾಜ್ಯದ ಮುಖ್ಯಮಂತ್ರಿ ಮುಂದಿವೆ. ಆದರೆ, ಅವುಗಳ ಬಗ್ಗೆ ಗಮನಹರಿಸುತ್ತಿಲ್ಲ. ಬುದ್ಧಿಜೀವಿಗಳು ತಮಗೆ ಬೇಕೆನಿಸುವ ವಿಚಾರಗಳನ್ನು ಪಠ್ಯಪುಸ್ತಕಗಳಲ್ಲಿ ತುಂಬುವ ಮೂಲಕ ತಮ್ಮ ಕಾರ್ಯಸೂಚಿಗಳನ್ನು ಮುಗ್ಧ ಮಕ್ಕಳ ಮನಸ್ಸಿನಲ್ಲಿ ತುಂಬಲು ಮತ್ತೆ ಪ್ರಯತ್ನಿಸುತ್ತಿದ್ದಾರೆ. ಇಂತಹ ಕೆಲಸಗಳಿಗೆ ರಾಜ್ಯ ಸರ್ಕಾರ ಅವಕಾಶ ನೀಡಬಾರದು. ಸರ್ಕಾರಿ ಶಾಲೆಗಳು ಹಾಗೂ ಬಡ ಮಕ್ಕಳ ಶಿಕ್ಷಣದ ಕಡೆ ಗಮನ ಹರಿಸಬೇಕು ಎಂದು ಹೇಳಿದರು.

ಕೋವಿಡ್ ಹಿನ್ನೆಲೆಯಲ್ಲಿ ಶಾಲಾ ಮಕ್ಕಳಲ್ಲಿ ಉಂಟಾಗಿದ್ದ ಕಲಿಕಾ ನಷ್ಟ ಸರಿದೂಗಿಸಲು ಬಿಜೆಪಿ ಸರ್ಕಾರ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿತ್ತು. ಕಾರ್ಯಕ್ರಮದ ಯಶಸ್ವಿ ಅನುಷ್ಠಾನದಿಂದ ಮಕ್ಕಳ ಕಲಿಕಾ ಹಿನ್ನಡೆಯನ್ನು ಸರಿದೂಗಿಸಲು ಸಾಧ್ಯವಾಗಿದೆ. 2023-24ನೇ ಸಾಲಿನಲ್ಲಿ 'ಕಲಿಕಾ ಚೇತರಿಕೆ' ಮುಂದುವರಿಸುವ ಅಗತ್ಯವಿದೆ. ಸುಮಾರು ₹ 70 ಕೋಟಿ ವೆಚ್ಚದ ಈ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ಅಸಡ್ಡೆ ತೋರಿದೆ ಎಂದರು.

ಸರ್ಕಾರಿ ಶಾಲಾ ಮಕ್ಕಳಲ್ಲಿನ ಅಪೌಷ್ಟಿಕತೆ ನಿವಾರಿಸುವ ವಿಚಾರದಲ್ಲಿ ಮೌನ ಮುರಿಯಬೇಕು. ಬುದ್ಧಿಜೀವಿ ಎಂದು ಘೋಷಿಸಿಕೊಂಡಿರುವ ಕೆಲವು ವ್ಯಕ್ತಿಗಳಿಂದ ಪಠ್ಯಪುಸ್ತಕ ಪರಿಷ್ಕರಣೆ ಮಾಡುವ ನಿರ್ಧಾರ ಕೈಬಿಟ್ಟು, ಮಕ್ಕಳ ಶಿಕ್ಷಣ ಮತ್ತು ಆರೋಗ್ಯದ ಕಡೆಗೆ ಗಮನಹರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಶಿವಮೊಗ್ಗ: ಇಂಡಿಗೋ ವಿಮಾನ ಹಾರಾಟ ಆ.11ರಿಂದ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮಲೆನಾಡಿನಲ್ಲಿ ಕೊನೆಗೂ ಲೋಹದ ಹಕ್ಕಿಗಳ ಕಲರವ ಗರಿಗೆದರಲು ಮುಹೂರ್ತ ಕೂಡಿ ಬಂದಿದೆ. ಆಗಸ್ಟ್ 11ರಂದು ಶಿವಮೊಗ್ಗದ ಸೋಗಾನೆ ವಿಮಾನ ನಿಲ್ದಾಣದಿಂದ ಇಂಡಿಗೋ ಸಂಸ್ಥೆಯ ಮೊದಲ ವಿಮಾನ ಬೆಂಗಳೂರಿನತ್ತ ಹಾರಲಿದೆ.

‘ಅದೇ ದಿನದಿಂದ ಶಿವಮೊಗ್ಗ–ಬೆಂಗಳೂರು ನಡುವೆ ಅಧಿಕೃತವಾಗಿ ವಿಮಾನ ಹಾರಾಟ ಶುರುವಾಗಲಿದೆ’ ಎಂದು ಇಂಡಿಗೋ ವಿಮಾನಯಾನ ಸಂಸ್ಥೆಯ ಹುಬ್ಬಳ್ಳಿ ವಲಯದ ಮುಖ್ಯಸ್ಥ ಮನೋಜ್ ಪ್ರಭು ‘ಪ್ರಜಾವಾಣಿ’ಗೆ ಖಚಿತಪಡಿಸಿದರು.

‘ವಿಮಾನ ಪ್ರತಿದಿನ ಬೆಳಿಗ್ಗೆ 9ಕ್ಕೆ ಬೆಂಗಳೂರಿನ ಕೆಂಪೇಗೌಡ ಅಂತ ರಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಲಿದೆ. ಶಿವಮೊಗ್ಗಕ್ಕೆ ಬೆಳಿಗ್ಗೆ 10.30ಕ್ಕೆ ಬರಲಿದೆ. ಮಧ್ಯಾಹ್ನ 12ಕ್ಕೆ ವಾಪಸ್ ತೆರಳಲಿದೆ. ಮಧ್ಯಾಹ್ನ 1.30ಕ್ಕೆ ಬೆಂಗಳೂರು ತಲುಪಲಿದೆ. ಪ್ರಯಾಣಿಕರ ಸ್ಪಂದನೆ ನೋಡಿಕೊಂಡು ಬೇರೆ ಕಡೆಗೆ ವಿಮಾನ ಹಾರಾಟ ಆರಂಭಿಸಲಿದ್ದೇವೆ. ಸದ್ಯ ದಿನಕ್ಕೆ ಒಂದು ಬಾರಿ ಮಾತ್ರ ವಿಮಾನ ಹಾರಾಟ ನಡೆಸಲಿದೆ’ ಎಂದು ಹೇಳಿದರು.

‘ಇಂಡಿಗೋ ಸಂಸ್ಥೆಯ ಎಟಿಆರ್ 72 ಮಾದರಿಯ 78 ಆಸನಗಳ ವಿಮಾನ ಹಾರಾಟ ಆರಂಭಿಸಲಿದೆ. ಜೂನ್ ತಿಂಗಳ ಕೊನೆಯ ವಾರ ಇಲ್ಲವೇ ಜುಲೈ ಮೊದಲ ವಾರ ವಿಮಾನ ಹಾರಾಟಕ್ಕೆ ಅಧಿಕೃತ ಚಾಲನೆಯ ಸಂಭ್ರಮ ಸೋಗಾನೆ ವಿಮಾನ ನಿಲ್ದಾಣದಲ್ಲಿ ಹಂಚಿಕೊಳ್ಳಲಿದ್ದೇವೆ. ನಂತರ ಟಿಕೆಟ್ ಬುಕ್ಕಿಂಗ್ ಆರಂಭವಾಗಲಿದೆ’ ಎಂದು ಮನೋಜ್ ಪ್ರಭು ಅವರು ತಿಳಿಸಿದರು.

ಐದು ತಿಂಗಳ ನಂತರ ಬಳಕೆ: ಸೋಗಾನೆ ವಿಮಾನ ನಿಲ್ದಾಣವನ್ನು ಫೆಬ್ರುವರಿ 27ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದ್ದಾರೆ. ಆಗಿನಿಂದಲೂ ಇಲ್ಲಿಂದ ವಿಮಾನ ಕಾರ್ಯಾಚರಣೆ ಆರಂಭವಾಗುವುದನ್ನು ಮಲೆನಾಡಿನ ಜನರು ಕಾಯುತ್ತಿದ್ದಾರೆ. ಅಂತೂ ಐದು ತಿಂಗಳ ನಂತರ ಕನಸು ನನಸಾಗಲು ಮುಹೂರ್ತ ನಿಗದಿ ಆಗಿದೆ.

ವಿಧಾನಸಭೆ ಚುನಾವಣೆ ವೇಳೆ ಗಣ್ಯರ ಓಡಾಟಕ್ಕೆ ವಿಮಾನ ನಿಲ್ದಾಣ ನೆರವಾಗಿತ್ತು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಇಲ್ಲಿ ಬಂದಿಳಿದಿದ್ದರು.

ಬೆಂಗಳೂರು ರೇಸ್

ನಾರ್ದರ್ನ್ ಲೈಟ್ಸ್ ಗೆಲ್ಲುವ ನಿರೀಕ್ಷೆ

ಕೃಷ್ಣರಾಜ ಒಡೆಯರ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾರ್ದರ್ನ್ ಲೈಟ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸನ್‌ವೇ ಲಾಗೂನ್ 4, ಬೆನಿಗ್ನಿಟಿ 3, ವಾರ್ ಟ್ರಯಲ್ 1
2ನೇ ರೇಸ್: ಯೂಕಾನ್ 3, ಅಂಡೊರ 5, ಡೆಲ್‌ಮಾರ್ 6
3ನೇ ರೇಸ್: ಅಕ್ವಾಮೆಟಿಕ್ 7, ಅಗೆರಾ 3, ಅಹರ್ನೆ 1
4ನೇ ರೇಸ್: ಟಾಪ್ ಡ್ಯಾನ್ಸರ್ 2, ಟರ್ಕೋಮ್ಯಾನ್ 1, ರಾಪ್ಸೋಡಿ ಇನ್ ಗ್ರೀನ್ 5
5ನೇ ರೇಸ್: ಇನ್ವಿನ್ಸಬಲ್ 2, ಲಾಂಗ್ ಲೀಸ್ 6, ಲೀಗಲ್ ಅರಿಸ್ಟೋಕ್ರಸಿ 7
6ನೇ ರೇಸ್: ನಾರ್ದರ್ನ್ ಲೈಟ್ಸ್ 2, ಒನ್ಸ್ ಯು ಗೋ ಬ್ಲ್ಯಾಕ್ 4, ಲಾ ರೀನಾ 5
7ನೇ ರೇಸ್: ಸಿಂಥೆಸಿಸ್ 2, ಆಲ್ ಅಟ್ರ್ಯಾಕ್ಷನ್ 1, ಸಾಯ್ಗಾನ್ 3

ಉತ್ತಮ ಬೆಟ್: ಯೂಕಾನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ನಗರದಲ್ಲಿ ಇಂದು

ರನ್ನರ್ಸ್ ಜಾತ್ರೆ: ಆಯೋಜನೆ: ಬೆಂಗಳೂರು ಸ್ಪೋರ್ಟ್ಸ್ ಫೌಂಡೇಷನ್, ಸ್ಥಳ: ಅಟಲ್ ಬಿಹಾರಿ ವಾಜಪೇಯಿ, ಕ್ರೀಡಾಂಗಣ, ಎಚ್.ಎಸ್.ಆರ್. ಲೇಔಟ್, ಬೆಳಿಗ್ಗೆ 5.30ರಿಂದ

ಹಾಡು ಕಲಿ ಹಾಡಿ ನಲಿ: ಆಯೋಜನೆ: ಅಪ್ಪು ಮ್ಯೂಸಿಕ್ ಅಕಾಡೆಮಿ, ಸ್ಥಳ: ಯಕ್ಷಿತಾ ರಾಯಲ್ ಅಕಾಡೆಮಿ, ಮಾಗಡಿ ರಸ್ತೆ, ಬೆಳಿಗ್ಗೆ 9

ಕಲಾಂಗಣದಲ್ಲಿ ನಾವು–ನೀವು: ಉಪಸ್ಥಿತಿ: ಮಾಲಿನಿ ರವಿಶಂಕರ್, ರವಿಶಂಕರ್ ಬಿ.ಕೆ., ಆಯೋಜನೆ ಮತ್ತು ಸ್ಥಳ: ಸುಪ್ರದಾ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ರಾಘವೇಂದ್ರ ಸ್ವಾಮಿ ಮಠದ ಎದುರು, ರಾಜಕುಮಾರ್ ರಸ್ತೆ, ರಾಜಾಜಿನಗರ, ಬೆಳಿಗ್ಗೆ 10ರಿಂದ

ಸಿದ್ಧಲಿಂಗಯ್ಯ ಅವರ ಪುಣ್ಯಸ್ಮರಣೆ, ರಾಷ್ಟ್ರೀಯ ವಿಚಾರಸಂಕೀರ್ಣ ಮತ್ತು ‘ಅವತಾರ್ಸ್’ ಪುಸ್ತಕ ಬಿಡುಗಡೆ: ಉದ್ಘಾಟನೆ: ವಿ.ಆರ್. ಸುದರ್ಶನ್, ಅಧ್ಯಕ್ಷತೆ: ಮೋಹನ ಕೊಂಡಜ್ಜಿ, ಪುಸ್ತಕ ಬಿಡುಗಡೆ: ಶ್ರೀನಿವಾಸ ಜಿ. ಕಪ್ಪಣ್ಣ, ಅತಿಥಿಗಳು: ಜಯಕರ ಎಸ್.ಎಂ., ಜನಾರ್ದನ, ಸ್ವಾಮಿ ಟಿ.ಆರ್. ಡಿ. ಶಿವಶಂಕರ, ಮಾವಳ್ಳಿ ಶಂಕರ್, ಉಪಸ್ಥಿತಿ: ಮಾನಸ ಸಿದ್ಧಲಿಂಗಯ್ಯ, ಆಯೋಜನೆ: ನಾಡೋಜ ಡಾ. ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ, ಸ್ಥಳ: ಎಂ.ಎಸ್. ತಿಮ್ಮಪ್ಪ ಸಭಾಂಗಣ, ಮನೋವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30



ಶ್ರೀನಿವಾಸ ಜಿ.ಕಪ್ಪಣ್ಣ

ಬೆಂ.ಶ್ರೀ. ರವೀಂದ್ರ ಅವರ ‘ರವಿತೇಜನ ಮುಕ್ತಕಗಳು’ ಶುಭಶ್ರೀ ಪ್ರಸಾದ್ ಅವರ ‘ಶುಭನುಡಿ’ ಪುಸ್ತಕಗಳ ಬಿಡುಗಡೆ: ಎಚ್. ಡುಂಡಿರಾಜ್, ಅಧ್ಯಕ್ಷತೆ: ಎಂ.ಎಸ್. ನರಸಿಂಹಮೂರ್ತಿ, ಪುಸ್ತಕಗಳ ಕುರಿತು: ಎಂ.ಎಸ್. ಅನಿತಾ, ಉಪಸ್ಥಿತಿ: ಸಂಸ್ಕೃತಿ ಸುಬ್ರಹ್ಮಣ್ಯ, ಆಯೋಜನೆ: ಅನನ್ಯ ಪ್ರಕಾಶನ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಎನ್. ಆರ್. ಕಾಲೊನಿ, ಬೆಳಿಗ್ಗೆ 10.30

‘ಚಿದಾನಂದ’ ಪ್ರಶಸ್ತಿ ಪ್ರದಾನ: ವೂಡೇ ಪಿ. ಕೃಷ್ಣ, ಪುರಸ್ಕೃತರು: ಹಂ.ಪ. ನಾಗರಾಜಯ್ಯ, ಉಪಸ್ಥಿತಿ: ಸುಂಕಂ ಗೋವರ್ಧನ, ಅಧ್ಯಕ್ಷತೆ: ಸಿ.ಯು. ಮಂಜುನಾಥ್, ಆಯೋಜನೆ: ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ, ಸ್ಥಳ: ಶೇಷಾದ್ರಿಪುರ ಸಂಜೆ ಕಾಲೇಜಿನ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.30



ಹಂ.ಪ. ನಾಗರಾಜಯ್ಯ

ಡಾ.ಕೋ.ವೆಂ. ರಾಮಕೃಷ್ಣೇಗೌಡರ ಜನ್ಮ ದಿನ, ಪ್ರಶಸ್ತಿ ಪ್ರದಾನ: ಸಿ.ಕೆ. ರಾಮೇಗೌಡ, ‘ಡಾ.ಕೋ.ವೆಂ.ರಾ. ಕನ್ನಡ ಪರಿಚಾರಕ ಪ್ರಶಸ್ತಿ’ ಪುರಸ್ಕೃತರು: ನಂ. ವಿಜಯ್ ಕುಮಾರ್, ಅಧ್ಯಕ್ಷತೆ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ನುಡಿನಮನ: ಎಸ್. ರಾಮಲಿಂಗೇಶ್ವರ, ಉಪಸ್ಥಿತಿ: ಎ.ಎಸ್. ನಾಗರಾಜಸ್ವಾಮಿ, ತಾ.ಸಿ. ತಿಮ್ಮಯ್ಯ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಶೇಷಾದ್ರಿಪುರ ಕಾಲೇಜು ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.30

ಸಂತೋಷ ಪೈ ಅವರ ಏಕವ್ಯಕ್ತಿ ಛಾಯಾಚಿತ್ರಗಳ ಪ್ರದರ್ಶನ: ಆಯೋಜನೆ: ಮಂಜುಶ್ರೀ ಫೌಂಡೇಷನ್, ಸ್ಥಳ: ಎಂ.ಕೆ.ಎಫ್., ಮ್ಯೂಸಿಯಂ ಆಫ್ ಆರ್ಟ್, ಲಾವೆಲ್ಲೆ ರಸ್ತೆ, ಬೆಳಿಗ್ಗೆ 11

ಶಕ್ತಿ ಯೋಜನೆಗೆ ಚಾಲನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಸ್ಥಳ: ವಿಧಾನಸೌಧದ ಪೂರ್ವದ್ವಾರದ ಮುಂಭಾಗ, ಬೆಳಿಗ್ಗೆ 11

ನಾನೇಕೆ ಬರೆಯುತ್ತೇನೆ? ಒಂದು ಚರ್ಚೆ: ಸಿ.ಪಿ. ರವಿಕುಮಾರ್ ಅವರ ‘ಪುನರ್ನವ’, ಟಿ.ಎಸ್. ರಮಾನಂದ ಅವರ ‘ನಿರಂತರ’ ಕಾದಂಬರಿಗಳು, ವಸುಂಧರಾ ಕದಲೂರು ಅವರ ‘ನೇಪಥ್ಯದ ನಿಲುವುಗನ್ನಡಿ’ ಕವನ ಸಂಕಲನದ ಕುರಿತು: ಅತಿಥಿ: ಜೋಗಿ, ಆಯೋಜನೆ: ಅಭಿನವ, ಬುಕ್‌ಬ್ರಹ್ಮ, ಸ್ಥಳ: ನಾಣಿ ಮನೆಯಂಗಳ, ಸುಚಿತ್ರ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 11

ರಾಷ್ಟ್ರ ಮಟ್ಟದ ಕಲಾ ಸ್ಪರ್ಧೆ ಮತ್ತು ಆಯ್ದ ಚಿತ್ರಗಳ ಪ್ರದರ್ಶನ: ಅತಿಥಿಗಳು: ಸಿ.ಎಸ್. ಕೃಷ್ಣಸೆಟ್ಟಿ, ಚೂಡಾಮಣಿ ನಂದಗೋಪಾಲ್, ಚಂದ್ರನಾಥ್ ಆಚಾರ್ಯ, ಪಾ.ಸಾ. ಕುಮಾರ್, ಕಿರಣ ಬಾಗಡೆ, ಶಶಿಧರ್ ಎಸ್.ಎನ್., ಆಯೋಜನೆ: ಆರ್ಟ್ ಬೇರು, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಸಿದ್ಧಲಿಂಗಯ್ಯ ಅವರ ಸ್ಮರಣೆ: ನುಡಿನಮನ: ಬಿ.ಟಿ. ಲಲಿತಾ ನಾಯಕ್, ಎಂ. ವೆಂಕಟಸ್ವಾಮಿ, ಎನ್. ಮೂರ್ತಿ, ಅಧ್ಯಕ್ಷತೆ: ಎಂ. ಮುತ್ತುರಾಜು, ಆಯೋಜನೆ: ಕರ್ನಾಟಕ ದಲಿತ ಒಕ್ಕೂಟ ಸಮಿತಿ, ಕರ್ನಾಟಕ ಅಹಿಂದ ಹೋರಾಟ ಸಮಿತಿ, ಸ್ಥಳ: ಹೋಟೆಲ್ ಕನಿಷ್ಕಾ, ಗಾಂಧಿನಗರ, ಮಧ್ಯಾಹ್ನ 12

‘ಮೂಕಜ್ಜಿಯ ಕನಸುಗಳು’ ನಾಟಕ ಪ್ರದರ್ಶನ: ಮೂಲ: ಶಿವರಾಮ ಕಾರಂತರ ಕಾದಂಬರಿ, ಉಪಸ್ಥಿತಿ: ಶಶಿಧರ ಅಡಪ, ರಂಗರೂಪ: ಎಸ್. ರಾಮಮೂರ್ತಿ, ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ: ಭಾಗವತರು ನಾಟಕೋತ್ಸವ: ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

‘ಮಾನಸ ಪುತ್ರ’ ನಾಟಕ ಪ್ರದರ್ಶನ: ನಿರ್ದೇಶನ: ಬಸವರಾಜ ಎಮ್ಮಿಯವರ, ತಂಡ: ಕಲಾವಿಲಾಸಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ಹಕ್ಕಿ ಹಾರುತಿದೆ ನೋಡಿದಿರಾ’ ನಾಟಕ ಪ್ರದರ್ಶನ: ಪ್ರಸ್ತುತಿ: ಅವನ, ರಚನೆ: ಎಚ್. ಡುಂಡಿರಾಜ್, ರಂಗ ರೂಪಾಂತರ: ಎಸ್. ಚಿದಾನಂದ್, ನಿರ್ದೇಶನ: ಅಕ್ಷರ್ ಕೆ. ಎನ್., ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ಜಯನಗರ, ಸಂಜೆ 7

ಬಿಎಸ್‌ಪಿ ಒತ್ತಾಯ

ಬೆಂಗಳೂರು: ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ನೀಡಿದ್ದ ಆಶ್ವಾಸನೆಗಳನ್ನು ತಕ್ಷಣ ಈಡೇರಿಸಬೇಕು ಎಂದು ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಆಗ್ರಹಿಸಿದ್ದಾರೆ

ತಾಯ್ತನ ಸುರಕ್ಷೆಯೇ ಮರೀಚಿಕೆ



ಕಲಬುರಗಿಯ ಜಿಮ್ಸ್ ಆಸ್ಪತ್ರೆಯ ಮಕ್ಕಳ ಆರೋಗ್ಯ ಪುನಶ್ಚೇತನ ಕೇಂದ್ರದಲ್ಲಿ ಪೌಷ್ಟಿಕತೆ ಕೊರತೆಯಿಂದ ಬಳಲುತ್ತಿರುವ ಮಕ್ಕಳನ್ನು ಆರೈಕೆ ಮಾಡುತ್ತಿರುವ ತಾಯಂದಿರು —ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಒಂದನೇ ಪುಟದಿಂದ..

'ಮಧ್ಯಾಹ್ನದ ಒಂದೊತ್ತಿನ ಊಟಕ್ಕೆ ಕೂಲಿ ಕೆಲಸ ಅಥವಾ ಮನೆಗೆಲಸ ಬಿಟ್ಟು ಅಂಗನವಾಡಿಗೆ ಹೋಗಬೇಕಾ? ನಮಗೆ ದಿನಕ್ಕೆ ಕೂಲಿ ₹200 ಸಿಗುತ್ತದೆ. ಅದಕ್ಕೆ ಮನೆಗೆ ಆಹಾರ ಧಾನ್ಯದ ಕಿಟ್ ವಿತರಿಸಿದರೆ ಸೂಕ್ತ' ಎನ್ನುತ್ತಾರೆ ಕಲಬುರಗಿ ಜಿಲ್ಲೆಯ ನರಸಮ್ಮ.

ರಕ್ತಹೀನತೆ ಸಮಸ್ಯೆ ನಿವಾರಣೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಕಬ್ಬಿಣಾಂಶದ ಮಾತ್ರೆಗಳನ್ನು ವಿತರಿಸುವ ವ್ಯವಸ್ಥೆ ಮಾಡಲಾಗಿದೆ. ಹೆರಿಗೆಗೂ ಮೂರು ತಿಂಗಳು ಮೊದಲೇ ಆಶಾ ಕಾರ್ಯಕರ್ತೆಯರ ಮೂಲಕ ನಿಯಮಿತವಾಗಿ ನೀಡಿದರೆ ಗರ್ಭಿಣಿಯರನ್ನು ಸಾವಿನ ದವಡೆಯಿಂದ ತಪ್ಪಿಸಬಹುದು. ಆದರೆ, ಬಹಳಷ್ಟು ಗರ್ಭಿಣಿಯರು ಮಾತ್ರೆಗಳನ್ನು ನುಂಗದೆ ಹಿತ್ತಲಿಗೆ ಎಸೆದು ಬಿಡುವ ಪ್ರಸಂಗವೇ ಹೆಚ್ಚಿದೆ ಎನ್ನುವ ಆರೋಪ ವ್ಯಾಪಕವಾಗಿದೆ.

'ಗರ್ಭಿಣಿಯರು ಹಿರಿಯರ ಮಾತಿಗೆ ಕಟ್ಟು ಬೀಳುತ್ತಾರೆ. ಆರೋಗ್ಯ ರಕ್ಷಣೆಯ ಕ್ರಮ, ಪೌಷ್ಟಿಕ ಆಹಾರದ ಬಗ್ಗೆ ಜಾಗೃತಿ ಮೂಡಿಸಲು ಯತ್ನಿಸಿದರೆ ಕೇಳುವ ತಾಳ್ಮೆ ಅವರಲಿಲ್ಲ. ಎಲ್ಲವೂ ಗೊತ್ತು ಎನ್ನುವ ರೀತಿ ವರ್ತಿಸುತ್ತಾರೆ. ಹಿಂದಿನ ಕಾಲದ ನಂಬಿಕೆಗಳಿಗೆ ಕಟ್ಟು ಬೀಳುವವರೂ ಇದ್ದಾರೆ' ಎನ್ನುತ್ತಾರೆ ಆಶಾ ಕಾರ್ಯಕರ್ತೆಯರು.


ಸಾಂಸ್ಥಿಕ ಹೆರಿಗೆ ಹೆಚ್ಚಳ: ತಾಯಂದಿರ ಸಾವು ತಪ್ಪಿಸಲು ಸರ್ಕಾರವು ಒಂದು ದಶಕದ ಹಿಂದೆಯೇ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗೆ ಒತ್ತು ನೀಡಿದೆ. ಆಶಾ ಕಾರ್ಯಕರ್ತೆಯರ ಮೂಲಕ ಗರ್ಭಾವಸ್ಥೆ, ಹೆರಿಗೆ ಹಾಗೂ ಬಾಣಂತಿಯರ ಆರೋಗ್ಯ ರಕ್ಷಣೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಇದರಿಂದ ಸಾಂಸ್ಥಿಕ ಹೆರಿಗೆಗಳ ಸಂಖ್ಯೆಯೇನೂ ಹೆಚ್ಚಿದೆ. ಆದರೆ, ತಾಯಂದಿರ ಸಾವಿನ ಸಂಖ್ಯೆ ಮಾತ್ರ ತಗ್ಗಿಲ್ಲ.

ಮತ್ತೊಂದು ಸಮಸ್ಯೆ: ಅಧಿಕ ರಕ್ತದೊತ್ತಡವು ತಾಯಂದಿರನ್ನು ಕೊಲ್ಲುವ ಮತ್ತೊಂದು ಸಮಸ್ಯೆ. ಗರ್ಭಧಾರಣೆಯ ಮೂರನೇ ಮಾಸಿಕ ಹಾಗೂ ಹೆರಿಗೆ ನಂತರ ಮೊದಲ 24 ಗಂಟೆಗಳಲ್ಲಿ ಕಂಡುಬರುವ ಇದು ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಮಾರಕ. ಇದನ್ನು ನಿಯಂತ್ರಿಸದಿದ್ದರೆ ದೇಹದಲ್ಲಿ ಉಪ್ಪಿನಾಂಶ ಹೆಚ್ಚಾಗಿ ತಾಯಿಯನ್ನು ಮೃತ್ಯುಕೂಪಕ್ಕೆ ದೂಡುತ್ತದೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಬಹಳಷ್ಟು ಗರ್ಭಿಣಿಯರು ನಿಯಮಿತವಾಗಿ ತಪಾಸಣೆಯನ್ನೇ ಮಾಡಿಸುವುದಿಲ್ಲ ಎಂಬುದು ವಿಪರ್ಯಾಸ.

'ಮೂರು ತಿಂಗಳ ಗರ್ಭಿಣಿಯಾಗಿದ್ದಾಗಿನಿಂದ ಕಡ್ಡಾಯವಾಗಿ ತಾಯಿಯ ಆರೋಗ್ಯ ತಪಾಸಣೆ ಮಾಡಿಸಬೇಕು. ಕಡಿಮೆ ಎತ್ತರವುಳ್ಳವರು, ಶಸ್ತ್ರಚಿಕಿತ್ಸೆಗೆ ಒಳಗಾದವರು, ಥೈರಾಯ್ಡ್, ಮಧುಮೇಹ, ರಕ್ತದೊತ್ತಡದಂಥ ಆರೋಗ್ಯ ಸಮಸ್ಯೆ ಉಳ್ಳವರು ತೀವ್ರ ನಿಗಾವಹಿಸಬೇಕು' ಎಂದು ಸಲಹೆ ನೀಡುತ್ತಾರೆ ಹಾಸನದ ಡಿಎಚ್‌ಒ ಡಾ.ಶಿವಸ್ವಾಮಿ.

ಕೌಟುಂಬಿಕ ಮೌಢ್ಯಗಳೂ ತಾಯಂದಿರ ಮರಣಕ್ಕೆ ಕಾರಣವಾಗುತ್ತಿವೆ.

ಕರ್ನಾಟಕದಲ್ಲಿ ತಾಯಂದಿರ ಮರಣ ಪ್ರಕರಣ



ಮಾಹಿತಿ: ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಚಿಕ್ಕವಯಸ್ಸಿನಲ್ಲೇ ಹೆಣ್ಣುಮಕ್ಕಳಿಗೆ ಬಹುಬೇಗ ಮದುವೆ ಮಾಡಿಸಲಾಗುತ್ತಿದೆ. ಗಂಡು ಮಗು ಜನಿಸಲಿಯೆಂದು ಗಂಡನ ಮನೆಯವರು ಒತ್ತಾಯಿಸುತ್ತಾರೆ. ಹೀಗಾಗಿ, ನಾಲ್ಕು ಅಥವಾ ಐದು ಮಕ್ಕಳು ಜನಿಸುತ್ತವೆ. ಇದರಿಂದ ಮಹಿಳೆಯರ ಆರೋಗ್ಯ ಕ್ಷೀಣಿಸುತ್ತದೆ. ಅದರಲ್ಲೂ ಕೂಲಿ ಮಾಡುವ ಮಹಿಳೆಗೆ ಸರಿಯಾಗಿ ಆರೋಗ್ಯ ಕಾಪಾಡಿಕೊಳ್ಳಲು ಆಗುವುದಿಲ್ಲ.

ಬಾಲ್ಯವಿವಾಹವು ತಾಯಂದಿರ ಸಾವು ಹೆಚ್ಚಳಕ್ಕೆ ಕಾರಣವಾಗಿದೆ ಎಂಬುದನ್ನು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಹೇಳುತ್ತದೆ. ಈ ಸಮೀಕ್ಷೆ ಅನ್ವಯ ಕರ್ನಾಟಕದಲ್ಲಿ 15–19 ವರ್ಷದೊಳಗೆ ಹೆಣ್ಣುಮಕ್ಕಳಿಗೆ ಮದುವೆ ಮಾಡುವ ಪ್ರಮಾಣ ನಗರ ಪ್ರದೇಶದಲ್ಲಿ ಶೇ 3.4ರಷ್ಟಿದ್ದರೆ; ಗ್ರಾಮೀಣ ಪ್ರದೇಶದಲ್ಲಿ ಶೇ 6.6ರಷ್ಟಿದೆ.

ಭ್ರಷ್ಟಾಚಾರ ಉಲ್ಬಣ: ಸರ್ಕಾರಿ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು ಭ್ರಷ್ಟಾಚಾರದ ಕೂಪಗಳಾಗಿವೆ ಎನ್ನುವ ಆರೋಪ ವ್ಯಾಪಕವಾಗಿದೆ. ಹಣ ನೀಡದಿದ್ದರೆ ಗರ್ಭಿಣಿಯರಿಗೆ ವೈದ್ಯಕೀಯ ಸೇವೆಯೇ ಸಿಗದಿರುವಂತಹ ವಾತಾವರಣವಿದೆ. ಕಳೆದ ವರ್ಷ ತುಮಕೂರು ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಯಿ ಮತ್ತು ಅವಳಿ ಗಂಡು ಶಿಶುಗಳು ಮೃತಪಟ್ಟ ಘಟನೆ ಇದಕ್ಕೊಂದು ತಾಜಾ ಉದಾಹರಣೆ.



ಕೊಪ್ಪಳದ 100 ಹಾಸಿಗೆ ಸಾಮರ್ಥ್ಯದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ನವಜಾತ ಶಿಶುಗಳ ತೀವ್ರ ನಿಗಾ ಘಟಕದಲ್ಲಿ ಶಿಶುಗಳ ಆರೈಕೆಯಲ್ಲಿ ತೊಡಗಿರುವ ತಾಯಿ ಮತ್ತು ದಾದಿ

ತುಮಕೂರಿನ ಭಾರತಿನಗರದಲ್ಲಿ ವಾಸವಿದ್ದ ತಮಿಳುನಾಡಿನ ಮೂವತ್ತು ವರ್ಷದ ಕಸ್ತೂರಿಗೆ ಹೆರಿಗೆ ನೋವು ಕಾಣಿಸಿಕೊಂಡ ತಕ್ಷಣವೇ ನೆರೆಹೊರೆಯವರು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಆಧಾರ್ ಕಾರ್ಡ್ ಮತ್ತು ತಾಯಿ ಕಾರ್ಡ್ ಇಲ್ಲವೆಂದು ವೈದ್ಯಕೀಯ ಸಿಬ್ಬಂದಿ ದಾಖಲಿಸಿಕೊಳ್ಳಲು ನಿರ್ಲಕ್ಷ್ಯವಹಿಸಿದರು. ಸಕಾಲದಲ್ಲಿ ಚಿಕಿತ್ಸೆ ಸಿಗದೆ ಆಕೆ ಮತ್ತು ಹೊಟ್ಟೆಯಲ್ಲಿದ್ದ ಶಿಶುಗಳು ಸಾವನ್ನಪ್ಪಿದವು.

'ಸರ್ಕಾರಿ ಆಸ್ಪತ್ರೆಗಳಲ್ಲಿ ಹಣ ನೀಡದಿದ್ದರೆ ವೈದ್ಯಕೀಯ ಸೇವೆ ಸಿಗುವುದಿಲ್ಲ. ಹಣ ಕೊಟ್ಟು ಸರ್ಕಾರಿ ಆಸ್ಪತ್ರೆಯತ್ತ ಯಾಕೆ ಹೋಗಬೇಕು ಎಂದು ಅನೇಕರು ಖಾಸಗಿಯತ್ತ ಮುಖ ಮಾಡುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಗರ್ಭಿಣಿಯು ನಿಯಮಿತವಾಗಿ ತಪಾಸಣೆ ಮಾಡಿಸಿಕೊಂಡರೂ ಸಿಸೇರಿಯನ್‌ಗೆ ಖಾಸಗಿ ಆಸ್ಪತ್ರೆಗಳಿಗೆ ತೆರಳುವಂತೆ ಸರ್ಕಾರಿ ವೈದ್ಯರೇ ಸೂಚಿಸುತ್ತಾರೆ. ಆ ವೈದ್ಯರೇ ಅಲ್ಲಿಗೆ ಹೋಗಿ ಸಿಸೇರಿಯನ್ ಮಾಡಿಸುತ್ತಾರೆ' ಎನ್ನುತ್ತಾರೆ ಹೆಸರು ಬಹಿರಂಗಪಡಿಸಲು ಇಚ್ಛಿಸದ ತುಮಕೂರಿನ ಆರೋಗ್ಯ ಕಾರ್ಯಕರ್ತರೊಬ್ಬರು.

ಗ್ರಾಮೀಣ ಪ್ರದೇಶದ ಬಹಳಷ್ಟು ಆರೋಗ್ಯ ಕೇಂದ್ರಗಳು, ಸರ್ಕಾರಿ ಆಸ್ಪತ್ರೆಗಳಲ್ಲಿ ನುರಿತ ಹೆರಿಗೆ ತಜ್ಞರು, ಅರಿವಳಿಕೆ ತಜ್ಞರು, ಶುಶ್ರೂಷ ಸಿಬ್ಬಂದಿಯ ಕೊರತೆಯಿದೆ. ಮತ್ತೊಂದೆಡೆ ಸ್ಥಳೀಯ ರಾಜಕಾರಣದ ಒತ್ತಡ, ವೈದ್ಯರ ಮೇಲಿನ ಹಲ್ಲೆ, ಕಡಿಮೆ ಸಂಬಳ, ನೇಮಕಾತಿಯಲ್ಲಿನ ಭ್ರಷ್ಟಾಚಾರಕ್ಕೆ ಬೇಸತ್ತು ನುರಿತ ತಜ್ಞ ವೈದ್ಯರು ಸರ್ಕಾರಿ ಸೇವೆಗೆ ಬರಲು ಒಪ್ಪುತ್ತಿಲ್ಲ. ಇದು ಸಮಸ್ಯೆಯ ಇನ್ನೊಂದು ಮುಖ.

> **ಗುಡ್ಡಗಾಡು ಜಿಲ್ಲೆಯಾದ ಉತ್ತರ ಕನ್ನಡದ ಕುಗ್ರಾಮಗಳಲ್ಲಿ ವಾಸಿಸುವ ಕೆಲವು ಬುಡಕಟ್ಟು ಜನಾಂಗದವರು ಇನ್ನೂ ಸಾಂಪ್ರದಾಯಿಕ ಹೆರಿಗೆ ಪದ್ಧತಿ ಅನುಸರಿಸುತ್ತಿದ್ದರು. ಸತತ ಜಾಗೃತಿ ಮೂಲಕ ಈಗ ಅದು ನಿಂತಿದೆ**
> **ಡಾ.ಅನ್ನಪೂರ್ಣ ವಸ್ತ್ರದ್,** ಜಿಲ್ಲಾ ಆರೋಗ್ಯಾಧಿಕಾರಿ, ಉತ್ತರ ಕನ್ನಡ

> **ತಾಯಂದಿರ ಸಾವಿನ ಪ್ರಮಾಣ ಕಡಿಮೆ ಮಾಡಲು ವೈದ್ಯಕೀಯ ಸೌಕರ್ಯ ಹೆಚ್ಚಿಸಿ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸ್ತ್ರೀರೋಗ ತಜ್ಞರನ್ನು ನಿಯೋಜಿಸಿದ್ದೇವೆ. ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲೂ ಶಸ್ತ್ರ ಚಿಕಿತ್ಸಾ ಘಟಕಗಳ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಸಕಾಲದಲ್ಲಿ ಚಿಕಿತ್ಸೆ ಲಭಿಸಿ, ಮರಣ ಪ್ರಮಾಣ ಕಡಿಮೆಯಾಗಿದೆ**
> **ಡಾ.ಪ್ರಭುಲಿಂಗ ಮಾನಕರ್,** ಆರ್‌ಸಿಎಚ್‌ಒ ಅಧಿಕಾರಿ, ಕಲಬುರಗಿ

ಉತ್ತರ ಕರ್ನಾಟಕದಲ್ಲೇ ಹೆಚ್ಚು ಸಾವು: ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಗದಗ, ವಿಜಯಪುರ, ಬಾಗಲಕೋಟೆ, ದಾವಣಗೆರೆ, ಶಿವಮೊಗ್ಗ, ಧಾರವಾಡ, ತುಮಕೂರು ಜಿಲ್ಲೆಯಲ್ಲಿ ತಾಯಂದಿರ ಸಾವಿನ ಪ್ರಮಾಣ ಹೆಚ್ಚಿದೆ. ಚಾಮರಾಜನಗರ, ಮೈಸೂರು, ಹಾಸನ ಜಿಲ್ಲೆಯಲ್ಲಿಯೂ ತಾಯಂದಿರ ಮರಣಕ್ಕೆ ಕಡಿವಾಣ ಬಿದ್ದಿಲ್ಲ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಿಜಿಸ್ಟರ್ ಜನರಲ್ ಆಫ್ ಇಂಡಿಯಾದ ಮಾದರಿ ನೋಂದಣಿ ವ್ಯವಸ್ಥೆಯ(ಎಸ್‌ಆರ್‌ಎಸ್) 2018–20ರ ವರದಿ ಪ್ರಕಾರ ಕಡಿಮೆ ಮರಣ ಪ್ರಮಾಣ ಹೊಂದಿರುವ ರಾಜ್ಯಗಳಲ್ಲಿ ಕೇರಳ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ಮತ್ತು ತಮಿಳುನಾಡು ಮೊದಲ ಐದು ಸ್ಥಾನದಲ್ಲಿವೆ.

ವಾರ್ಷಿಕ ಒಂದು ಲಕ್ಷ ಹೆರಿಗೆಯಾಗುವ ರಾಜ್ಯಗಳಲ್ಲಷ್ಟೇ ತಾಯಿ ಮರಣ ಪ್ರಮಾಣದ ಈ ಸಮೀಕ್ಷೆ ನಡೆದಿದೆ. ದೇಶದ 19 ರಾಜ್ಯಗಳಲ್ಲಿ ಈ ಸಮೀಕ್ಷೆ ನಡೆದಿದ್ದು, ಕರ್ನಾಟಕ ಎಂಟರಿಂದ ಏಳನೇ ಸ್ಥಾನಕ್ಕೆ ಜಿಗಿದಿದೆ. ಆದರೆ, ದಕ್ಷಿಣ ಭಾರತದ ಈ ರಾಜ್ಯಗಳ ಪೈಕಿ ಕರ್ನಾಟಕದಲ್ಲಿಯೇ ಅತಿಹೆಚ್ಚು ತಾಯಂದಿರ ಮರಣ ದಾಖಲಾಗುತ್ತಿದೆ.

ತಾಯಂದಿರ ಸಾವಿನ ಪ್ರಕರಣದ ತನಿಖೆ ನಡೆಸಲು ಜಿಲ್ಲಾಧಿಕಾರಿ ನೇತೃತ್ವದಡಿ ಸಮಿತಿ ಇದೆ. ಬಹಳಷ್ಟು ಸಾವು ವೈದ್ಯರ ನಿರ್ಲಕ್ಷ್ಯದಿಂದಲೂ ಸಂಭವಿಸುತ್ತವೆ ಎನ್ನುವ ಆರೋಪವಿದೆ. ಆದರೆ, ಸಮಿತಿ ಮುಂದೆ ನಡೆಯುವ ವಿಚಾರಣೆ ವೇಳೆ ಈ ವಿಷಯ ಪ್ರಸ್ತಾಪವಾಗುವುದೇ ಇಲ್ಲ. ಸಾವಿಗೆ ರಕ್ತಹೀನತೆ, ರಕ್ತಸ್ರಾವ ಕಾರಣವೆಂದು ವೈದ್ಯಾಧಿಕಾರಿಗಳು ವರದಿ ಮಂಡಿಸಿ ಪ್ರಕರಣವನ್ನು ಮುಚ್ಚು ಹಾಕುತ್ತಾರೆ ಎನ್ನುವ ದೂರು ವ್ಯಾಪಕವಾಗಿದೆ. ಹಾಗಾಗಿ, ನ್ಯಾಯವು ಸಂತ್ರಸ್ತ ಕುಟುಂಬಗಳಿಗೆ ಕನ್ನಡಿಯೊಳಗಿನ ಗಂಟಾಗಿದೆ.

ಶಿಶು ಮರಣ ಪ್ರಮಾಣ: ಒಂದು ವರ್ಷದಲ್ಲಿನ ಜೀವಂತ ಜನನದಲ್ಲಿ ಸಂಭವಿಸಬಹುದಾದ ಶಿಶುಗಳ ಮರಣವನ್ನು 'ಶಿಶು ಮರಣ ಪ್ರಮಾಣ'ವೆಂದು ಕರೆಯಲಾಗುತ್ತದೆ. 2020ರ ಎಸ್‌ಆರ್‌ಎಸ್ ವರದಿ ಅನ್ವಯ ಒಂದು ಸಾವಿರ ಶಿಶುಗಳ ಜನನದ ವೇಳೆ ಕರ್ನಾಟಕದಲ್ಲಿ 19 ಮಕ್ಕಳು ಮೃತಪಡುತ್ತಿದ್ದಾರೆ. ಕೇರಳದಲ್ಲಿ ಆರು ಮಕ್ಕಳಷ್ಟೇ ಮೃತಪಡುತ್ತಾರೆ. ರಾಜ್ಯದಲ್ಲಿ ಮಕ್ಕಳ ಸಾವಿನ ಸಂಖ್ಯೆಯನ್ನು ಒಂದಂಕಿಗೆ ಇಳಿಸುವ ಗುರಿ ಆದೇಶದಲ್ಲಷ್ಟೇ ಉಳಿದಿದೆ.

ಮಕ್ಕಳ ಸಾವಿಗೆ ಅಪೌಷ್ಟಿಕತೆಯೇ ಬಹುಮುಖ್ಯ ಕಾರಣ. ತಾಯಿ ಅಪೌಷ್ಟಿಕತೆಗೆ ತುತ್ತಾದರೆ ಅದು ಆಕೆಯ ಭ್ರೂಣದಲ್ಲಿರುವ ಮಗುವಿನ ಬೆಳವಣಿಗೆಯ ಮೇಲೂ ಪ್ರತಿಕೂಲ ಪರಿಣಾಮ ಬೀರುವುದು ನಿಶ್ಚಿತ. ತಾಯಿಯ ರಕ್ತಸ್ರಾವ, ಶ್ವಾಸಕೋಶ ಬೆಳವಣಿಗೆ ಇಲ್ಲದಿರುವುದು, ಅವಧಿಪೂರ್ವ ಜನನ, ಅವಧಿ ಮೀರಿದ ಗಂಡಾಂತರ ಹೆರಿಗೆ, ಗರ್ಭಿಣಿಯರಲ್ಲಿ ಸೋಂಕಿನ ಕಾರಣಗಳಿಂದಲೂ ಶಿಶುಗಳು ಮೃತಪಡುತ್ತವೆ.

ನವಜಾತ ಶಿಶು ಮತ್ತು ಐದು ವರ್ಷದೊಳಗಿನ ಶಿಶುಗಳ ಮರಣ ಪ್ರಮಾಣವನ್ನು ಕಡಿತಗೊಳಿಸಲು ಹಾಗೂ ಮಕ್ಕಳ ಆರೋಗ್ಯ ಸುಧಾರಿಸಲು ಸರ್ಕಾರ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿದರೂ ಸರಿಯಾಗಿ ಅನುಷ್ಠಾನಗೊಂಡಿಲ್ಲ ಎಂಬುದು ಜನರ ಆರೋಪ.

'ಸರ್ಕಾರಿ ಆಸ್ಪತ್ರೆಗಳಲ್ಲಿನ ಭ್ರಷ್ಟಾಚಾರದಿಂದ ಬಡವರಿಗೆ ಸಮರ್ಪಕವಾಗಿ ಚಿಕಿತ್ಸೆ ದೊರೆಯುತ್ತಿಲ್ಲ. ಬಹುತೇಕ ವೈದ್ಯರು ಖಾಸಗಿಯಲ್ಲಿ ಕಾನೂನುಬಾಹಿರವಾಗಿ ಕೆಲಸ ಮಾಡುತ್ತಿದ್ದು ಸರ್ಕಾರಿ ಆಸ್ಪತ್ರೆಗೆ ಬಂದ ರೋಗಿಗಳನ್ನು ಖಾಸಗಿ ಆಸ್ಪತ್ರೆಗಳತ್ತ ಸೆಳೆಯುತ್ತಿದ್ದಾರೆ. ಸ್ಕ್ಯಾನಿಂಗ್, ಎಕ್ಸ್‌ರೇ ಸೌಲಭ್ಯಕ್ಕಾಗಿ ಖಾಸಗಿ ಕೇಂದ್ರಗಳ ಮೇಲೆ ಅವಲಂಬಿಸುವಂತಾಗಿದೆ. ಇದು ದಂಧೆಯ ರೂಪ ತಾಳಿದ್ದು ವೈದ್ಯರೇ ಕಮಿಷನ್ ಪಡೆದು ಖಾಸಗಿ ಕೇಂದ್ರಗಳಿಗೆ ಕಳುಹಿಸುತ್ತಿದ್ದಾರೆ' ಎಂದು ದೂರುತ್ತಾರೆ ಮಳವಳ್ಳಿಯ ಜನವಾದಿ ಮಹಿಳಾ ಸಂಘಟನೆಯ ನಾಯಕಿ ದೇವಿ.

ವಿಶೇಷ ನವಜಾತ ಶಿಶು ಆರೈಕೆ ಘಟಕ, ನವಜಾತ ಶಿಶು ಸ್ಥಿರೀಕರಣ ಘಟಕ, ನವಜಾತ ಶಿಶು ಆರೈಕೆ ಕೇಂದ್ರ, ಮನೆ ಆಧಾರಿತ ಶಿಶು ಆರೈಕೆ ಕಾರ್ಯಕ್ರಮ, ಜನನಿ ಶಿಶು ಸುರಕ್ಷಾ ಕಾರ್ಯಕ್ರಮ, ಶಿಶು ಮರಣ ಪರಿಶೀಲನೆ, ಕಾಂಗರೂ ಮದರ್ ಕೇರ್, ತಾಯಿ ಎದೆ ಹಾಲುಣಿಸುವ ಕೇಂದ್ರಗಳ ಸ್ಥಾಪನೆ, ನವಜಾತ ಮತ್ತು ಮಕ್ಕಳ ಕಾಯಿಲೆಗಳ ಸಮಗ್ರ ನಿರ್ವಹಣಾ ಕಾರ್ಯಕ್ರಮ, ಅತಿಸಾರ ಭೇದಿ ನಿಯಂತ್ರಣ ಪಾಕ್ಷಿಕ ಆಚರಣೆಗೆ ಒತ್ತು ನೀಡಲಾಗಿದೆ. ಆದರೆ, ಇವುಗಳಲ್ಲಿ ಸಕಾಲದಲ್ಲಿ ಸೇವೆ ಸಿಗುತ್ತಿಲ್ಲ ಎಂಬುದು ಜನರ ದೂರು.

(ಪೂರಕ ಮಾಹಿತಿ: ವಿವಿಧ ಬ್ಯೂರೊಗಳಿಂದ)



ಕಲಬುರಗಿಯ ಜಿಮ್ಸ್ ಆಸ್ಪತ್ರೆಯಲ್ಲಿ ಬಾಣಂತಿಯರು ಆರೋಗ್ಯ ತಪಾಸಣೆಗಾಗಿ ಸರತಿ ಸಾಲಿನಲ್ಲಿ ಕುಳಿತಿರುವುದು

ಸೋಲಿಗರಲ್ಲೂ ಈಗ ಮನೆ ಹೆರಿಗೆ ಕಡಿಮೆ

● ಸೂರ್ಯನಾರಾಯಣ ವಿ.

ಚಾಮರಾಜನಗರ: ಜಿಲ್ಲೆಯ ಬುಡಕಟ್ಟು ಸೋಲಿಗ ಜನಾಂಗದಲ್ಲಿ ಹಿಂದೆಲ್ಲ ಸೂಲಗಿತ್ತಿಯರು ಮನೆಯಲ್ಲೇ ಹೆರಿಗೆ ಮಾಡಿಸುತ್ತಿದ್ದರು. ಗರ್ಭಿಣಿಯರನ್ನು ಕುಕ್ಕರಗಾಲಿನಲ್ಲಿ ಕೂರಿಸಿ ಹೆರಿಗೆ ಮಾಡಿಸುವ ವಿಶಿಷ್ಟ ಸಾಂಪ್ರದಾಯಿಕ ಪದ್ಧತಿ ಅದಾಗಿತ್ತು. ಈಗ ಸೋಲಿಗರಲ್ಲೂ ಮನೆ ಹೆರಿಗೆ ಅಪರೂಪವಾಗಿದೆ. ನಾಟಿ ವೈದ್ಯೆಯರು, ಸೂಲಗಿತ್ತಿಯರೂ ಕಾಣಸಿಗುತ್ತಿಲ್ಲ.

ಸಮುದಾಯದಲ್ಲಿ ಯಾರೇ ಗರ್ಭಿಣಿಯಾದರೂ ಆಶಾ ಕಾರ್ಯಕರ್ತೆಯರು ಅವರ ವಿವರ ದಾಖಲಿಸಿಕೊಳ್ಳುತ್ತಾರೆ. ಆಸ್ಪತ್ರೆಯಲ್ಲೇ ಹೆರಿಗೆ ಮಾಡಿಸುವಂತೆ ತಿಳಿಹೇಳುತ್ತಾರೆ. ತಿಂಗಳು ತುಂಬಿದಾಗ ಆಸ್ಪತ್ರೆಗೆ ಕರೆತರಿಸುತ್ತಾರೆ.

'ಗಿರಿಜನರು ಅದರಲ್ಲೂ ವಿಶೇಷವಾಗಿ ಸೋಲಿಗರಲ್ಲಿ ಮನೆ ಹೆರಿಗೆ ಪ್ರಮಾಣ ಶೇ 90ರಷ್ಟು ಕಡಿಮೆಯಾಗಿದೆ. ಹಾಗಿದ್ದರೂ ಕೆಲವೆಡೆ ಈಗಲೂ ಸೂಲಗಿತ್ತಿಯರು ಹೆರಿಗೆ ಮಾಡಿಸುತ್ತಾರೆ. ಅಂಥ ಸಂದರ್ಭದಲ್ಲಿ ತಾಯಿ, ಶಿಶು ಸಾಯುವ ಸಾಧ್ಯತೆ ಇರುತ್ತದೆ. ಅಲ್ಲೊಂದು–ಇಲ್ಲೊಂದು ಅಂಥ ಪ್ರಕರಣ ನಡೆಯುತ್ತಿರುತ್ತದೆ. ಆಶಾ ಕಾರ್ಯಕರ್ತೆಯರ ಗಮನಕ್ಕೆ ಬಾರದ ಸಂದರ್ಭದಲ್ಲಿ ಮಾತ್ರ ಮನೆ ಹೆರಿಗೆ ಆಗುತ್ತದೆ. ಇಂತಹ ಪ್ರಕರಣ ಒಂದೋ ಎರಡೋ ಇರಬಹುದು' ಎಂದು ಹೇಳುತ್ತಾರೆ ಸೋಲಿಗ ಸಮುದಾಯದ ಮುಖಂಡರು.

ಸೋಲಿಗರು ಹೆಚ್ಚು ವಾಸಿಸುವ ಬಿಳಿಗಿರಿರಂಗನಬೆಟ್ಟದಲ್ಲಿ ಹಿಂದೆ ಎಣ್ಣೆ ಸಿದ್ದಮ್ಮ ಎಂಬ ಸೂಲಗಿತ್ತಿ ಹೆರಿಗೆ ಮಾಡಿಸುವುದರಲ್ಲಿ ಪ್ರಸಿದ್ಧಿ ಪಡೆದಿದ್ದರು. ಸುತ್ತಮುತ್ತಲಿನ ಪೋಡುಗಳ ಸಾವಿರಾರು ಗರ್ಭಿಣಿಯರಿಗೆ ಅವರು ಹೆರಿಗೆ ಮಾಡಿಸಿದ್ದರು. ನಂತರ ಅವರ ಮಗಳು ಜಡೆ ಮಾದಮ್ಮ ಇದರಲ್ಲಿ ಪರಿಣತಿ ಸಾಧಿಸಿದ್ದರು. ಅವರ ನಿಧನದ ನಂತರ ಈಗ ಬೆಟ್ಟದಲ್ಲಿ ಮನೆಯಲ್ಲೇ ಹೆರಿಗೆ ಮಾಡಿಸುವವರಿಲ್ಲ.

'ನನ್ನ ಹೆರಿಗೆಯೂ ಮನೆಯಲ್ಲೇ ಆಗಿತ್ತು. ಕುಕ್ಕರಗಾಲಿನಲ್ಲಿ ಕುಳಿತು ಮಕ್ಕಳನ್ನು ಹೆತ್ತಿದ್ದೆ. ಈಗ ಮನೆಗಳಲ್ಲಿ ಹೆರಿಗೆ ಮಾಡುವುದು ಕಡಿಮೆಯಾಗಿದೆ. ಆಸ್ಪತ್ರೆಗೆ ಹೋಗುತ್ತೇವೆ. ಮನೆ ಹೆರಿಗೆಯಲ್ಲಿ ತಾಯಿ, ಶಿಶುವಿನ ಪ್ರಾಣಕ್ಕೆ ಅಪಾಯ ಇರುವುದರಿಂದ ಆಸ್ಪತ್ರೆಯಲ್ಲೇ ಹೆರಿಗೆ ಮಾಡಿಸಬೇಕು ಎಂದು ಜಾಗೃತಿಯನ್ನೂ ಮೂಡಿಸುತ್ತಿದ್ದೇವೆ. ಆಶಾ ಕಾರ್ಯಕರ್ತೆಯರು ಸಕ್ರಿಯರಾಗಿದ್ದು, ಮನೆಗಳಲ್ಲಿ ಹೆರಿಗೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ' ಎಂದು ಸೋಲಿಗ ಮಹಿಳಾ ಸಂಘಟಕಿ ಕಾರೆಮಾಳ ಪುಟ್ಟಮ್ಮ 'ಪ್ರಜಾವಾಣಿ'ಗೆ ತಿಳಿಸಿದರು.



ಶಿಶುಗಳ ಮರಣ (ಪ್ರತಿ ಸಾವಿರ ಜನನಕ್ಕೆ)



ಮಾಹಿತಿ: ರಿಜಿಸ್ಟರ್ ಜನರಲ್ ಆಫ್ ಇಂಡಿಯಾದ ಎಸ್‌ಆರ್‌ಎಸ್ ವರದಿ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 11-6-1998

● **ಮಂದಿರ ನಿರ್ಮಿಸಿದಲ್ಲಿ ಬೆಂಬಲ ವಾಪಸ್: ಫಾರೂಕ್**

ನವದೆಹಲಿ ಜೂನ್ 10- ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಮಾಡಲು ಅವಕಾಶ ನೀಡಿದಲ್ಲಿ, ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಕೇಂದ್ರ ಸರ್ಕಾರಕ್ಕೆ 'ನ್ಯಾತನಲ್ ಕಾನ್ಫರೆನ್ಸ್' ನೀಡಿರುವ ಬೆಂಬಲವನ್ನು ಪುನರ್ ಪರಿಶೀಲಿಸಲಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಫಾರುಖ್ ಅಬ್ದುಲ್ಲಾ ಅವರು ಬೆದರಿಕೆ ಹಾಕಿದ್ದಾರೆ.

'ನ್ಯಾಶನಲ್ ಕಾನ್ಫರೆನ್ಸ್ ಪಕ್ಷವು ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನೀಡಿರುವ ಬೆಂಬಲವು ವಿಷಯಾಧಾರಿತ' ಎಂಬುದನ್ನು ಬಿಜೆಪಿ ನಾಯಕರಿಗೆ ಸುದ್ದಿಗೋಷ್ಠಿಯಲ್ಲಿ ಇಂದು ಡಾ. ಅಬ್ದುಲ್ಲಾ ಅವರು ನೆನಪು ಮಾಡಿಕೊಟ್ಟರು.

50 ವರ್ಷಗಳ ಹಿಂದೆ

ಸೋಮವಾರ, 11-6-1973

● **ನೇಪಾಳ ಪ್ರಯಾಣಿಕರ ವಿಮಾನ ಅಪಹರಣ: 38 ಲಕ್ಷ ರೂ. ದರೋಡೆ**

ಕಠಮಂಡು, ಜೂ 10- ನೇಪಾಳದ ಪ್ರಯಾಣಿಕರ ವಿಮಾನವೊಂದನ್ನು, ಮೂವರು ಶಸ್ತ್ರಸಜ್ಜಿತರು ಇಂದು ಅಪಹರಿಸಿ, ಭಾರತದ ಗಡಿಯಲ್ಲಿರುವ ಫೋರ್ಬ್ಸ್‌ಗಂಜ್‌ನಲ್ಲಿ ಇಳಿಸಿ, 38 ಲಕ್ಷ ನೇಪಾಳಿ ರೂಪಾಯಿಯೊಡನೆ ಪರಾರಿಯಾದರು. ಫೋರ್ಬ್ಸ್‌ಗಂಜ್‌ನಲ್ಲಿ ಸಣ್ಣ ವಿಮಾನ ಇಳಿದಾಣವಿದೆ.

ಎರಡು ಎಂಜಿನ್‌ನ ಆಟರ್ ವಿಮಾನದಲ್ಲಿ 22 ಪ್ರಯಾಣಿಕರಿಗೆ ಸ್ಥಳವಿದ್ದು, ಪೂರ್ವ ನೇಪಾಳದ ಕೈಗಾರಿಕಾ ನಗರ ಜೀರತ್ ನಗರದಿಂದ ಕಠಮಂಡುವಿಗೆ ಇಂದು ಬೆಳಿಗ್ಗೆ ಯಾನ ಕೈಗೊಂಡಿತ್ತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜೂನ್ 11, 2023

ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಅಷ್ಟಮಿ ಗಂ. 12-06 ನಕ್ಷತ್ರ: ಪೂರ್ವಾಭಾದ್ರ ಗಂ. 14-32 ಯೋಗ: ಪ್ರೀತಿ 10-10 ಕರಣ: ಕೌಲವ ಗಂ. 12-06, ವೃಷಭ ಮಾಸದ 27 ನೇ ದಿನ, ಮಳೆನಕ್ಷತ್ರ: ಮೃಗಶಿರ 1.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-07 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 22 ಜುಲ್ಖಾಯದ್
ಅದೃಷ್ಟ ಸಂಖ್ಯೆ : 1, 7

ಮೇಷ: ಮನೆಯಲ್ಲಿ ಶಾಂತ ವಾತಾವರಣವಿದ್ದು ಮನಸ್ಸಿಗೆ ತುಸು ನೆಮ್ಮದಿ ಬರುವುದು. ಗೃಹ ನಿರ್ಮಾಣ ಅಥವಾ ಕೊಳ್ಳುವ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ತೋರುವಿರಿ. ಕೊಟ್ಟ ಮಾತನ್ನು ಉಳಿಸಿಕೊಳ್ಳುವಲ್ಲಿ ನಿಮ್ಮ ಶ್ರಮವಿರಲಿ.

ವೃಷಭ: ಅಧ್ಯಯನ ಸಂಶೋಧನೆಯಿಂದ ಯೋಚಿಸಿದ ಹಣ ಮತ್ತು ಖ್ಯಾತಿಯನ್ನು ನಿಮ್ಮ ಇಷ್ಟದಂತೆ ಪಡೆದುಕೊಳ್ಳಲು ಆಗದೇ ಇರುವುದರಿಂದ ನೆಮ್ಮದಿ ಕಳೆದುಕೊಳ್ಳುವಂತಾಗಲಿದೆ.

ಮಿಥುನ: ನಿಮ್ಮ ಅಸಾಧಾರಣ ಸಾಧನೆಗಳಿಗಾಗಿ ಪ್ರಶಂಸೆಯ ನುಡಿ ಮತ್ತು ಸನ್ಮಾನಗಳನ್ನು ಪಡೆಯುವಿರಿ. ದೀನರ ಸೇವೆಯಿಂದ ನಿಮ್ಮ ಅದೃಷ್ಟ ಈ ದಿನ ಇಮ್ಮಡಿಗೊಳ್ಳಲಿದೆ. ಗುರಿಯನ್ನು ತಲುಪುವಲ್ಲಿ ನಿಮ್ಮ ಶ್ರಮವು ಸಾರ್ಥಕವೆನಿಸುವುದು.

ಕರ್ಕಾಟಕ: ಮದುವೆ ಮುಂತಾದ ವಿಷಯಗಳತ್ತ ಗಮನಹರಿಸುವಂತೆ ಮನೆಯವರಿಂದ ಒತ್ತಡ ಬರಲಿದೆ. ಭೂಮಿಗೆ ಸಂಬಂಧಿಸಿದ ವ್ಯವಹಾರಗಳಿಂದ ಲಾಭ. ವ್ಯವಸಾಯದ ಕೆಲಸಗಳಿಗಾಗಿ ಹೆಚ್ಚಿನ ಶ್ರಮ ಪಡುವಂತಾಗಲಿದೆ.

ಸಿಂಹ: ವೃತ್ತಿಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ನಿಮ್ಮೊಳಗಿನ ನಾಯಕನನ್ನು ಜಾಗೃತಗೊಳಿಸಿ. ಪ್ರಮುಖ ಕಾರ್ಯಗಳಲ್ಲಿ ಸಣ್ಣಪುಟ್ಟ ಸಮಸ್ಯೆಗಳು ಎದುರಾಗಬಹುದು, ಲೆಕ್ಕಿಸದೆ ಗುರಿ ಸಾಧನೆಯ ಬಗ್ಗೆ ಯೋಚಿಸಿರಿ.

ಕನ್ಯಾ: ಒತ್ತಡ ತರುವಂತಹ ಕೆಲಸಗಳಿಂದ ದೂರವಿರಿ, ಏಕೆಂದರೆ ಅದರಿಂದ ನಿಮ್ಮ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಹೊಂದುವಿರಿ. ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನ ಭೀತಿ ಅಥವಾ ಅಪವಾದದ ಸಮಸ್ಯೆ ಇರುತ್ತದೆ.

ತುಲಾ: ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸಿ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವುದು ಉತ್ತಮ. ವಾಹನ ಮಾರಾಟಗಳಿಂದ ಉತ್ತಮ ಆದಾಯ. ಪೆಟ್ರೋಲಿಯಂ ಉತ್ಪನ್ನಗಳಿಂದ ಹೆಚ್ಚಿನ ಆದಾಯವಿದೆ.

ವೃಶ್ಚಿಕ: ಸುದ್ದಿ ಗೋಷ್ಠಿಗಳಲ್ಲಿ ಭಾಗವಹಿಸುವ ಉತ್ತಮ ಅವಕಾಶವನ್ನು ಸಿಗುವುದು. ದಿನದ ಪರಿಸ್ಥಿತಿಯನ್ನು ಬುದ್ಧಿವಂತಿಕೆ, ಎಚ್ಚರಿಕೆಯಿಂದ ನಿಭಾಯಿಸಿ. ಮನೆಯ ಹೆಚ್ಚುವರಿ ಆದಾಯದಿಂದ ಹುಮ್ಮಸ್ಸು ಹೆಚ್ಚುವುದು.

ಧನು: ಹಿಂದೆ ಕೆಲಸ ತಿರಸ್ಕರಿಸಿದವರು ಪುನಃ ಹಿಂದಿನ ಕಂಪನಿಯನ್ನೇ ಆಶ್ರಯಿಸುವ ಬಗ್ಗೆ ಯೋಚನೆ ಮಾಡಿ. ಸ್ವಂತ ಉದ್ಯಮದಲ್ಲಿರುವವರು ತಮ್ಮ ಕಾರ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಸಫಲತೆ ಹೊಂದುವರು.

ಮಕರ: ನಿಮ್ಮೆಲ್ಲಾ ಕೆಲಸಗಳಿಗೂ ಕುಟುಂಬ ವರ್ಗದವರ ಉತ್ತಮವಾದ ಬೆಂಬಲವಿರುವುದು. ರಾಜಕೀಯ ವಿದ್ಯಮಾನಗಳನ್ನು ಎಚ್ಚರಿಕೆಯಿಂದ ಗಮನಿಸಿ. ಶ್ರಮದ ಬದುಕಿನಿಂದ ಹೊಸ ಘಟ್ಟವನ್ನು ತಲುಪುವಂತಾಗಲಿದೆ.

ಕುಂಭ: ಕಲೆ, ಅಲಂಕಾರಿಕ ಹಾಗೂ ವೈಭೋಗ ವಸ್ತುಗಳಿಂದಾಗಿ ಹೆಚ್ಚಿನ ಲಾಭ ಈ ದಿನದಲ್ಲಿ ನೀವು ನಿರೀಕ್ಷಿಸಬಹುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವ ಸೂಚನೆ. ನಿಮ್ಮ ಸ್ಪರ್ಧಾ ಮನೋಭಾವ ತೀವ್ರಗೊಳ್ಳುವುದು.


ಮೀನ: ಚರ ಅಥವಾ ಸ್ಥಿರ ಸ್ವತ್ತುಗಳು ಸಿಗುವ ಸಂಭವವಿದೆ. ಮನೆಯ ಕೆಲಸದಲ್ಲಿ ನಿರ್ಲಕ್ಷ್ಯ ವಹಿಸಬೇಡಿ. ಕುಟುಂಬ ಸದಸ್ಯರ ಆರೋಗ್ಯದ ಬಗೆಗಿನ ಚಿಂತೆ ತಪ್ಪಿದ್ದಲ್ಲ. ಪೋಲೀಸ್ ಸಿಬ್ಬಂದಿಗಳಿಗೆ ಹೆಚ್ಚಿನ ಕೆಲಸವಿರಲಿದೆ.

ಪದಬಂಧ 5346

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ದೇವನೊಲಿದರೆ ಕೊರಡಿನಲ್ಲೂ ಚಿಗುರು ! (3)
4. ಅರ್ಥವಿಲ್ಲದ ಅನಿಷ್ಟ (3)
5. ಚದುರಂಗದಾಟದಲ್ಲಿ ಗೆದ್ದ ಜಾಣ! (3)
6. ಖುಷಿಯನ್ನು ನೋಡಿ ಕೋಪಗೊಳ್ಳು! (2)
8. ಸತಿ ಹತ್ತಿರವೇ ಬಂದಿಹಳಲ್ಲ ಈ ಉಪಪತ್ನಿ? (3)
10. ಲವಣ ಹಿಡಿದಿರುವ ಕುಶನ ಸಹೋದರ (2)
12. ಮರುದಿನವೇ ನಡೆದ ವಿವಾಹ (3)
14. ಹಗರಣದ ನಡುವಿರುವ ದುಷ್ಟ ಶಕ್ತಿ! (2)
16. ಶುಕದ ಬಳಿಯಿರುವ ನಾಯಿ (3)
18. ಬಡಿವಾರ ತೋರಿದಾಗಲೇ ಈ ದುರ್ಭಿಕ್ಷ (2)
20. ಕಾವು ಇದ್ದಾಗಲೇ ಬಲು ಡೌಲು! (3)
22. ಒಲುಮೆಯಿಂದ ಮಾಡಿದ ಒತ್ತಾಯ (3)
23. ಸರ ತಂದವನಿಗೆ ತೋರಿದ ಆದರ (3)

ಮೇಲಿಂದ ಕೆಳಕ್ಕೆ
1. ಕೋಲನ್ನು ಹಿಡಿದು ವಾಲುತ್ತಿರುವವ ಕೋಟೆ ರಕ್ಷಕ (4)
2. ಮುಸುಗುಟ್ಟುತ್ತಾ ಕಟ್ಟಿರುವ ಶುಲ್ಕ (3)
3. ಲಂಚ ಪಡೆದವನೇರಿದ ಪಲ್ಲಂಗ (2)
4. ಅರಸುತ್ತಿದ್ದಾಗ ಕಾಣಿಸಿದ ರಾಜ (3)
7. ಮಗನಿಗೆ ಕಲಿಸಿರುವ ವೇದ (3)
9. ವನದಲ್ಲಿರುವ ಕ್ರೂರಮೃಗ (4)
11. ವರ್ತಕನು ನೀಡಿದ್ದು ಈಗಿನ ಸುದ್ದಿ (4)
13. ಬವಣೆ ಪಟ್ಟಿರುವಾಗ ಮುರುವಾದ ಮೆದೆ (3)
15. ರತ್ನಗಳು ಅಡಗಿರುವ ಶರಧಿ (4)
17. ಹೆಚ್ಚು ಪದದ ವಿರುದ್ಧ (3)
19. ಸಕ್ಕರೆ ಹಂಚುತ್ತಿರುವ ಅಸುರ (3)
21. ಹಾವುಗೆ ಹತ್ತಿರವಿರುವ ಸರ್ಪ ತಿರುಗಿದೆಯಲ್ಲಾ? (2)



5345ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಚರಕ 3.ಪತಾಕೆ 5.ಕಚ 6.ಟಗರು 7.ನೆಪ 9.ವರ್ತಕ 10.ಗಡವ 11.ಸೆಹ 13.ಜನನಿ 15.ಆನೆ 16.ರಕ್ಷಕ 17.ನರ್ತನ

ಮೇಲಿಂದ ಕೆಳಕ್ಕೆ: 1.ಚಮಚ 2.ಕರಟ 3.ಪನ್ನೀರು 4.ಕೆರನೆ 5.ಕತ್ತಿವರಸೆ 8.ಪರಿವರ್ತನೆ 12.ಹತ್ತಿರ 13.ಜನಕ 14.ನಿಧಾನ 15.ಆನನ

ಸುಡೊಕು 5732

6		4	9		7			8
					6		2	
	7	8	2			4		6
7					8		6	
	8		4			7	3	5
		5		7				
4	9		3	8		6		1
	6					5		
8		7			4			3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5731 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಂಕ್ಷಿಪ್ತ ಸುದ್ದಿ

ಕಾಳ್ಗಿಚ್ಚು : 14 ಮಂದಿ ಸಾವು

ಕಜಕಿಸ್ತಾನ (ಎಎಫ್‌ಪಿ): ಈಶಾನ್ಯ ಕಜಕಿಸ್ತಾನದ ಅರಣ್ಯವೊಂದರಲ್ಲಿ ಕಾಳ್ಗಿಚ್ಚಿನಿಂದ 14 ಮಂದಿ ಮೃತಪಟ್ಟಿದ್ದಾರೆ ಎಂದು ತುರ್ತು ಪರಿಸ್ಥಿತಿ ಸಚಿವಾಲಯ ಶನಿವಾರ ತಿಳಿಸಿದೆ.

ಈವರೆಗೆ 14 ಮೃತದೇಹಗಳು ಪತ್ತೆಯಾಗಿದೆ. ಸದ್ಯ 316 ಜನರನ್ನು ಸ್ಥಳಾಂತರಿಸಲಾಗಿದೆ. 60 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಬೆಂಕಿ ಹರಡಿದ್ದು, ಕಾಡಿನಲ್ಲಿದ್ದ ಅರಣ್ಯ ರಕ್ಷಕರಿಗೆ ಹುಡುಕಾಟ ನಡೆಸಲಾಗುತ್ತಿದೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದೂ ಸಚಿವಾಲಯ ಹೇಳಿಕೆ ನೀಡಿದೆ.

ಸಾವಿರಕ್ಕೂ ಹೆಚ್ಚು ಜನರು ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ಹೋಟೆಲ್ ಮೇಲೆ ಉಗ್ರರ ದಾಳಿ: 9 ಮಂದಿ ಸಾವು

ಮೊಗದಿಶು, ಸೊಮಾಲಿಯಾ (ಎಪಿ): ರಾಜಧಾನಿ ಮೊಗದಿಶುವಿನ ಹೋಟೆಲ್ ಮೇಲೆ ಅಲ್ ಶಬಾಬ್ ಉಗ್ರರು ಶುಕ್ರವಾರ ರಾತ್ರಿ ನಡೆಸಿದ ದಾಳಿಯಲ್ಲಿ ಮೂವರು ಸೈನಿಕರು ಸೇರಿದಂತೆ ಒಂಬತ್ತು ಮಂದಿ ಮೃತಪಟ್ಟು, ಹತ್ತು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಭದ್ರತಾ ಪಡೆಗಳು ಪರ್ಲ್ ಬೀಚ್ ಹೋಟೆಲ್‌ನಿಂದ 84 ಜನರನ್ನು ರಕ್ಷಿಸಿವೆ. ಅಲ್-ಕೈದಾ ಉಗ್ರ ಸಂಘಟನೆಯೊಂದಿಗೆ ಸಂಪರ್ಕ ಹೊಂದಿರುವ ಅಲ್-ಶಬಾಬ್ ದಾಳಿಯ ಹೊಣೆ ಹೊತ್ತಿಕೊಂಡಿದೆ.

ಪರ್ಲ್ ಬೀಚ್ ಹೋಟೆಲ್ ಒಳಗೆ ಕೆಲವರು ಸಿಲುಕಿಕೊಂಡಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಸ್ಫೋಟ: ಐವರು ಕಾರ್ಮಿಕರ ದುರ್ಮರಣ

ಅಂಕರಾ (ಎಪಿ): ರಾಕೆಟ್ ಮತ್ತು ಸ್ಫೋಟಕ ಘಟಕದಲ್ಲಿ ಶನಿವಾರ ಸಂಭವಿಸಿದ ಸ್ಫೋಟದಲ್ಲಿ ಕಟ್ಟಡವೊಂದು ಕುಸಿದ ಪರಿಣಾಮ ಅದರೊಳಗಿದ್ದ ಎಲ್ಲಾ ಐವರು ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜಧಾನಿ ಅಂಕಾರಾ ಹೊರವಲಯದಲ್ಲಿರುವ ಸರ್ಕಾರಿ ಸ್ವಾಮ್ಯದ ಮೆಕಾನಿಕಲ್ ಮತ್ತು ಕೆಮಿಕಲ್ ಇಂಡಸ್ಟ್ರಿ ಕಾರ್ಪೊರೇಷನ್ ಕಾಂಪೌಂಡ್‌ನಲ್ಲಿ ಬೆಳಿಗ್ಗೆ 8.45 ರ ಸುಮಾರಿಗೆ ಸ್ಫೋಟ ಸಂಭವಿಸಿದೆ.

ಅಮೆಜಾನ್ ಕಾಡಿನಲ್ಲಿ ಲಘು ವಿಮಾನ ಪತನ ಪ್ರಕರಣ: ಮಕ್ಕಳ ಚಿತ್ರ ಟ್ವೀಟ್ ಮಾಡಿದ ಮಿಲಿಟರಿ

40 ದಿನ ಬಳಿಕ 4 ಮಕ್ಕಳು ಜೀವಂತ ಪತ್ತೆ

ಬೊಗೋಟಾ, (ಕೊಲಂಬಿಯಾ) (ಎಪಿ): ಅಮೆಜಾನ್ ದಟ್ಟ ಕಾಡಿನಲ್ಲಿ ಲಘು ವಿಮಾನ ಅಪಘಾತಕ್ಕೀಡಾದ ನಂತರ ನಾಪತ್ತೆಯಾಗಿದ್ದ ನಾಲ್ವರು ಮಕ್ಕಳು 40 ದಿನಗಳ ಬಳಿಕ ಶುಕ್ರವಾರ ಜೀವಂತವಾಗಿ ಪತ್ತೆಯಾಗಿದ್ದಾರೆ.

‘ಶೋಧ ತಂಡಕ್ಕೆ ಮಕ್ಕಳು ಸಿಕ್ಕಾಗ ಅವರೊಂದಿಗೆ ಬೇರೆ ಯಾರೂ ಇರಲಿಲ್ಲ. ಮಕ್ಕಳು ನಿಶ್ಯಕ್ತರಾಗಿದ್ದು, ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾಡು ಅವರನ್ನು ರಕ್ಷಿಸಿದೆ ಮತ್ತು ಈಗ ಅವರು ಕೊಲಂಬಿಯಾದ ಮಕ್ಕಳು’ ಎಂದು ಅಧ್ಯಕ್ಷ ಗುಸ್ತಾವೊ ಪೆಟ್ರೊ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಸೈನಿಕರು ಮತ್ತು ಸ್ವಯಂಸೇವಕರ ಗುಂಪು ಕಾಡಿನಲ್ಲಿ ರಕ್ಷಿಸಿದ ಮಕ್ಕಳೊಂದಿಗೆ ತೆಗೆಸಿಕೊಂಡ ಚಿತ್ರಗಳನ್ನು ಶುಕ್ರವಾರ ಮಿಲಿಟರಿ ಟ್ವೀಟ್ ಮಾಡಿದೆ. ಮಕ್ಕಳು ಪತ್ತೆಯಾದ ಮಾಹಿತಿಯನ್ನು ಕೊಲಂಬಿಯಾ ಅಧ್ಯಕ್ಷರು ಹಂಚಿಕೊಂಡರೂ, ಅಷ್ಟೊಂದು ದಿನಗಳವರೆಗೆ ಆ ಮಕ್ಕಳು ಕಾಡಿನಲ್ಲಿ ಹೇಗೆ ಬದುಕುಳಿದರು ಎನ್ನುವ ವಿವರ ತಕ್ಷಣಕ್ಕೆ ಲಭ್ಯವಾಗಿಲ್ಲ. ವಿಮಾನ ಅಪಘಾತ ಸಂಭವಿಸಿದ ಸ್ಥಳದಿಂದ ಸುಮಾರು ಐದು ಕಿಮೀ ದೂರದಲ್ಲಿ ಮಕ್ಕಳು ಸಿಕ್ಕಿದ್ದಾರೆ.

ಮಕ್ಕಳನ್ನು ಶನಿವಾರ ಮುಂಜಾನೆ ರಾಜಧಾನಿ ಬೊಗೋಟಾದ ಸೇನಾ ವಿಮಾನ ನಿಲ್ದಾಣಕ್ಕೆ ಕರೆತರಲಾಯಿತು. ಅಲ್ಲಿಂದ ಆಂಬುಲೆನ್ಸ್‌ನಲ್ಲಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಈ ಮಕ್ಕಳು ಪತ್ತೆಯಾಗಿದ್ದಾರೆ ಎಂದು ತಿಂಗಳ ಹಿಂದೆಯೇ ಸುದ್ದಿಯಾಗಿತ್ತು. ಅಧ್ಯಕ್ಷ ಪೆಟ್ರೊ ಸಹ ನಾಲ್ಕೂ ಮಕ್ಕಳು ಸಜೀವ ಪತ್ತೆಯಾಗಿರುವ ಬಗ್ಗೆ ಮಾಹಿತಿ ಹಂಚಿಕೊಂಡಿದ್ದರು. ಆದರೆ, ನಂತರ ಆ ಸುದ್ದಿ ಸುಳ್ಳು ಎಂದು ವರದಿಯಾಗಿತ್ತು.



ಅಮೆಜಾನ್ ಕಾಡಿನಲ್ಲಿ ಲಘು ವಿಮಾನ ಅಪಘಾತದ ವೇಳೆ ನಾಪತ್ತೆಯಾಗಿದ್ದ ನಾಲ್ವರು ಮಕ್ಕಳನ್ನು ಕೊಲಂಬಿಯಾ ಸೈನಿಕರು ಪತ್ತೆ ಹಚ್ಚಿದ್ದಾರೆ –ಚಿತ್ರ: ಎಪಿ,ಪಿಟಿಐ



ರಾಜಧಾನಿ ಬೊಗೋಟಾದ ಸೇನಾ ವಿಮಾನ ನಿಲ್ದಾಣಕ್ಕೆ ಮಕ್ಕಳನ್ನು ಕರೆತರಲಾಯಿತು —ಎಎಫ್‌ಪಿ

ಮೇ 1ರ ಮುಂಜಾನೆ 7 ಪ್ರಯಾಣಿಕರು ಹಾಗೂ ಒಬ್ಬ ಪೈಲಟ್ ಇದ್ದ ಸೆಸ್ನಾ ಸಿಂಗಲ್ ಎಂಜಿನ್‌ನ ಲಘು ವಿಮಾನವೊಂದು ಎಂಜಿನ್ ವೈಫಲ್ಯದಿಂದಾಗಿ ಪತನವಾಗಿತ್ತು. ಘಟನೆ ಬಳಿಕ ಬದುಕುಳಿದವರಿಗಾಗಿ ತೀವ್ರ ಹುಡುಕಾಟ ನಡೆಸಲಾಗಿತ್ತು.

ಅಪಘಾತ ಸಂಭವಿಸಿದ ಎರಡು ವಾರಗಳ ನಂತರ ಶೋಧ ತಂಡವು ಅಮೆಜಾನ್ ದಟ್ಟ ಕಾಡಿನಲ್ಲಿ ವಿಮಾನವನ್ನು ಪತ್ತೆ ಹಚ್ಚಿತ್ತು. ಪೈಲಟ್, ಮಕ್ಕಳ ತಾಯಿ ಸೇರಿದಂತೆ ಮೂವರು ವಯಸ್ಕರ ಮೃತದೇಹಗಳೂ ಸಿಕ್ಕಿದ್ದವು. ಆದರೆ, ಅವರೊಂದಿಗೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ನಾಲ್ಕು ಮಕ್ಕಳು ಮಾತ್ರ ಪತ್ತೆಯಾಗಿರಲಿಲ್ಲ.

ಕಾರ್ಯಾಚರಣೆ ವೇಳೆ ಕಾಡಿನಲ್ಲಿ ಮಕ್ಕಳ ಹೆಜ್ಜೆ ಗುರುತು, ಅರ್ಧ ತಿಂದ ಹಣ್ಣುಗಳು ಸೇರಿದಂತೆ ಹಲವು ಕುರುಹುಗಳು ಪತ್ತೆಯಾಗಿದ್ದವು. ಹೀಗಾಗಿ ಮಕ್ಕಳು ಬದುಕಿರುವ ನಿರೀಕ್ಷೆಯಲ್ಲಿ ಹುಡುಕಾಟ ತೀವ್ರಗೊಳಿಸಲಾಗಿತ್ತು.

ಕಣ್ಮರೆಯಾಗಿದ್ದವರಲ್ಲಿ 13, 9, 4 ವರ್ಷ ಹಾಗೂ 11 ತಿಂಗಳ ಮಗು ಸಹ ಇತ್ತು. ಮಕ್ಕಳನ್ನು ಪತ್ತೆ ಹಚ್ಚಲು ಶ್ವಾನಗಳೊಂದಿಗೆ 150 ಸೈನಿಕರನ್ನು ಕಳುಹಿಸಲಾಗಿತ್ತು. ಸ್ಥಳೀಯ ಬುಡಕಟ್ಟು ಸಮುದಾಯದ ಸ್ವಯಂಸೇವಕರು ಸಹ ಕಾರ್ಯಾಚರಣೆಗೆ ನೆರವು ನೀಡಿದ್ದರು.

ಹಸಿವಿನಿಂದ ಮಕ್ಕಳು ಸಾಯಬಾರದು ಎಂಬ ಕಾರಣಕ್ಕೆ ಆಹಾರ ಪದಾರ್ಥಗಳು ಹಾಗೂ ನೀರಿನ ಬಾಟಲಿಗಳನ್ನು ಕೂಡ ಹೆಲಿಕಾಪ್ಟರ್ ಮೂಲಕ ಅನೇಕ ಕಡೆ ಹಾಕಲಾಗಿತ್ತು. ಎಲ್ಲಿಯೂ ಹೋಗದಂತೆ ಮಕ್ಕಳ ಅಜ್ಜಿಯಿಂದ ಹೇಳಿಸಿ ದಾಖಲಿಸಿಕೊಂಡಿದ್ದ ಸಂದೇಶವನ್ನು ರಕ್ಷಣಾ ಸಿಬ್ಬಂದಿ ನಿರಂತರ ಮೊಳಗಿಸಿದ್ದರು.

ಮೀನು ಹಿಡಿಯುವುದು, ಬೇಟೆಯಾಡುವುದು ಮುಂತಾದ ಕಲೆಗಳನ್ನು ಮಕ್ಕಳು ತಿಳಿದಿದ್ದರು. ಅವರಿಗೆ ಕಾಡಿನ ಜ್ಞಾನವೂ ಇತ್ತು ಎಂದು ಮಕ್ಕಳ ಅಜ್ಜ ತಿಳಿಸಿದ್ದಾರೆ.

ಪಾರ್ಟಿಗೇಟ್ ಪ್ರಕರಣ: ಹಕ್ಕುಬಾಧ್ಯತಾ ಸಮಿತಿ ತನಿಖೆಯಿಂದಾಗಿ ಕ್ರಮ

ಸಂಸದ ಸ್ಥಾನ ತೊರೆದ ಬೋರಿಸ್

ಲಂಡನ್ (ಪಿಟಿಐ): ಬ್ರಿಟನ್‌ನ ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಅವರು ತಮ್ಮ ಸಂಸತ್ ಸ್ಥಾನಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ.

ಕೋವಿಡ್ ಲಾಕ್‌ಡೌನ್ ನಿಯಮಗಳನ್ನು ಮುರಿದು ಡೌನಿಂಗ್ ಸ್ಟ್ರೀಟ್‌ನಲ್ಲಿ (ಬ್ರಿಟನ್ ಪ್ರಧಾನಿ ಕಚೇರಿ ಇರುವ ಸ್ಥಳ) ಸಂತೋಷ ಕೂಟ ಏರ್ಪಡಿಸಿ ಸಂಸತ್ತನ್ನು ದಾರಿ ತಪ್ಪಿಸಿದ ಪ್ರಕರಣದಲ್ಲಿ (ಪಾರ್ಟಿಗೇಟ್ ಪ್ರಕರಣ) ಜಾನ್ಸನ್ ವಿರುದ್ಧ ಸಂಸತ್ತಿನ ಹಕ್ಕು ಬಾಧ್ಯತಾ ಸಮಿತಿಯು ತನಿಖೆ ನಡೆಸುತ್ತಿತ್ತು.



ಬೋರಿಸ್ ಜಾನ್ಸನ್

ಈ ಪ್ರಕರಣದಲ್ಲಿ ದಂಡನೆ ವಿಧಿಸುವುದಾಗಿ ಹಕ್ಕು ಬಾಧ್ಯತಾ ಸಮಿತಿಯಿಂದ ಗೌಪ್ಯ ಪತ್ರ ಸ್ವೀಕರಿಸಿದ ಬಳಿಕ ಜಾನ್ಸನ್ ರಾಜೀನಾಮೆ ನೀಡುವ ನಿರ್ಧಾರ ತೆಗೆದುಕೊಂಡಿದ್ದಾರೆ.

ಹಕ್ಕು ಬಾಧ್ಯತಾ ಸಮಿತಿಯ ತನಿಖೆಯು ದುರುದ್ದೇಶಪೂರಿತ ಎಂದು ಹೇಳಿರುವ ಅವರು, ‘ನನ್ನ ಮೇಲೆ ಎಲ್ಲರೂ ಒಟ್ಟಾಗಿ ದಾಳಿ ನಡೆಸುತ್ತಿದ್ದಾರೆ’ ಎಂದು ಪ್ರತಿಕ್ರಿಯಿಸಿದ್ದಾರೆ.

ಆದರೆ, ಈ ಪತ್ರವನ್ನು ಮತ್ತು ತನಿಖಾ ವರದಿಯನ್ನು ಸಮಿತಿಯು ಇನ್ನೂ ಬಹಿರಂಗಪಡಿಸಿಲ್ಲ ಎಂದು ಅವರು ಹೇಳಿದ್ದಾರೆ.

‘ಸಮಿತಿಯ ಪತ್ರವನ್ನು ಸ್ವೀಕರಿಸಿ ಗೊಂದಲ ಮತ್ತು ಗಾಬರಿಗೆ ಒಳಗಾದೆ. ಸಂಸತ್ತಿನಿಂದ ಹೊರ ಹೋಗುತ್ತಿರುವುದು ನೋವು ತಂದಿದೆ. ನಾನು ರಾಜೀನಾಮೆ ನೀಡದಿದ್ದರೆ ಸಂಸದ ಹ್ಯಾರಿಯೆಟ್ ಹರ್ಮನ್ ನೇತೃತ್ವದ ಸಮಿತಿಯು ನನ್ನನ್ನು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ರೀತಿಯಲ್ಲಿ ಮತ್ತು ಬಲವಂತದಿಂದ ಹೊರಹಾಕುತ್ತಿತ್ತು’ ಎಂದು ಅವರು ಹೇಳಿದ್ದಾರೆ.

‘ಬ್ರೆಕ್ಸಿಟ್ ಸಾಧ್ಯಮಾಡಿದ್ದಕ್ಕೆ ಮತ್ತು 2016ರ ಜನಮತವನ್ನು ತಲೆಕೆಳಗು ಮಾಡಿದ್ದಕ್ಕಾಗಿ ನನ್ನ ಮೇಲೆ ಸೇಡು ತೀರಿಸಿಕೊಳ್ಳಲಾಗುತ್ತಿದೆ’ ಎಂದು ಜಾನ್ಸನ್ ಹೇಳಿದ್ದಾರೆ.

ಜಾನ್ಸನ್ 2001ರಲ್ಲಿ ಮೊದಲ ಬಾರಿಗೆ ಸಂಸದರಾದರು. 2008ರಿಂದ 2016ರವರೆಗೆ ಅವರು ಲಂಡನ್‌ನ ಮೇಯರ್ ಆಗಿದ್ದರು. 2019ರ ಜುಲೈನಿಂದ 2022ರ ಸೆಪ್ಟೆಂಬರ್‌ವರೆಗೆ ಬ್ರಿಟನ್ ಪ್ರಧಾನಿಯಾಗಿದ್ದರು.

ವಿಪಕ್ಷಗಳಿಂದ ಅಂತರ: ಸುಳಿವು ನೀಡಿದ ಒಮರ್

ರಾಜೌರಿ/ಜಮ್ಮು (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಟ್ಟಾಗಿ ಸೆಣಸಲು ಮುಂದಾಗಿರುವ ಪ್ರತಿಪಕ್ಷಗಳಿಂದ ಅಂತರ ಕಾಯ್ದುಕೊಳ್ಳುವ ಬಗ್ಗೆ ನ್ಯಾಷನಲ್ ಕಾನ್ಫರೆನ್ಸ್‌ನ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಸುಳಿವು ನೀಡಿದ್ದಾರೆ.

‘ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ 370ನೇ ವಿಧಿಯ ರದ್ದತಿ ಬಗ್ಗೆ ಬಹುತೇಕ ಪಕ್ಷಗಳು ಮೌನವಾಗಿವೆ. ಅಲ್ಲದೇ, ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗೆ ಸಂಬಂಧಿಸಿದಂತೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳುವ ಪ್ರಕ್ರಿಯೆಯೇ ಇನ್ನೂ ಪಕ್ವಗೊಂಡಿಲ್ಲ’ ಎಂದರು.

ಕಾಮೆಡ್–ಕೆ: ನಂದ ಗೋಪಿಕೃಷ್ಣ ಮೊದಲಿಗ

ಒಂದನೇ ಪುಟದಿಂದ

ಮೈಸೂರಿನ ಶ್ರೇಯಾ ಪ್ರಸಾದ್ (8ನೇ ರ‍್ಯಾಂಕ್), ಸಂಜಯ ನಗರದ ಅರ್ಜುನ್ ಬಿ. ದೀಕ್ಷಿತ್ (9ನೇ ರ‍್ಯಾಂಕ್), ಆರ್.ಆರ್.ನಗರದ ಮನೀಶ್ ಎಚ್. ಪರಾಶರ್ (10ನೇ ರ‍್ಯಾಂಕ್) ಅವರು ಕರ್ನಾಟಕದವರಾಗಿದ್ದಾರೆ. ಮೊದಲ 10 ರ‍್ಯಾಂಕ್ ಪಡೆದವರಲ್ಲಿ ಹರಿಯಾಣ ಮತ್ತು ಕೇರಳದಿಂದ ತಲಾ ಇಬ್ಬರು, ಆಂಧ್ರಪ್ರದೇಶದ ಒಬ್ಬರು ಇದ್ದಾರೆ. ಅವರಲ್ಲಿ ಶ್ರೇಯಾ ಪ್ರಸಾದ್ ಹೊರತುಪಡಿಸಿ ಉಳಿದ ಎಲ್ಲರೂ ಬಾಲಕರು.


90ರಿಂದ 100 ಪರ್ಸೆಂಟೈಲ್ ಮಧ್ಯೆ ಇರುವ 8,130 ಅಭ್ಯರ್ಥಿಗಳಲ್ಲಿ 2,543 ವಿದ್ಯಾರ್ಥಿಗಳು ಕರ್ನಾಟಕದವರು. 80ರಿಂದ 90 ಪರ್ಸೆಂಟೈಲ್ ಮಧ್ಯೆ ಇರುವ 7,719 ಅಭ್ಯರ್ಥಿಗಳಲ್ಲಿ 2157 ಮಂದಿ ಕರ್ನಾಟಕದವರು.



ಮನೀಶ್



ಅರ್ಜುನ್



ಸಿದ್ಧಾರ್ಥ್



ಶ್ರೇಯಾ

ಅರ್ಹ ಅಭ್ಯರ್ಥಿಗಳಿಗೆ ಆನ್‌ಲೈನ್ ಮೂಲಕವೇ ಕೌನ್ಸೆಲಿಂಗ್ ನಡೆಸಲಾಗುವುದು. ಅಭ್ಯರ್ಥಿಗಳು ತಮ್ಮ ಲಾಗಿನ್ ಮೂಲಕ ದಾಖಲೆಗಳನ್ನು ಅಪ್‌ಲೋಡ್ ಮಾಡಬಹುದು. ಮಾಹಿತಿಗೆ COMED-K ವೆಬ್‌ಸೈಟ್ www.comedk.org ಸಂಪರ್ಕಿಸಬಹುದು.

ಮೇ 28ರಂದು ನಡೆದ ಪರೀಕ್ಷೆಯಲ್ಲಿ ಕರ್ನಾಟಕದ 25,244, ಇತರ ರಾಜ್ಯಗಳ 51,988 ವಿದ್ಯಾರ್ಥಿಗಳು ಸೇರಿ 77,232 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾಮೆಡ್–ಕೆ ನಡೆಸುವ ಈ ಪರೀಕ್ಷೆಯು 180ಕ್ಕೂ ಅಧಿಕ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅವಕಾಶ ಕಲ್ಪಿಸುತ್ತದೆ. ಪ್ರಸಕ್ತ ವರ್ಷ ಸುಮಾರು 20 ಸಾವಿರ ಸೀಟುಗಳು ಲಭ್ಯವಿವೆ.

ನಂದ ಗೋಪಿಕೃಷ್ಣ ಸೇರಿದಂತೆ ಉನ್ನತ ಸ್ಥಾನ ಪಡೆದ ಬಹುತೇಕರು ಐಐಟಿಗೆ ಪ್ರವೇಶ ಪಡೆಯುವ ಉತ್ಸಾಹ ಹೊಂದಿದ್ದು, ಜೆಇಇ ಫಲಿತಾಂಶದತ್ತ ಚಿತ್ತ ನೆಟ್ಟಿದ್ದಾರೆ. ಕೆಸಿಇಟಿ ಫಲಿತಾಂಶದ ನಿರೀಕ್ಷೆಯಲ್ಲಿರುವ ಮನೀಶ್, ಶ್ರೇಯಾ ಅವರು ಆರ್‌ವಿ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್‌ಗೆ ಪ್ರವೇಶ ಪಡೆಯಲು ಬಯಸಿದ್ದಾರೆ.

ತೈಲ ಕಂಪನಿಗಳು ಪರಿಶೀಲಿಸಬಹುದು: ಪುರಿ

‘ಇಂಧನ ದರ: ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲ’

ನವದೆಹಲಿ (ಪಿಟಿಐ): ‘ಪೆಟ್ರೋಲ್ ಮತ್ತು ಡೀಸೆಲ್ ದರ ಇಳಿಕೆ ಮಾಡುವ ಕುರಿತು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲ’ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್‌ದೀಪ್ ಸಿಂಗ್ ಪುರಿ ಅವರು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಶನಿವಾರ ಪ್ರತಿಕ್ರಿಯೆ ನೀಡಿದ್ದಾರೆ.

‘ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಸ್ಥಿರವಾಗಿಯೇ ಇದ್ದರೆ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರ ಕಡಿಮೆ ಮಾಡುವ ಕುರಿತು ಪರಿಶೀಲನೆ ನಡೆಸುವ ಸ್ಥಿತಿಗೆ ಬರಲಿವೆ’ ಎಂದೂ ಅವರು ಹೇಳಿದ್ದಾರೆ.

‘ಕಳೆದ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ಆರ್ಥಿಕ ಸಾಧನೆ ಉತ್ತಮವಾಗಿದೆ.



ಹರ್‌ದೀಪ್ ಸಿಂಗ್ ಪುರಿ – ಪಿಟಿಐ ಚಿತ್ರ

ಕಂಪನಿಗಳು ನಷ್ಟದಿಂದ ಒಂದಿಷ್ಟು ಚೇತರಿಸಿಕೊಂಡಿವೆ. ಹೀಗಾಗಿ ಏನು ಮಾಡಬಹುದು ಎನ್ನುವುದನ್ನು ಮುಂದಿನ ದಿನಗಳಲ್ಲಿ ನೋಡೋಣ’ ಎಂದು ಅವರು ತಿಳಿಸಿದ್ದಾರೆ.

‘ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ 9 ವರ್ಷಗಳ ಆಡಳಿತದ ಕುರಿತು ಇಲ್ಲಿನ ಬಿಜೆಪಿ ಮುಖ್ಯ ಕಚೇರಿಯಲ್ಲಿ ಅವರು ಮಾತನಾಡಿದರು. 2022ರ ಏಪ್ರಿಲ್‌ನಿಂದ ಇಂಧನ ದರದಲ್ಲಿ ಯಾವುದೇ ಏರಿಕೆ ಆಗದಂತೆ ಸರ್ಕಾರವು ನೋಡಿಕೊಂಡಿದೆ. ಗ್ರಾಹಕರಿಗೆ ಯಾವುದೇ ತೊಂದರೆ ಆಗದಂತೆ ಸರ್ಕಾರವು ಕ್ರಮ ವಹಿಸಿದೆ’ ಎಂದಿದ್ದಾರೆ.

‘9 ವರ್ಷಗಳ ಆಡಳಿತದಲ್ಲಿ ಜನರಿಗೆ ನೆರವಾಗಲು ಹಲವು ಕಲ್ಯಾಣ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಬಿಜೆಪಿ ಆಡಳಿತ ಇರುವ ರಾಜ್ಯಗಳಿಗೆ ಹೋಲಿಸಿದರೆ ಬಿಜೆಪಿಯೇತರ ಪಕ್ಷಗಳ ಆಡಳಿತ ಇರುವ ರಾಜ್ಯಗಳು ವ್ಯಾಟ್ ಕಡಿಮೆ ಮಾಡದೇ ಗರಿಷ್ಠ ದರಕ್ಕೆ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ಮಾಡುತ್ತಿವೆ. ಹೀಗಿದ್ದರೂ ಆ ರಾಜ್ಯಗಳೇ ಪೆಟ್ರೋಲಿಯಂ ದರಗಳ ಬಗ್ಗೆ ಹೆಚ್ಚು ದನಿ ಎತ್ತುತ್ತಿವೆ’ ಎಂದು ಪುರಿ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗುಜರಾತ್: ಐಎಸ್ ಸೇರಲು ಹೊರಟಿದ್ದ ನಾಲ್ವರ ಬಂಧನ

ಅಹಮದಾಬಾದ್: ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರಗಾಮಿ ಸಂಘಟನೆಯನ್ನು ಸೇರಲು ಸಂಚು ಮಾಡಿದ್ದ ನಾಲ್ವರನ್ನು ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಬಂಧಿಸಿದೆ. ಅವರಲ್ಲಿ ಒಬ್ಬರು ಸೂರತ್‌ನ ಮಹಿಳೆಯೂ ಇದ್ದಾರೆ. ಅವರನ್ನು ಪೋರಬಂದರ್‌ನಲ್ಲಿ ಬಂಧಿಸಲಾಯಿತು ಎಟಿಎಸ್ ಶನಿವಾರ ತಿಳಿಸಿದೆ.

ಜಮ್ಮು ಮತ್ತು ಕಾಶ್ಮೀರದ ಶ್ರೀನಗರದ ನಿವಾಸಿಗಳಾದ ಉಬೇದ್ ನಾಸಿರ್ ಮೀರ್, ಹನಾನ್ ಹಯಾತ್ ಶಾಹುಲ್, ಮೊಹಮದ್ ಹಾಜೀಮ್ ಶಾ ಹಾಗೂ ಸೂರತ್‌ನ ಸುಮ್ಮೈರಾ ಬಾನು ಮಲಿಕ್ ಬಂಧಿತರು. ಈ ನಾಲ್ವರು 20ರಿಂದ 30ರೊಳಗಿನ ವಯಸ್ಸಿನವರು. ಇರಾನ್ ಮೂಲಕ ಅಫ್ಘಾನಿಸ್ತಾನಕ್ಕೆ ತೆರಳಿ ಐಎಸ್ ಸೇರಲು ಇವರು ಯೋಜನೆ ರೂಪಿಸಿಕೊಂಡಿದ್ದರು ಎನ್ನಲಾಗಿದೆ.

ಸೂರತ್‌ನಲ್ಲಿರುವ ಸುಮ್ಮೈರಾ ನಿವಾಸದ ಮೇಲೆ ದಾಳಿ ನಡೆಸಿ, ‘ವಾಯ್ಸ್ ಆಫ್ ಖೊರಾಸನ್’ ನಿಯತಕಾಲಿಕ ಸೇರಿದಂತೆ ಉಗ್ರಗಾಮಿ ಸಂಘಟನೆಗೆ ಸಂಬಂಧಿಸಿದ ಸಾಹಿತ್ಯವನ್ನು ವಶಪಡಿಸಿಕೊಳ್ಳಲಾಗಿದೆ. ಐಎಸ್ ಜೊತೆಗೆ ನಿಕಟ ಸಂಪರ್ಕದಲ್ಲಿರುವ, ಶ್ರೀನಗರ ನಿವಾಸಿ ಜುಬೈರ್ ಮುನ್ಶಿ ಜೊತೆ ಒಡನಾಟ ಹೊಂದಿರುವುದಾಗಿ ಸುಮ್ಮೈರಾ ಎಟಿಎಸ್‌ಗೆ ಹೇಳಿಕೆ ನೀಡಿದ್ದಾಳೆ.

‘ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯ 38 ಮತ್ತು 39ನೇ ಸೆಕ್ಷನ್ ಅಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ಭಯೋತ್ಪಾದನಾ ನಿಗ್ರಹ ದಳದ ಡಿಐಜಿ ದೀಪನ್ ಭದ್ರನ್ ತಿಳಿಸಿದ್ದಾರೆ.

‘ಬಂಧಿತ ಕಾಶ್ಮೀರಿ ಯುವಕರಿಂದ ಹಲವು ದಾಖಲೆಗಳು, ಮೊಬೈಲ್ ಫೋನ್, ಟ್ಯಾಬ್, ಚಾಕು ವಶಪಡಿಸಿಕೊಳ್ಳಲಾಗಿದೆ. ಇವರ ಕ್ಲೌಡ್ ಸಂಗ್ರಹದಲ್ಲಿ ಹಲವು ಫೋಟೊ, ವಿಡಿಯೊ, ಆಡಿಯೊಗಳು ಸಿಕ್ಕಿವೆ’ ಎಂದು ಎಟಿಎಸ್ ತಿಳಿಸಿದೆ.

‘ಅಬು ಹಮ್ಜಾ ನಿರ್ದೇಶನದಂತೆ ಪೋರಬಂದರಿನಿಂದ ಇರಾನ್‌ಗೆ ಹೋಗುವ ಯೋಜನೆ ರೂಪಿಸಿಕೊಂಡಿದ್ದೆವು. ಇದಕ್ಕೆ ಪೂರ್ವ ತಯಾರಿಯೂ ನಡೆದಿತ್ತು. ಇರಾನ್ ಮೂಲಕ ಅಫ್ಘಾನಿಸ್ತಾನಕ್ಕೆ ಹೋಗಿ ಅಲ್ಲಿ ಐಎಸ್ ಸಂಘಟನೆ ಮೂಲಕ ಉಗ್ರಗಾಮಿ ಚಟುವಟಿಕೆಗಳಲ್ಲಿ ಭಾಗಿಯಾಗುವುದು ನಮ್ಮ ಉದ್ದೇಶವಾಗಿತ್ತು’ ಎಂದು ಬಂಧಿತ ಯುವಕರು ತಿಳಿಸಿದ್ದಾರೆ ಎಂದು ಎಟಿಎಸ್ ಪ್ರಕಟಣೆಯಲ್ಲಿ ತಿಳಿಸಿದೆ.

ಹಾಸ್ಟೆಲ್ ಹಾಸಿಗೆ ಖರೀದಿ ಅಕ್ರಮ?

ಒಂದನೇ ಪುಟದಿಂದ

1,848 ಹಾಸಿಗೆ ಮತ್ತು 2,273 ದಿಂಬು ಪೂರೈಕೆಯ ಟೆಂಡರ್‌ಗೆ 2022ರ ಜೂನ್ 27ರಂದು ನಡೆದ ವಿಶ್ವವಿದ್ಯಾಲಯದ ಕೇಂದ್ರ ಖರೀದಿ ಸಮಿತಿ ಸಭೆಯಲ್ಲಿ ಅನುಮೋದನೆಯನ್ನೂ ನೀಡಲಾಗಿತ್ತು. ಇದಕ್ಕಾಗಿ ₹1.24 ಕೋಟಿ ಮೊತ್ತಕ್ಕೆ ಒಪ್ಪಿಗೆಯನ್ನೂ ನೀಡಿ, ಖರೀದಿಸಲು ಆದೇಶಿಸಲಾಗಿತ್ತು.

‘ಕೆ.ಆರ್. ವೃತ್ತದಲ್ಲಿರುವ ಸರ್ಕಾರಿ ಟೆಕ್ಸ್‌ಟೈಲ್ ಟೆಕ್ನಾಲಜಿ ವಿಭಾಗದ ಪ್ರಾಧ್ಯಾಪಕರು ಹಾಸಿಗೆ ಮತ್ತು ದಿಂಬುಗಳ ಗುಣಮಟ್ಟವನ್ನು ಪರಿಶೀಲಿಸಿದ್ದು, ಟೆಂಡರ್‌ನಲ್ಲಿ ಉಲ್ಲೇಖವಿರುವ ಗುಣಮಟ್ಟದಂತೆಯೇ ಪೂರೈಕೆ ಮಾಡಲಾಗಿದೆ’ ಎಂದು ವರದಿ ನೀಡಿದ್ದಾರೆ.

‘ಮಾರುಕಟ್ಟೆಯಲ್ಲಿ ₹3 ಸಾವಿರಕ್ಕೆ ದೊರೆಯುವ ಹಾಸಿಗೆಗೆ ₹5,900 ಹಾಗೂ ₹150ಕ್ಕೆ ಸಿಗುವ ದಿಂಬಿಗೆ ₹650 ನೀಡಿ ಖರೀದಿಸಲಾಗಿದೆ’ ಎಂದು ವಿದ್ಯಾರ್ಥಿಗಳು ಆಪಾದಿಸಿದ್ದಾರೆ. ‘ಹಿಂದೆ ಗುಣಮಟ್ಟದ ಹಾಸಿಗೆ, ದಿಂಬುಗಳನ್ನು ನೀಡಲಾಗಿತ್ತು. ಇವು ಬಳಸಲಾಗದ ರೀತಿಯಲ್ಲಿವೆ. ಈ ಖರೀದಿ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿದೆ. ಈ ಬಗ್ಗೆ ಯಾರೂ ಪ್ರಶ್ನೆ ಮಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಗರಣದ ಕುರಿತು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

‘ಟೆಕ್ಸ್‌ಟೈಲ್ ಟೆಕ್ನಾಲಜಿ ವಿಭಾಗಕ್ಕೆ ಪರಿಶೀಲಿಸಲು ಗುಣಮಟ್ಟದ ಹಾಸಿಗೆ, ದಿಂಬುಗಳನ್ನೇ ನೀಡಲಾಗಿತ್ತು. ಆದರೆ, ಪೂರೈಕೆಯಾಗಿರುವ ಹಾಸಿಗೆ– ದಿಂಬುಗಳು ಸಂಪೂರ್ಣ ಕಳಪೆ ಗುಣಮಟ್ಟದಿಂದ ಕೂಡಿವೆ. ಈ ಬಗ್ಗೆ ತನಿಖೆಯಾಗದಿದ್ದರೆ ಲೋಕಾಯುಕ್ತಕ್ಕೆ ದೂರು ಸಲ್ಲಿಸಲಾಗುವುದು’ ಎಂದು ಹೇಳಿದ್ದಾರೆ..

ಬಿಜೆಪಿ ಅಸಹಿಷ್ಣುತೆ: ಚಿದಂಬರಂ ಟೀಕೆ

ನವದೆಹಲಿ (ಪಿಟಿಐ): ಬಾಲೇಶ್ವರ ರೈಲು ದುರಂತಕ್ಕೆ ಸಂಬಂಧಿಸಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದಿರುವ ಪತ್ರಕ್ಕೆ ಕರ್ನಾಟಕದ ನಾಲ್ವರು ಬಿಜೆಪಿ ಸಂಸದರು ನೀಡಿರುವ ಪ್ರತಿಕ್ರಿಯು ‘ಟೀಕೆಗಳ ವಿಚಾರದಲ್ಲಿ ಬಿಜೆಪಿಗಿರುವ ಅಸಹಿಷ್ಣುತೆಗೆ ಉದಾಹರಣೆಯಾಗಿದೆ’ ಎಂದು ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಶನಿವಾರ ಅಭಿಪ್ರಾಯಪಟ್ಟಿದ್ದಾರೆ.

ಸಂಸದರಾದ ತೇಜಸ್ವಿ ಸೂರ್ಯ, ಸದಾನಂದ ಗೌಡ, ಪಿ.ಸಿ. ಮೋಹನ್ ಮತ್ತು ಎಸ್. ಮುನಿಸ್ವಾಮಿ ಅವರು ಖರ್ಗೆ ಅವರ ಪತ್ರವನ್ನು ಆಕ್ಷೇಪಿಸಿ ಪ್ರತಿಕ್ರಿಯೆ ನೀಡಿದ್ದಾರೆ. ಈ ಪ್ರತಿಕ್ರಿಯೆಯಲ್ಲಿ ಸತ್ವವಿಲ್ಲ ಮತ್ತು ವಿಷಯ ಮಂಡನೆಯು ಪೊಳ್ಳಾಗಿದೆ ಎಂದು ಚಿದಂಬರಂ ಅವರು ಹೇಳಿದ್ದಾರೆ.

‘ರೈಲ್ವೆ ಭದ್ರತೆಯ ಕುರಿತು ಅಶ್ವಿನಿ ವೈಷ್ಣವ್ ಅವರು ನೀಡಿದ್ದ ಟೊಳ್ಳು ಭರವಸೆಗಳ ನಿಜ ಬಣ್ಣ ಈಗ ಬಯಲಾಗಿದೆ’ ಎಂದು ಖರ್ಗೆ ಅವರು ಪತ್ರದಲ್ಲಿ ಉಲ್ಲೇಖಿಸಿದ್ದರು. ಜೊತೆಗೆ, ರೈಲು ಅಪಘಾತ ತನಿಖೆಯನ್ನು ಸಿಬಿಐಗೆ ವಹಿಸುವುದನ್ನು ವಿರೋಧಿಸಿದ್ದ ಅವರು, ‘ಸಿಬಿಐ ಇರುವುದು ಅಪರಾಧ ಪ್ರಕರಣಗಳ ತನಿಖೆ ನಡೆಸಲು ಹೊರತು ಅಪಘಾತದ ತನಿಖೆ ನಡೆಸಲು ಅಲ್ಲ’ ಎಂದಿದ್ದರು.

‘ವಾಟ್ಸ್‌ಆ್ಯಪ್ ವಿಶ್ವವಿದ್ಯಾಲಯದಿಂದ ಎರವಲು ಪಡೆದ ಮಾಹಿತಿ ಆಧರಿಸಿ ಪ್ರಧಾನಿ ಅವರಿಗೆ ಪತ್ರ ಬರೆಯುವುದು ನಿಮ್ಮಂಥ ಉನ್ನತ ನಾಯಕರಿಗೆ ಸರಿಹೊಂದುವುದಿಲ್ಲ. ವಾಟ್ಸ್‌ಆ್ಯಪ್ ವಿ.ವಿಯ ಕುಲಪತಿಗಳಾದ ನೀವು ಸುಳ್ಳು ಸುದ್ದಿಗಳನ್ನು ಉಗುಳಲೇಬೇಕು ಎಂಬ ಒತ್ತಡಕ್ಕೆ ಒಳಗಾಗಿರುತ್ತೀರಿ’ ಎಂದು ಸಂಸದರು ಬರೆದಿರುವ ಪತ್ರದಲ್ಲಿ ಹೇಳಲಾಗಿದೆ.

ಬಿಜೆಪಿ ಸಂಸದರ ಈ ಹೇಳಿಕೆಯನ್ನು ವಿರೋಧಿಸಿರುವ ಚಿದಂಬರಂ, ‘ನಮ್ಮ ದೇಶದ ಪ್ರಜಾಪ್ರಭುತ್ವ ಹೇಗಿದೆ ಎಂದರೆ, ಪ್ರಧಾನಿಯು ಪತ್ರಕ್ಕೆ ಪ್ರತಿಕ್ರಿಯಿಸಬೇಕು ಎಂಬುದನ್ನು ಪರಿಗಣಿಸುವುದೂ ಇಲ್ಲ’ ಎಂದಿದ್ದಾರೆ.


ಹಣಕಾಸು, ಆಟೊ ವಲಯ: ಹೆಚ್ಚಿದ ವಿದೇಶಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಗಳಲ್ಲಿ ಹಣಕಾಸು ಮತ್ತು ಆಟೊ ವಲಯದ ಷೇರುಗಳನ್ನು ಹೆಚ್ಚಾಗಿ ಖರೀದಿಸುತ್ತಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.

ವಿದೇಶಿ ಹೂಡಿಕೆದಾರರು ಮೇ ತಿಂಗಳಿನಲ್ಲಿ ₹ 43,838 ಕೋಟಿ (ಎನ್‌ಎಸ್‌ಡಿಎಲ್ ಮಾಹಿತಿ) ಹೂಡಿಕೆ ಮಾಡಿದ್ದಾರೆ. ಇದರಲ್ಲಿ ಹೆಚ್ಚಿನ ಪಾಲನ್ನು ಹಣಕಾಸು ಸೇವೆಗಳು, ಆಟೊ, ಆಟೊ ಬಿಡಿಭಾಗಗಳು, ಬಂಡವಾಳ ಸರಕುಗಳು ಮತ್ತು ಎಫ್‌ಎಂಸಿಜಿ ವಲಯದಲ್ಲಿ ತೊಡಗಿಸಿದ್ದಾರೆ. ಜೂನ್‌ನಲ್ಲಿಯೂ ಹೂಡಿಕೆಯನ್ನು ಮುಂದುವರಿಸಿದ್ದು, ಹಣಕಾಸು ಮತ್ತು ಆಟೊ ವಲಯದಲ್ಲಿ ಹೆಚ್ಚಿನ ಬಂಡವಾಳ ತೊಡಗಿಸುವ ನಿರೀಕ್ಷೆ ಇದೆ ಎಂದು ವಿಜಯಕುಮಾರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ವಿದೇಶಿ ಸಾಂಸ್ಥಿಕ ಬಂಡವಾಳ (ಎಫ್‌ಐಐ) ಒಳಹರಿವು (ಕೋಟಿಗಳಲ್ಲಿ)



ಮೇನಲ್ಲಿ ಐ.ಟಿ. ಮತ್ತು ಲೋಹ ವಲಯಗಳ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಆದರೆ, ಏಪ್ರಿಲ್‌ಗೆ ಹೋಲಿಸಿದರೆ ಮಾರಾಟದ ಪ್ರಮಾಣ ಕಡಿಮೆ ಆಗಿದೆ ಎಂದು ತಿಳಿಸಿದರು.

ಜಾಗತಿಕವಾಗಿ ಮೇ ತಿಂಗಳಿನಲ್ಲಿ ಜಪಾನ್, ದಕ್ಷಿಣ ಕೊರಿಯಾ, ತೈವಾನ್ ಮತ್ತು ಭಾರತದ ಮಾರುಕಟ್ಟೆಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆ ಆಗಿದ್ದು, ಚೀನಾದಿಂದ ಬಂಡವಾಳ ಹಿಂತೆಗೆತ ಆಗಿದೆ. ಜೂನ್‌ನಲ್ಲಿಯೂ ಇದೇ ಪ್ರವೃತ್ತಿ ಮುಂದುವರಿಯುವ ಲಕ್ಷಣಗಳು ಗೋಚರಿಸುತ್ತಿವೆ. ಎಫ್‌ಪಿಐ ಒಳಹರಿವು ಮುಂದುವರಿದಿರುವುದರಿಂದಾಗಿ ನಿಫ್ಟಿಯು ಶೇ 10ರಷ್ಟು ಏರಿಕೆ ಕಂಡಿದೆ. ಮಾರ್ಚ್‌ನಲ್ಲಿ ಕನಿಷ್ಠ ಮಟ್ಟವನ್ನು ತಲುಪಿತ್ತು ಎಂದರು ಅವರು ಹೇಳಿದರು.

‘ಬಾಹ್ಯ ಅಪಾಯ ಎದುರಿಸಲು ದೇಶದ ಆರ್ಥಿಕತೆ ಸಶಕ್ತ’

ಕೋಲ್ಕತ್ತ (ಪಿಟಿಐ): ದೇಶದ ಆರ್ಥಿಕ ಬೆಳವಣಿಗೆಯು ಬಾಹ್ಯ ಅಪಾಯಗಳನ್ನು ಎದುರಿಸುವಷ್ಟು ಗಟ್ಟಿಯಾಗಿದೆ ಎಂದು ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಶನಿವಾರ ಹೇಳಿದ್ದಾರೆ


ಭಾರತ್ ಛೇಂಬರ್ ಆಫ್ ಕಾಮರ್ಸ್ ಆಯೋಜಿಸಿದ್ದ ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರಸಕ್ತ ಹಣಕಾಸು ವರ್ಷಕ್ಕೆ ಜಿಡಿಪಿ ಬೆಳವಣಿಯ ಪ್ರಮಾಣವು ಶೇ 6.5ಷ್ಟು ಇರಲಿದೆ ಎನ್ನುವ ವಿಷಯದಲ್ಲಿ ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ಮಧ್ಯೆ ಒಮ್ಮತ ಇದೆ ಎಂದಿದ್ದಾರೆ. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು 2023–24ನೇ ಹಣಕಾಸು ವರ್ಷಕ್ಕೆ ಜಿಡಿಪಿ ಬೆಳವಣಿಗೆಯು ಶೇ 6.5ರಷ್ಟು ಆಗಲಿದೆ ಎಂದು ಅಂದಾಜು ಮಾಡಿದ್ದಾರೆ. ಇದು ಏಪ್ರಿಲ್‌ನಲ್ಲಿ ಅಂದಜು ಮಾಡಿದ್ದ ಶೇ 6.4ಕ್ಕಿಂತಲೂ ಹೆಚ್ಚು.

ಕಳೆದ ಹಣಕಾಸು ವರ್ಷದಲ್ಲಿ ಸರಕು ಮತ್ತು ಸೇವೆಗಳ ರಫ್ತು ವಹಿವಾಟು ಜಿಡಿಪಿಯ ಶೇ 23.5ರಷ್ಟು ಆಂದಾಜು ಮಾಡಿದ್ದು, 2015ರ ಬಳಿಕದ ಗರಿಷ್ಠ ಪ್ರಮಾಣದ್ದಾಗಿದೆ ಎಂದು ಅವರು ಹೇಳಿದ್ದಾರೆ.

ಕ್ರೆಡಾಯ್: ಪ್ರದೀಪ ರಾಯ್ಕರ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕ್ರೆಡಾಯ್ (ಕಾನ್ಫಿಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ) ರಾಜ್ಯ ಘಟಕದ ನೂತನ ಅಧ್ಯಕ್ಷರಾಗಿ ಪ್ರದೀಪ್ ರಾಯ್ಕರ್ ಮತ್ತು ಉಪಾಧ್ಯಕ್ಷರಾಗಿ ಮುರಳಿಧರ ಆಯ್ಕೆಯಾಗಿದ್ದಾರೆ. ಶನಿವಾರ ಅಧಿಕಾರ ಸ್ವೀಕರಿಸಿದರು.



ಪ್ರದೀಪ್ ರಾಯ್ಕರ್

‘ಶಕ್ತಿ’ಗೆ ಇಂದು ಚಾಲನೆ

ಒಂದನೇ ಪುಟದಿಂದ

‘ಬಡ ಮತ್ತು ಕೆಳ ಮಧ್ಯಮವರ್ಗದ ದುಡಿಯುವ ಮಹಿಳೆಯರ ದಿನದ ಖರ್ಚಿನ ಹೊರೆಯನ್ನು ಇಳಿಸಿ, ಮಹಿಳಾ ಸಬಲೀಕರಣಕ್ಕೆ ಈ ಯೋಜನೆ ಹೊಸ ಭಾಷ್ಯ ಬರೆಯಲಿದೆ’ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಭಾನುವಾರ ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ‘ಮುಖ್ಯಮಂತ್ರಿಯವರು ಯೋಜನೆಗೆ ಚಾಲನೆ ನೀಡಿದ ಬಳಿಕ ಬಸ್‌ನಲ್ಲಿ ನಾವೂ ಒಂದು ಸುತ್ತು ಹೋಗುತ್ತೇವೆ. ಕೆಲವರಿಗೆ ಸಾಂಕೇತಿಕವಾಗಿ ಸ್ಮಾರ್ಟ್ ಕಾರ್ಡ್ ಕೊಡುತ್ತೇವೆ. ಮೂರು ತಿಂಗಳ ಒಳಗೆ ಎಲ್ಲರೂ ಸ್ಮಾರ್ಟ್ ಮಾಡಿಸಿಕೊಳ್ಳಬೇಕು’ ಎಂದರು. ‘ಯಾವ ಬಸ್‌ಗಳಲ್ಲಿ ಉಚಿತ ಪ್ರಯಾಣ ಅವಕಾಶ ಸಿಗಲಿದೆ ಎಂದು ಈಗಾಗಲೇ ಜಾಹೀರಾತುಗಳ ಮೂಲಕ ಮಾಹಿತಿ ನೀಡಿದ್ದೇವೆ. ಈ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ’ ಎಂದೂ ಹೇಳಿದರು.

ಜಗಳ ಭಾಗ್ಯ, ಕಾಯುವ ಭಾಗ್ಯ: ಕಟೀಲ್

ಖಾಸಗಿ ಬಸ್‌ಗಳಲ್ಲೂ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಬೇಕು. ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಇಂಧನ ಇಲಾಖೆ ನೌಕರರಿಗೆ ಏಟಿನ ಭಾಗ್ಯ, ಮನೆಯ ಯಜಮಾನಿ ಯಾರು ಎಂಬ ವಿಚಾರಕ್ಕೆ ಅತ್ತೆ -ಸೊಸೆ ನಡುವೆ ಜಗಳ ಭಾಗ್ಯ ಹಾಗೂ ಸಾರ್ವಜನಿಕರಿಗೆ ಕಾಯುವ ಭಾಗ್ಯ ಸಿಕ್ಕಿವೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಟೀಕಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

10–6-2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625(1610)
ಒಂದು ವಾರದ ಡೆಲಿವರಿ	1620(1605)
ಸೋಯಾ ಕಚ್ಚಾ	865(860)
ಪಾಮ್ ವಾರದ ಡೆಲಿವರಿ	943(833)
ಸೂರ್ಯಕಾಂತಿ ಎಣ್ಣೆ ಕಚ್ಚಾ	810(800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,650 (59,750)
ಬೆಳ್ಳಿ ಕೆ.ಜಿ 73,550 (73,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹565
12 ಮೊಟ್ಟೆಗೆ	₹73

ಮೈಸೂರು

100 ಮೊಟ್ಟೆಗೆ	₹572

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15500
ಎಸಿ	₹8120
ಆರ್‌ಪಿ	₹10800
ಆರ್‌ಸಿ	₹6230

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹128

ರೋಚಕ ಘಟ್ಟದಲ್ಲಿ ಡಬ್ಲ್ಯುಟಿಸಿ ಫೈನಲ್: ವಿರಾಟ್, ಅಜಿಂಕ್ಯ ಮೇಲೆ ನಿರೀಕ್ಷೆಯ ಭಾರ

ಭಾರತಕ್ಕೆ ವಿಶ್ವದಾಖಲೆಯ ಗುರಿ

ಲಂಡನ್ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡಕ್ಕೆ ದ ಒವಲ್ ಕ್ರೀಡಾಂಗಣದಲ್ಲಿ ಎರಡು 'ವಿಶ್ವ' ದಾಖಲೆ ಬರೆಯುವ ಅವಕಾಶ ಇದೆ.

ಇಲ್ಲಿ ನಡೆಯುತ್ತಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವು ಒಡ್ಡಿರುವ 444 ರನ್‌ಗಳ ಗುರಿ ಬೆನ್ನಟ್ಟಿರುವ ಭಾರತವು ಗೆದ್ದರೆ ಐತಿಹಾಸಿಕ ಸಾಧನೆಯಾಗಲಿದೆ. ವಿಶ್ವ ಟೆಸ್ಟ್ ಚಾಂಪಿಯನ್ ಪಟ್ಟದ ಜೊತೆಗೆ ಟೆಸ್ಟ್ ಇತಿಹಾಸದ ಅತ್ಯಂತ ದೊಡ್ಡ ಗುರಿಯನ್ನು ಸಾಧಿಸಿದ ದಾಖಲೆಯ ಒಡೆಯನಾಗಲಿದೆ.

ತಂಡವು ಈ ಹಾದಿಯಲ್ಲಿ ಶನಿವಾರ 40 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 164 ರನ್ ಗಳಿಸಿದೆ. ಅನುಭವಿಗಳಾದ ವಿರಾಟ್ ಕೊಹ್ಲಿ (ಬ್ಯಾಟಿಂಗ್ 44) ಹಾಗೂ ಅಜಿಂಕ್ಯ ರಹಾನೆ (ಬ್ಯಾಟಿಂಗ್ 20) ಕ್ರೀಸ್‌ನಲ್ಲಿದ್ದಾರೆ. ಕೊನೆಯ ದಿನವಾದ ಭಾನುವಾರ ಗೆಲುವಿನ ದಡ ಮುಟ್ಟಲು 280 ರನ್ ಗಳಿಸಬೇಕಿದ್ದು, ಇವರಿಬ್ಬರ ಪಾತ್ರ ಮಹತ್ವದ್ದಾಗಲಿದೆ.

ಏಕೆಂದರೆ; ಈ ಕ್ರೀಡಾಂಗಣದಲ್ಲಿ ನಾಲ್ಕನೇ ಇನಿಂಗ್ಸ್‌ನಲ್ಲಿ ಚೇಸಿಂಗ್ ಮಾಡಿರುವ ಮೊತ್ತವು 263 ರನ್‌ಗಳು ಮಾತ್ರ. ಅಲ್ಲದೇ ಇಡೀ ಟೆಸ್ಟ್ ಇತಿಹಾಸದಲ್ಲಿ 418 ರನ್‌ಗಳನ್ನು ಬೆನ್ನಟ್ಟಿ ಜಯಿಸಿದ್ದು ಇದುವರೆಗಿನ ದಾಖಲೆಯಾಗಿದೆ. ಆದ್ದರಿಂದ ಹೊಸ ಇತಿಹಾಸ ಬರೆಯಲು ಈಗ ಅವಕಾಶವಿದೆ. ಆದರೆ ತಾಳ್ಮೆ ಹಾಗೂ ಏಕಾಗ್ರತೆಯ ಆಟವಾಡುವ ಸವಾಲು ಇದೆ. ಕೊಹ್ಲಿ ಮತ್ತು ರಹಾನೆ ಮುರಿಯದ 4ನೇ ವಿಕೆಟ್‌ಗೆ 71 ರನ್ ಸೇರಿಸಿದ್ದಾರೆ.

ಶುಕ್ರವಾರ ಮೊದಲ ಇನಿಂಗ್ಸ್‌ನಲ್ಲಿ 173 ರನ್‌ಗಳ ಭಾರಿ ಮುನ್ನಡೆ ಸಾಧಿಸಿದ್ದ ಆಸ್ಟ್ರೇಲಿಯಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ 84.3 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 270 ರನ್ ಗಳಿಸಿತು. ಶನಿವಾರ ಚಹಾ ವಿರಾಮಕ್ಕೆ ಸುಮಾರು 45 ನಿಮಿಷಗಳು ಬಾಕಿ ಇರಬೇಕಾದರೆ ನಾಯಕ ಪ್ಯಾಟ್ ಕಮಿನ್ಸ್ ಔಟಾದರು ಮತ್ತು ಡಿಕ್ಲೇರ್ ಘೋಷಿಸಿದರು.

ಬೆಟ್ಟದಂತಹ ಗುರಿ ಬೆನ್ನಟ್ಟಿರುವ ಭಾರತ ತಂಡಕ್ಕೆ ರೋಹಿತ್ ಶರ್ಮಾ (43; 60ಎ) ಹಾಗೂ ಶುಭಮನ್ ಗಿಲ್ (18; 19ಎ) ಉತ್ತಮ ಆರಂಭ ನೀಡಿದ್ದು ವಿಶ್ವಾಸ ಮೂಡಿಸಿತು. ಇಬ್ಬರೂ ಆದಷ್ಟು ವೇಗದಲ್ಲಿ ರನ್ ಗಳಿಸಲು ಚಿತ್ತನೆಟ್ಟರು. ಇದರಿಂದಾಗಿ ಏಳು ಓವರ್‌ಗಳಲ್ಲಿ 41 ರನ್‌ಗಳು ಸೇರಿದವು.

ಆದರೆ ಎಂಟನೇ ಓವರ್‌ನಲ್ಲಿ ಸ್ಕಾಟ್ ಬೊಲಾಂಡ್ ಎಸೆತ ಶುಭಮನ್ ಬ್ಯಾಟ್ ಅಂಚು ಸವರಿ ಸಾಗಿತು. ತಮ್ಮ ಎಡಕ್ಕೆ ಡೈವ್ ಮಾಡಿದ ಸ್ಲಿಪ್ ಫೀಲ್ಡರ್ ಗ್ರೀನ್ ಕ್ಯಾಚ್ ಪಡೆದರು. ಚೆಂಡು ಅವರ ಕೈಸೇರುವ ಮುನ್ನ ನೆಲಕ್ಕೆ ತಾಗಿರುವ ಅನುಮಾನದಿಂದಾಗಿ ಹಲವು ಆಯಾಮಗಳಲ್ಲಿ ಪರಿಶೀಲಿಸಿದ ಟಿ.ವಿ. ಅಂಪೈರ್ ರಿಚರ್ಡ್ ಕೆಟಲ್‌ಬರೊ ಔಟ್ ತೀರ್ಪು ಪ್ರಕಟಿಸಿದರು. ಶುಭಮನ್ ಬೇಸರದಿಂದ ನಿರ್ಗಮಿಸಿದರು.

ಚಹಾ ವಿರಾಮದ ನಂತರ ರೋಹಿತ್ ಮತ್ತು ಪೂಜಾರ (27; 47) ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 51 ರನ್ ಕೂಡ ಸೇರಿಸಿದರು. 20ನೇ ಓವರ್‌ನಲ್ಲಿ ಬೌಲಿಂಗ್‌ಗೆ ಬಂದ ಆಫ್‌ಸ್ಪಿನ್ನರ್ ನೇಥನ್ ಲಯನ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ರೋಹಿತ್ ಬಿದ್ದರು. ನಂತರದ ಓವರ್‌ನಲ್ಲಿ ಕಮಿನ್ಸ್ ಹಾಕಿದ ಬೌನ್ಸರ್ ಎಸೆತವನ್ನು ಅಪ್ಪರ್ ಕಟ್ ಮಾಡುವ ಯತ್ನದಲ್ಲಿ ಪೂಜಾರ, ವಿಕೆಟ್‌ಕೀಪರ್ ಅಲೆಕ್ಸ್ ಕ್ಯಾರಿಗೆ ಸುಲಭದ ಕ್ಯಾಚಿತ್ತರು.

ಅಲೆಕ್ಸ್–ಸ್ಟಾರ್ಕ್ ಅರ್ಧಶತಕ: ವೇಗದ ಬೌಲರ್‌ಗಳಿಗೆ ಹೆಚ್ಚು ನೆರವು ನೀಡದ ಪಿಚ್‌ನಲ್ಲಿ ಮೊಹಮ್ಮದ್ ಸಿರಾಜ್ ಮತ್ತು ಶಮಿ ಅವರ ಪ್ರಯತ್ನಗಳಿಗೆ ಹೆಚ್ಚು ಫಲ ಸಿಗಲಿಲ್ಲ. ಇದರ ಲಾಭ ಪಡೆದ ಅಲೆಕ್ಸ್ (ಅಜೇಯ 66) ಹಾಗೂ ಸ್ಟಾರ್ಕ್ (51; 47ಎ) ಅವರು ಏಳನೇ ವಿಕೆಟ್ ಜೊತೆಯಾಟದಲ್ಲಿ 93 ರನ್ ಸೇರಿಸಿದರು. ಇದರಿಂದಾಗಿ ಆಸ್ಟ್ರೇಲಿಯಾ ತಂಡದ ಮುನ್ನಡೆ ಹೆಚ್ಚಿತು.

ಭಾರತದ ಮಟ್ಟಿಗೆ ಎಡಗೈ ಸ್ಪಿನ್ನರ್ ಜಡೇಜ (58ಕ್ಕೆ3) ಯಶಸ್ವಿಯಾದರು.



ನಾಲ್ಕನೇ ದಿನದಾಟದ ಬಳಿಕ ಪೆವಿಲಿಯನ್‌ನತ್ತ ಹೆಜ್ಜೆಯಿಟ್ಟ ವಿರಾಟ್ ಕೊಹ್ಲಿ (ಎಡ) ಮತ್ತು ಅಜಿಂಕ್ಯ ರಹಾನೆ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಆಸ್ಟ್ರೇಲಿಯಾ 469 (121.3 ಓವರ್‌ಗಳಲ್ಲಿ)
ಭಾರತ 296 (69.4 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್
ಆಸ್ಟ್ರೇಲಿಯಾ 8ಕ್ಕೆ270 ಡಿಕ್ಲೇರ್ಡ್ (84.3 ಓವರ್‌ಗಳಲ್ಲಿ)
ಮಾರ್ನಸ್ ಸಿ ಪೂಜಾರ ಬಿ ಉಮೇಶ್ 41 (126ಎ, 4X4)
ಹೆಡ್ ಸಿ ಮತ್ತು ಬಿ ಜಡೇಜ 18 (27ಎ, 6X2)
ಗ್ರೀನ್ ಬಿ ಜಡೇಜ 25 (95ಎ, 4X4)
ಅಲೆಕ್ಸ್ ಔಟಾಗದೆ 66 (105ಎ, 4X8)
ಸ್ಟಾರ್ಕ್ ಸಿ ಕೊಹ್ಲಿ ಬಿ ಶಮಿ 41 (57ಎ, 4X7)
ಕಮಿನ್ಸ್ ಸಿ (ಬದಲೀ ಫೀಲ್ಡರ್) ಅಕ್ಷರ್ ಬಿ ಶಮಿ 5 (5ಎ, 4X1)
ಇತರೆ: 26 (ಬೈ 9, ಲೆಗ್‌ಬೈ 9, ವೈಡ್ 6, ನೋಬಾಲ್ 2)
ವಿಕೆಟ್ ಪತನ: 4–111(ಟ್ರಾವಿಸ್ ಹೆಡ್; 36.3), 5–124(ಮಾರ್ನಸ್ ಲಾಬುಷೇನ್; 46.4), 6–167 (ಕ್ಯಾಮರಾನ್ ಗ್ರೀಣ್; 62.6), 7–260 (ಮಿಚೆಲ್ ಸ್ಟಾರ್ಕ್; 82.6), 8–270 (ಪ್ಯಾಟ್ ಕಮಿನ್ಸ್; 84.3)
ಬೌಲಿಂಗ್: ಮೊಹಮ್ಮದ್ ಶಮಿ 16.3–6–39–2, ಮೊಹಮ್ಮದ್ ಸಿರಾಜ್ 20–2–80–1, ಶಾರ್ದೂಲ್ ಠಾಕೂರ್ 8–1–21–0, ಉಮೇಶ್ ಯಾದವ್ 17–1–54–2, ರವೀಂದ್ರ ಜಡೇಜ 23–4–58–3
ಭಾರತ 3ಕ್ಕೆ 164 (40 ಓವರ್‌ಗಳಲ್ಲಿ)
ರೋಹಿತ್ ಎಲ್‌ಬಿಡಬ್ಲ್ಯು ಲಯನ್ 43 (60ಎ, 4X7, 6X1)
ಗಿಲ್ ಸಿ ಗ್ರೀನ್ ಬಿ ಸ್ಕಾಟ್ 18 (19ಎ, 4X2)
ಪೂಜಾರ ಸಿ ಅಲೆಕ್ಸ್ ಬಿ ಕಮಿನ್ಸ್ 27 (47ಎ, 4X5)
ವಿರಾಟ್ ಬ್ಯಾಟಿಂಗ್ 44 (60ಎ, 4X7)
ಅಜಿಂಕ್ಯ ಬ್ಯಾಟಿಂಗ್ 20 (59ಎ, 4X3)
ಇತರೆ: 12 (ಬೈ 1, ನೋಬಾಲ್ 5, ವೈಡ್ 6)
ವಿಕೆಟ್ ಪತನ: 1–41 (ಶುಭಮನ್ ಗಿಲ್; 7.1), 2–92 (ರೋಹಿತ್ ಶರ್ಮಾ; 19.5), 3–93 (ಚೇತೇಶ್ವರ್ ಪೂಜಾರ; 20.4)
ಬೌಲಿಂಗ್: ಪ್ಯಾಟ್ ಕಮಿನ್ಸ್ 9–0–42–1, ಸ್ಕಾಟ್ ಬೊಲಾಂಡ್ 11–1–38–1, ಮಿಚೆಲ್ ಸ್ಟಾರ್ಕ್ 7–0–45–0, ಕ್ಯಾಮರಾನ್ ಗ್ರೀನ್ 2–0–6–0, ನೇಥನ್ ಲಯನ್ 11–1–32–1



ವಿಕೆಟ್ ಗಳಿಸಿದ ರವೀಂದ್ರ ಜಡೇಜ ಅವರನ್ನು ಅಭಿನಂದಿಸಿದ ಸಹ ಆಟಗಾರ –ಎಪಿ/ಪಿಟಿಐ ಚಿತ್ರ

ಇಗಾ ಮುಡಿಗೆ ಕಿರೀಟ

ಫ್ರೆಂಚ್ ಓಪನ್: 23ನೇ ಪ್ರಶಸ್ತಿ ಮೇಲೆ ಜೊಕೊವಿಚ್ ಚಿತ್ತ

ಪ್ಯಾರಿಸ್ (ಎಎಫ್‌ಪಿ): ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ್ತಿ ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಕಿರೀಟ ಮುಡಿಗೇರಿಸಿಕೊಂಡರು.

ಫಿಲಿಪ್ ಶಾಟ್ರಿಯೆರ್ ಕೋರ್ಟ್‌ನಲ್ಲಿ ಶನಿವಾರ ನಡೆದ ಫೈನಲ್‌ನಲ್ಲಿ ಅವರು 6-2, 5-7, 6-4 ರಲ್ಲಿ ಜೆಕ್ ರಿಪಬ್ಲಿಕ್‌ನ ಕರೋಲಿನಾ ಮುಕೋವಾ ವಿರುದ್ಧ ಗೆದ್ದರು.

22 ವರ್ಷದ ಇಗಾ ಅವರಿಗೆ ಫ್ರೆಂಚ್ ಓಪನ್‌ನಲ್ಲಿ ದೊರೆತ ಮೂರನೇ ಪ್ರಶಸ್ತಿ ಇದು. ಒಟ್ಟಾರೆಯಾಗಿ ನಾಲ್ಕನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗೆ ಮುತ್ತಿಕ್ಕಿದರು. 2020 ಮತ್ತು 2022 ರಲ್ಲಿ ಅವರು ಇಲ್ಲಿ ಚಾಂಪಿಯನ್ ಆಗಿದ್ದರು. ಕಳೆದ ವರ್ಷ ಅಮೆರಿಕ ಓಪನ್‌ನಲ್ಲೂ ಪ್ರಶಸ್ತಿ ಗೆದ್ದಿದ್ದರು.

ಜಸ್ಟಿನ್ ಹೆನಿನ್ ಬಳಿಕ (2007 ರಲ್ಲಿ) ಇಲ್ಲಿ ಸತತ ಎರಡು ಪ್ರಶಸ್ತಿ ಗೆದ್ದ ಮೊದಲ ಆಟಗಾರ್ತಿ ಎಂಬ ಗೌರವ ಅವರಿಗೆ ಒಲಿಯಿತು.

ಅದೇ ರೀತಿ ಮೋನಿಕಾ ಸೆಲೆಸ್ ಬಳಿಕ (1990–92) ಬೆನ್ನುಬೆನ್ನಿಗೆ ಫ್ರೆಂಚ್ ಓಪನ್ ಜಯಿಸಿದ ಅತಿ ಕಿರಿಯ ಆಟಗಾರ್ತಿ ಎನಿಸಿಕೊಂಡರು.

ಎರಡು ಗಂಟೆ 46 ನಿಮಿಷ ನಡೆದ ಫೈನಲ್‌ನಲ್ಲಿ ಮುಕೋವಾ ಅವರು ಎದುರಾಳಿಗೆ ತಕ್ಕ ಪೈಪೋಟಿ ನೀಡಿದರು. ಆದರೆ ಒತ್ತಡವನ್ನು ಸಮರ್ಥವಾಗಿ ಮೀರಿ ನಿಂತ ಇಗಾ, ಚಾಂಪಿಯನ್ ಆದರು.

ಜೊಕೊವಿಚ್‌ಗೆ 23ನೇ ಕಿರೀಟದ ನಿರೀಕ್ಷೆ: ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯ ಭಾನುವಾರ ನಡೆಯಲಿದ್ದು, ದಾಖಲೆಯ 23ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಸರ್ಬಿಯದ ನೊವಾಕ್ ಜೊಕೊವಿಚ್ ಅವರು ನಾರ್ವೆಯ ಕ್ಯಾಸ್ಪರ್ ರೂಡ್ ವಿರುದ್ಧ ಪೈಪೋಟಿ ನಡೆಸಲಿದ್ದಾರೆ.

36 ವರ್ಷದ ಜೊಕೊವಿಚ್ ಗೆದ್ದರೆ ಹಲವು ದಾಖಲೆಗಳನ್ನು ತಮ್ಮದಾಗಿಸಿಕೊಳ್ಳಲಿದ್ದಾರೆ. ಇದೀಗ ಅವರು ಅತಿಹೆಚ್ಚು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ದಾಖಲೆಯನ್ನು ಸ್ಪೇನ್‌ನ ರಫೆಲ್ ನಡಾಲ್ ಜತೆ ಹಂಚಿಕೊಂಡಿದ್ದಾರೆ. ಇಬ್ಬರೂ 22 ಟ್ರೋಫಿ ಜಯಿಸಿದ್ದಾರೆ. ಸರ್ಬಿಯದ ಆಟಗಾರ ಭಾನುವಾರ ಚಾಂಪಿಯನ್ ಆದರೆ, ನಡಾಲ್ ಅವರನ್ನು ಹಿಂದಿಕ್ಕಲಿದ್ದಾರೆ.

ಅದೇ ರೀತಿ ಫ್ರೆಂಚ್ ಓಪನ್ ಗೆದ್ದ ಅತಿ ಹಿರಿಯ ಆಟಗಾರ ಎಂಬ ಗೌರವ ಅವರಿಗೆ ಲಭಿಸಲಿದೆ. ಎಲ್ಲ ನಾಲ್ಕು ಗ್ರ್ಯಾನ್‌ಸ್ಲಾಮ್‌ಗಳನ್ನು ಕನಿಷ್ಠ ಮೂರು ಸಲ ಗೆದ್ದ ಮೊದಲ ಆಟಗಾರ ಎಂಬ ಐತಿಹಾಸಿಕ ಸಾಧನೆಯೂ ಒಲಿಯಲಿದೆ. ಅವರು ಈ ಹಿಂದೆ 2016 ಮತ್ತು 2021 ರಲ್ಲಿ ಇಲ್ಲಿ ಚಾಂಪಿಯನ್ ಆಗಿದ್ದರು.

24 ವರ್ಷದ ರೂಡ್ ಅವರು 2022 ರಲ್ಲಿ ಇಲ್ಲಿ ಫೈನಲ್‌ನಲ್ಲಿ ರಫೆಲ್ ನಡಾಲ್ ಎದುರು ಸೋತಿದ್ದರು. ಜೊಕೊವಿಚ್ ವಿರುದ್ಧ ಅವರು ಇದುವರೆಗೆ ಆಡಿರುವ ಎಲ್ಲ ನಾಲ್ಕು ಪಂದ್ಯಗಳನ್ನೂ ಸೋತಿದ್ದಾರೆ. ಮಾತ್ರವಲ್ಲ, ಒಂದು ಸೆಟ್ ಕೂಡಾ ಗೆದ್ದಿಲ್ಲ. ಆದ್ದರಿಂದ ಭಾನುವಾರ ಜೊಕೊವಿಚ್ ಗೆಲ್ಲುವ 'ಫೇವರಿಟ್' ಎನಿಸಿಕೊಂಡಿದ್ದಾರೆ.



ಟ್ರೋಫಿಯೊಂದಿಗೆ ಸಂಭ್ರಮಿಸಿದ ಇಗಾ ಶ್ವಾಂಟೆಕ್ –ಎಎಫ್‌ಪಿ ಚಿತ್ರ

₹ 20.60 ಕೋಟಿ ಬಹುಮಾನ

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದ ಇಗಾ ಶ್ವಾಂಟೆಕ್ ₹ 20.60 ಕೋಟಿ ನಗದು ಬಹುಮಾನ ಗೆದ್ದುಕೊಂಡರು. 'ರನ್ನರ್ ಅಪ್' ಮುಕೋವಾ ₹ 10.28 ಕೋಟಿ ತಮ್ಮದಾಗಿಸಿಕೊಂಡರು.

ಮುಖ್ಯಾಂಶಗಳು

- ಫೈನಲ್‌ನಲ್ಲಿ ಮುಕೋವಾ ವಿರುದ್ಧ ಗೆಲುವು
- ಪೋಲೆಂಡ್‌ನ ಆಟಗಾರ್ತಿಗೆ 4ನೇ ಗ್ರ್ಯಾನ್‌ಸ್ಲಾಮ್ ಕಿರೀಟ
- ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಇಂದು

ಏಷ್ಯಾ ಕಪ್ ಮಹಿಳೆಯರ ಹಾಕಿ: ಫೈನಲ್‌ಗೆ ಭಾರತ

ವಿಶ್ವಕಪ್ ಟೂರ್ನಿಗೂ ಅರ್ಹತೆ

ಕಾಕಾಮಿಗಾರಾ, ಜಪಾನ್ (ಪಿಟಿಐ): ಭಾರತದ ಜೂನಿಯರ್ ಮಹಿಳಾ ಹಾಕಿ ತಂಡವು ಇದೇ ವರ್ಷ ನಡೆಯಲಿರುವ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಗೆ ಅರ್ಹತೆ ಗಳಿಸಿತು.

ಶನಿವಾರ ಇಲ್ಲಿ ನಡೆದ ಜೂನಿಯರ್ ಏಷ್ಯಾ ಕಪ್ ಹಾಕಿ ಸೆಮಿಫೈನಲ್‌ನಲ್ಲಿ ಭಾರತ ತಂಡವು ಸುನಿಲಿತಾ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಜಪಾನ್ ತಂಡವನ್ನು 1–0ಯಿಂದ ಮಣಿಸಿ ಫೈನಲ್ ಪ್ರವೇಶಿಸಿತು. ಅದರೊಂದಿಗೆ ವಿಶ್ವಕಪ್ ಟೂರ್ನಿಗೂ ರಹದಾರಿ ಪಡೆಯಿತು. ಈ ಟೂರ್ನಿಯಲ್ಲಿ ಅಗ್ರ ಮೂರು ಸ್ಥಾನ ಪಡೆದ ತಂಡಗಳಿಗೆ ವಿಶ್ವಕಪ್ ಪ್ರವೇಶಾವಕಾಶ ನಿಗದಿ ಮಾಡಲಾಗಿತ್ತು.

ಇದೇ ನವೆಂಬರ್ 29 ರಿಂದ ಡಿಸೆಂಬರ್ 10ರವರೆಗೆ ಸ್ಯಾಂಟಿಯಾಗೊದಲ್ಲಿ ವಿಶ್ವಕಪ್ ಟೂರ್ನಿ ನಡೆಯಲಿದೆ.

ಸೆಮಿಫೈನಲ್ ಪಂದ್ಯದಲ್ಲಿ ಭಾರತಕ್ಕೆ ಜಯ ಸುಲಭವಾಗಿ ಒಲಿಯಲಿಲ್ಲ. ಮೊದಲ ಮೂರು ಕ್ವಾರ್ಟರ್‌ಗಳಲ್ಲಿ ಉಭಯ ತಂಡಗಳೂ ಗೋಲು ಗಳಿಸಲಿಲ್ಲ. 47ನೇ ನಿಮಿಷದಲ್ಲಿ ಚೆಂಡನ್ನು ಗೋಲುಪೆಟ್ಟಿಗೆ ಸೇರಿಸಿದ ಸುನಿಲಿತಾ ಭಾರತಕ್ಕೆ ಗೆಲುವಿನ ಹಾದಿ ತೋರಿಸಿದರು. ಭಾರತ ತಂಡವು ಆರಂಭದಿಂದಲೇ ಚೆಂಡಿನ ಮೇಲೆ ಹೆಚ್ಚು ನಿಯಂತ್ರಣ ಸಾಧಿಸಿತು. ಆಕ್ರಮಣಕಾರಿ ಶೈಲಿಯಲ್ಲಿ ಆಡಿತು.

ಉಭಯ ತಂಡಗಳಿಗೂ ತಲಾ 12 ಪೆನಾಲ್ಟಿ ಕಾರ್ನರ್‌ಗಳನ್ನು ಗಿಟ್ಟಿಸಿದ್ದವು. ಆದರೆ ಗೋಲು ಗಳಿಸುವಲ್ಲಿ ಯಶಸ್ವಿಯಾಗಲಿಲ್ಲ. ಮೊದಲ ಕ್ವಾರ್ಟರ್‌ನ ಮುಕ್ತಾಯಕ್ಕೆ ಒಂದು ನಿಮಿಷ ಬಾಕಿಯಿದ್ದಾಗ ಜಪಾನ್ ತಂಡಕ್ಕೆ ಪೆನಾಲ್ಟಿ ಕಾರ್ನರ್ ಲಭಿಸಿತ್ತು. ಭಾರತದ ಮಾಧುರಿ ಕಿಂಡೊ ಎದುರಾಳಿ ಪಡೆಯ ಡ್ರ್ಯಾಗ್‌ಫ್ಲಿಕ್ ತಡೆಯುವಲ್ಲಿ ಯಶಸ್ವಿಯಾದರು. ಎರಡನೇ ಕ್ವಾರ್ಟರ್‌ನಲ್ಲಿಯೂ ಮಾಧುರಿ ಕಿಂಡೊ ಚಾಕಚಕ್ಯತೆ ತೋರಿ, ಜಪಾನ್ ತಂಡದ ಪೆನಾಲ್ಟಿ ಕಾರ್ನರ್ ದಾಳಿಯನ್ನು ತಡೆದರು.

ಭಾರತಕ್ಕೆ ಲಭಿಸಿದ್ದ ಪೆನಾಲ್ಟಿ ಅವಕಾಶದಲ್ಲಿ ವೈಷ್ಣವಿ ಫಾಲ್ಕೆ ಅವರ ಡ್ರ್ಯಾಗ್‌ಫ್ಲಿಕ್ ಅನ್ನು ಜಪಾನ್ ಗೋಲ್‌ಕೀಪರ್ ಮಿಸಾಕಿ ಸೈಟೊ ತಡೆಯುವಲ್ಲಿ ಯಶಸ್ವಿಯಾದರು.

ಪ್ರತಿ ಹಂತದಲ್ಲಿಯೂ ಉಭಯ ತಂಡಗಳು ಜಿದ್ದಾಜಿದ್ದಿನಿಂದ ಹೋರಾಟ ನಡೆಸಿದವು. 46 ನಿಮಿಷಗಳ ಈ ತುರುಸಿನ ಹಣಾಹಣಿಯಲ್ಲಿ ಮೇಲುಗೈ ಸಾಧಿಸಲು ಮಹಿಮಾ ಟೆಟೆ ಹಾಗೂ ಜ್ಯೋತಿ ಛಾತ್ರಿ ನೆರವಾದರು. ಅವರ ಮೂಲಕ ಪಾಸ್ ಪಡೆದ ಸುನಿಲಿತಾ ಗೋಲು ಗಳಿಸಿದರು. ಇದರಿಂದಾಗಿ ಭಾರತದ ಪಾಳೆಯದಲ್ಲಿ ಆತ್ಮವಿಶ್ವಾಸ ಇಮ್ಮಡಿಸಿತು.

ಭಾನುವಾರ ಫೈನಲ್ ಪಂದ್ಯ ನಡೆಯಲಿದೆ.



ಜೂನಿಯರ್ ಏಷ್ಯಾ ಕಪ್ ಮಹಿಳೆಯರ ಹಾಕಿ ಸೆಮಿಫೈನಲ್‌ನಲ್ಲಿ ಜಪಾನ್ ಮತ್ತು ಭಾರತ ಆಟಗಾರ್ತಿಯರ ಪೈಪೋಟಿ –ಹಾಕಿ ಇಂಡಿಯಾ ಟ್ವಿಟರ್ ಚಿತ್ರ

ಎಫ್‌ಐಎಚ್ ಹಾಕಿ: ಭಾರತ ಪರಾಭವ

ಐಂಡ್‌ಹೋವನ್, ನೆದರ್ಲೆಂಡ್ಸ್ (ಪಿಟಿಐ): ಭಾರತ ತಂಡದವರು ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನಲ್ಲಿ ಶನಿವಾರ ನೆದರ್ಲೆಂಡ್ಸ್ ಎದುರು 2–3 ಗೋಲುಗಳಿಂದ ಸೋತರು.

ಬುಧವಾರ ನಡೆದಿದ್ದ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಬಳಗ ಇದೇ ಎದುರಾಳಿಗಳ ಕೈಯಲ್ಲಿ 1–4 ಗೋಲುಗಳಿಂದ ಸೋತಿತ್ತು.

ಪ್ರಬಲ ಪೈಪೋಟಿ ನಡೆದ ಪಂದ್ಯದ 6ನೇ ನಿಮಿಷದಲ್ಲಿ ಡ್ಯೂಕೊ ಟೆಲ್ಜೆನ್‌ಕ್ಯಾಂಪ್ ಅವರು ನೆದರ್ಲೆಂಡ್ಸ್‌ಗೆ ಮುನ್ನಡೆ ತಂದಿತ್ತರೆ, 17ನೇ ನಿಮಿಷದಲ್ಲಿ ಸಂಜಯ್ ಗೋಲು ಗಳಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು.

3ನೇ ಕ್ವಾರ್ಟರ್‌ನಲ್ಲಿ ಆಕ್ರಮಣಕಾರಿ ಆಟವಾಡಿದ ನೆದರ್ಲೆಂಡ್ಸ್, ಬೋರಿಸ್ ಬರ್ಕ್‌ಹಾರ್ಟ್ (40ನೇ ನಿ.) ಮತ್ತು ಜೆಪ್ ಹೋಡೆಮೇಕರ್ಸ್ (42ನೇ ನಿ.) ಅವರ ಗೋಲುಗಳಿಂದ 3–1 ಮುನ್ನಡೆ ಗಳಿಸಿತು. ಗುರುಜಂತ್ ಸಿಂಗ್ ಅವರು 45ನೇ ನಿಮಿಷದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಭಾರತ ಹಿನ್ನಡೆಯನ್ನು 2–3ಕ್ಕೆ ತಗ್ಗಿಸಿತು. ಕೊನೆಯ ಕ್ವಾರ್ಟರ್‌ನಲ್ಲಿ ಸಮಬಲದ ಗೋಲಿಗಾಗಿ ಪ್ರಯತ್ನಿಸಿದರೂ ಯಶಸ್ಸು ಲಭಿಸಲಿಲ್ಲ.

ಭಾರತ ತನ್ನ ಮುಂದಿನ ಪಂದ್ಯದಲ್ಲಿ ಭಾನುವಾರ ಅರ್ಜೆಂಟೀನಾ ತಂಡವನ್ನು ಎದುರಿಸಲಿದೆ.

ಕುಸ್ತಿ: ಸಂಜುಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ ಕ್ರೀಡಾ ಹಾಸ್ಟೆಲ್‌ನ ಕುಸ್ತಿ ಪಟುಗಳು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಸ್ಕೂಲ್ ಗೇಮ್ಸ್ ಕೂಟದಲ್ಲಿ ಒಂದು ಚಿನ್ನ ಮತ್ತು ಎರಡು ಬೆಳ್ಳಿ ಗೆದ್ದುಕೊಂಡರು.



ಕೆ.ಸಂಜು

ಕೆ.ಸಂಜು ಅವರು 19 ವರ್ಷದೊಳಗಿನವರ 60 ಕೆ.ಜಿ. ಗ್ರೀಕೊ ರೋಮನ್ ವಿಭಾಗದಲ್ಲಿ ಚಿನ್ನ ಗೆದ್ದುಕೊಂಡರು. ಬಿಗಿಪಟ್ಟುಗಳನ್ನು ಹಾಕಿದ ಅವರು ಫೈನಲ್‌ನಲ್ಲಿ ಹರಿಯಾಣದ ಕುಸ್ತಿಪಟು ವಿರುದ್ಧ 8–0 ಪಾಯಿಂಟ್ಸ್‌ಗಳಿಂದ ಗೆದ್ದರು.

82 ಕೆ.ಜಿ. ವಿಭಾಗದಲ್ಲಿ ಬಿ.ಎಚ್. ಕಿರಣ್ ಮತ್ತು 72 ಕೆ.ಜಿ. ವಿಭಾಗದಲ್ಲಿ ಶ್ರಾವಣ್ ಅವರು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಸಂಕ್ಷಿಪ್ತ ಸುದ್ದಿ

ನೀರಜ್ ಅಲಭ್ಯ

ನವದೆಹಲಿ (ಪಿಟಿಐ): ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಪಾವೊ ನುರ್ಮಿ ಕ್ರೀಡಾಕೂಟದಿಂದ ಹಿಂದೆ ಸರಿದಿದ್ದಾರೆ.

ಸ್ನಾಯುಸೆಳೆತದ ಗಾಯದಿಂದ ಅವರು ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ. ಗಾಯ ಉಲ್ಬಣಿಸದಿರಲು ಈ ನಿರ್ಧಾರ ಕೈಗೊಂಡಿದ್ದಾರೆ.

'ನೀರಜ್ ಅವರಿಗೆ ಆರೋಗ್ಯ ತೊಂದರೆ ಇದೆ. ಆದ್ದರಿಂದ ಸ್ಪರ್ಧೆಯಲ್ಲಿ ಭಾಗವಹಿಸದಿರಲು ನಿರ್ಧರಿಸಿದ್ದಾರೆಂದು ನೀರಜ್ ಮ್ಯಾನೇಜರ್ ಪಾವೊ ನುರ್ಮಿ ಕೂಟದ ಸಂಘಟಕರಿಗೆ ಸಂದೇಶ ಕಳಿಸಿದ್ದಾರೆ' ಎಂದು ಫಿನ್ನಿಷ್ ಅಥ್ಲೆಟಿಕ್ಸ್ ಫೆಡರೇಷನ್ ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಲಾಗಿದೆ.

ನೆದರ್ಲೆಂಡ್ಸ್‌ನಲ್ಲಿ ನಡೆದಿದ್ದ ಎಫ್‌ಬಿಕೆ ಗೇಮ್ಸ್ (ಜೂನ್ 4ರಂದು) ನಿಂದಲೂ ಸ್ನಾಯು ಸೆಳೆತದ ತೊಂದರೆಯಿಂದಾಗಿ ನೀರಜ್ ಅವರು ಹಿಂದೆ ಸರಿದಿದ್ದರು.
ಮೇ 29ರಂದು ಅವರು ಈ ಬಗ್ಗೆ ಪ್ರಕಟಣೆ ನೀಡಿದ್ದರು.

ಏಷ್ಯನ್ ನೆಟ್‌ಬಾಲ್: ಭಾರತ ಶುಭಾರಂಭ

ಜಿಯಾಂಜು, ಕೊರಿಯಾ: ಭಾರತ ಮಹಿಳಾ ತಂಡದವರು ಶನಿವಾರ ಇಲ್ಲಿ ಆರಂಭವಾದ ಏಷ್ಯನ್ ಯೂತ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಮೊದಲ ಪಂದ್ಯದಲ್ಲಿ ಭಾರತ ಬಳಗವು 44–40ರಿಂದ ಥಾಯ್ಲೆಂಡ್ ವಿರುದ್ಧ ಜಯಿಸಿತು.

ಭಾರತ ಬಳಗವು ಮೊದಲ ಕ್ವಾರ್ಟರ್‌ನಲ್ಲಿ 11–9 ಮುನ್ನಡೆ ಸಾಧಿಸಿತು. ಎರಡನೇ ಕ್ವಾರ್ಟರ್‌ನಲ್ಲಿ 13–13ರ ಸಮಬಲ, ಮೂರನೇ ಕ್ವಾರ್ಟರ್‌ನಲ್ಲಿ 12–10ರ ಮುನ್ನಡೆ ಗಳಿಸಿತು.

ಪ್ಯಾರಿಸ್ ಡೈಮಂಡ್ ಲೀಗ್ ಲಾಂಗ್‌ಜಂಪ್ ಸ್ಪರ್ಧೆ

ಶ್ರೀಶಂಕರ್‌ಗೆ ಮೂರನೇ ಸ್ಥಾನ

ಪ್ಯಾರಿಸ್ (ಪಿಟಿಐ): ಭಾರತದ ಲಾಂಗ್‌ಜಂಪ್ ಸ್ಪರ್ಧಿ ಮುರಳಿ ಶ್ರೀಶಂಕರ್ ಅವರು ಪ್ಯಾರಿಸ್ ಡೈಮಂಡ್ ಲೀಗ್ ಕೂಟದಲ್ಲಿ ಗಮನಾರ್ಹ ಪ್ರದರ್ಶನ ನೀಡಿ ಮೂರನೇ ಸ್ಥಾನ ಪಡೆದುಕೊಂಡರು.

ಶುಕ್ರವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ ಅವರು 8.09 ಮೀ. ದೂರ ಜಿಗಿಯುವಲ್ಲಿ ಯಶಸ್ವಿಯಾದರು. ಪ್ರತಿಷ್ಠಿತ ಡೈಮಂಡ್ ಲೀಗ್‌ನಲ್ಲಿ ಅವರು ಅಗ್ರ ಮೂರರಲ್ಲಿ ಸ್ಥಾನ ಪಡೆದದ್ದು ಇದೇ ಮೊದಲು. ನೀರಜ್ ಚೋಪ್ರಾ ಮತ್ತು ವಿಕಾಸ್ ಗೌಡ ಬಳಿಕ ಈ ಸಾಧನೆ ಮಾಡಿದ ಭಾರತದ ಮೂರನೇ ಅಥ್ಲೀಟ್ ಎನಿಸಿಕೊಂಡರು.

ಜಾವೆಲಿನ್ ಥ್ರೋ ಸ್ಪರ್ಧಿ ಚೋಪ್ರಾ, ಹಲವು ಡೈಮಂಡ್ ಲೀಗ್ ಕೂಟಗಳಲ್ಲಿ ಅಗ್ರಸ್ಥಾನ ಪಡೆದಿದ್ದರೆ, ಷಾಟ್‌ಪಟ್ ಸ್ಪರ್ಧಿ ವಿಕಾಸ್ ಅವರು ಎರಡು ಸಲ (2012 ರಲ್ಲಿ ನ್ಯೂಯಾರ್ಕ್ ಮತ್ತು 2014 ರಲ್ಲಿ ದೋಹಾ) ಎರಡನೇ ಸ್ಥಾನ ಹಾಗೂ ಇನ್ನೆರಡು ಸಲ ಮೂರನೇ ಸ್ಥಾನ (2015ರಲ್ಲಿ ಶಾಂಘೈ ಮತ್ತು ಯೂಜಿನ್) ತಮ್ಮದಾಗಿಸಿಕೊಂಡಿದ್ದರು.

ಒಲಿಂಪಿಕ್ ಚಾಂಪಿಯನ್ ಮತ್ತು ವಿಶ್ವದ ಅಗ್ರ ರ‍್ಯಾಂಕ್‌ನ ಲಾಂಗ್‌ಜಂಪರ್ ಗ್ರೀಸ್‌ನ ಮಿಲ್ತಿಯಾದಿಸ್ ತೆಂತೊಗ್ಲು ಅವರು 8.13 ಮೀ. ಸಾಧನೆಯೊಂದಿಗೆ ಅಗ್ರಸ್ಥಾನ ಪಡೆದುಕೊಂಡರೆ, ಸ್ವಿಟ್ಜರ್‌ಲೆಂಡ್‌ನ ಸೈಮನ್ ಹ್ಯಾಮರ್ (8.11 ಮೀ.) ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು.

ಶ್ರೀಶಂಕರ್ ತಮ್ಮ ಮೂರನೇ ಪ್ರಯತ್ನದಲ್ಲಿ 8.09 ಮೀ. ದೂರ ಕಂಡುಕೊಂಡರು. ಈ ಋತುವಿನ ಅವರ ಉತ್ತಮ ಸಾಧನೆ 8.18 ಮೀ. ಆಗಿದೆ. 24 ವರ್ಷದ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 8.36 ಮೀ. ಆಗಿದ್ದು, ಕಳೆದ ವರ್ಷ ದಾಖಲಾಗಿತ್ತು.



ಮುರಳಿ ಶ್ರೀಶಂಕರ್

ಕಿಪ್ಯೆಗನ್ ಮತ್ತೆ ವಿಶ್ವದಾಖಲೆ

ಪ್ಯಾರಿಸ್ (ಎಪಿ): ಕೆನ್ಯಾದ ಫೆಯ್ತ್ ಕಿಪ್ಯೆಗನ್, ಮಹಿಳೆಯರ 5000 ಮೀ. ಓಟದಲ್ಲಿ ಹೊಸ ವಿಶ್ವದಾಖಲೆ ಸ್ಥಾಪಿಸಿದರು. ಒಂದು ವಾರದ ಹಿಂದೆಯಷ್ಟೇ ಅವರು 1,500 ಮೀ. ಓಟದಲ್ಲಿ ವಿಶ್ವದಾಖಲೆ ಮಾಡಿದ್ದರು.

ಶುಕ್ರವಾರ ನಡೆದ ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ ಕಿಪ್ಯೆಗನ್ 14 ನಿ. 5.20 ಸೆ.ಗಳಲ್ಲಿ ಗುರಿ ತಲುಪಿದರು. ಇಥಿಯೋಪಿಯದ ಲೆಟೆಸೆನ್‌ಬೆಟ್ ಗಿಡೆ 2020 ರಲ್ಲಿ 14 ನಿ. 6.62 ಸೆ.ಗಳೊಂದಿಗೆ ಸ್ಥಾಪಿಸಿದ್ದ ದಾಖಲೆಯನ್ನು ಮುರಿದರು. ಗಿಡೆ ಅವರು ಶುಕ್ರವಾರ ಎರಡನೇ ಸ್ಥಾನ (14 ನಿ. 7.94 ಸೆ.) ಪಡೆದರು.

ಕಿಪ್ಯೆಗನ್ ಕಳೆದ ಶುಕ್ರವಾರ ಇಟಲಿಯ ಫ್ಲಾರೆನ್ಸ್‌ನಲ್ಲಿ ನಡೆದಿದ್ದ ಕೂಟದ 1,500 ಮೀ. ಓಟವನ್ನು 3 ನಿ. 49.11 ಸೆ.ಗಳಲ್ಲಿ ಪೂರೈಸಿ ವಿಶ್ವದಾಖಲೆ ಸ್ಥಾಪಿಸಿದ್ದರು.

ಏಷ್ಯಾ ಕಪ್ ಆರ್ಚರಿ: ಭಾರತಕ್ಕೆ ಆರು ಬೆಳ್ಳಿ

ಸಿಂಗಪುರ (ಪಿಟಿಐ): ಭಾರತದ ಸ್ಪರ್ಧಿಗಳು ಇಲ್ಲಿ ನಡೆದ ಏಷ್ಯಾ ಕಪ್ ಸ್ಟೇಜ್–3 ಆರ್ಚರಿ ಚಾಂಪಿಯನ್‌ಷಿಪ್‌ನ ವಿವಿಧ ವಿಭಾಗಗಳ ಫೈನಲ್‌ನಲ್ಲಿ ಕೊರಿಯಾ ಮತ್ತು ಚೀನಾ ಸ್ಪರ್ಧಿಗಳ ಎದುರು ಮುಗ್ಗರಿಸಿದರು.

ಆರು ಬೆಳ್ಳಿ ಮತ್ತು ಒಂದು ಕಂಚಿನ ಪದಕದ ಮೂಲಕ ಭಾರತ ತಂಡದವರು ಪದಕ ಪಟ್ಟಿಯಲ್ಲಿ ಐದನೇ ಸ್ಥಾನ ಗಳಿಸಿದರು. 4 ಚಿನ್ನ, 1 ಬೆಳ್ಳಿ ಮತ್ತು 2 ಕಂಚು ಗೆದ್ದುಕೊಂಡ ಕೊರಿಯಾದವರು ಅಗ್ರಸ್ಥಾನ ಪಡೆದರು. 4 ಚಿನ್ನ ಹಾಗೂ 4 ಕಂಚಿನೊಂದಿಗೆ ಚೀನಾ ಎರಡನೇ ಸ್ಥಾನ ಗಳಿಸಿತು.

ಶನಿವಾರ ನಡೆದ ತನ್ನ ಮೊದಲ ಸ್ಪರ್ಧೆಯ ಫೈನಲ್‌ನಲ್ಲಿ ಭಾರತಕ್ಕೆ ನಿರಾಸೆ ಉಂಟಾಯಿತು. ಸಾಕ್ಷಿ ಚೌಧರಿ, ಪ್ರಗತಿ ಮತ್ತು ದೀಪಶಿಖಾ ಅವರನ್ನೊಳಗೊಂಡ ಕಾಂಪೌಂಡ್ ಮಹಿಳೆಯರ ತಂಡವು 232–234 ರಲ್ಲಿ ಕೊರಿಯಾ ಎದುರು ಅಲ್ಪ ಅಂತರದಲ್ಲಿ ಪರಾಭವಗೊಂಡಿತು.

ಕಾಂಪೌಂಡ್ ಪುರುಷರ ತಂಡ ಕೊರಿಯಾ ಕೈಯಲ್ಲಿ 235–238 ರಲ್ಲಿ ಮಣಿಯಿತು.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 11 ಜೂನ್ 2023


ಏಕೆ 'ಮಲ್ಟಿಟಾಸ್ಕಿಂಗ್' ಭಾರ? 1


ಅವೆಲ್ಲ ನಂದೇ ರೂಪಗಳು... 2


ಅಮೆರಿಕದಲ್ಲಿ ಶಿವಾಪುರದ 'ಕರಿಮಾಯಿ' 3

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 11 ಜೂನ್ 2023




ಹ ಲೋಂಗ್ ಬೇ ನಡುಗಡ್ಡೆಗಳ ರತ್ನಗರ್ಭ 4

ಏಕೆ ‘ಮಲ್ಟಿಟಾಸ್ಕಿಂಗ್’ ಭಾರ?

ಆಗಿಬಿಡಿ ತುಸು ಹಗುರ

ಒಂದೇ ಏಟಿಗೆ ಎರಡು ಮೂರು ಕೆಲಸ ಮಾಡುವವನು ನಿಸ್ಸೀಮ ಎಂದುಕೊಂಡಿದ್ದೇವೆ. ಆದರೆ, ಮನೋವೈದ್ಯಕೀಯ ಸಂಗತಿಗಳು ನಮ್ಮದಿಯ ನಾಳೆಗೆ ಮಲ್ಟಿಟಾಸ್ಕಿಂಗ್ ಎಡರು ಎಂದೇ ಹೇಳುತ್ತಿವೆ. ಅದರಿಂದ ಕಳಚಿಕೊಂಡು ‘ಮೋನೊಟಾಸ್ಕಿಂಗ್’ಗೆ ಮರಳುವುದೇ ಸರಿ ದಾರಿ.



ಡಾ. ಪ್ರೀತಿ ಶಾನಭಾಗ್

‘ಮಲ್ಟಿಟಾಸ್ಕಿಂಗ್’ ಅಥವಾ ಬಹುಕಾರ್ಯ ಎನ್ನುವುದು ಹೊಸಕಾಲದಲ್ಲಿ ಪದೇ ಪದೇ ಕಿವಿಮೇಲೆ ಬೀಳುವ ನುಡಿಗಟ್ಟು. ಜಗಜ್ಜಾಣರನ್ನು ಬಣ್ಣಿಸಲು ಕೂಡ ಇದನ್ನು ಉಪಯೋಗಿಸುವುದನ್ನು ನೋಡುತ್ತೇವೆ. ಒಂದೇ ಏಟಿಗೆ ಎರಡು ಮೂರು ಕೆಲಸ ಮಾಡುವವನನ್ನು ಮಾದರಿ ಎನ್ನುವಂತೆ ತೋರಿಸುವವರ ಸಂಖ್ಯೆ ದೊಡ್ಡದು. ವೈದ್ಯ ವಿಜ್ಞಾನ ಮಾತ್ರ ಇದು ಸುಳ್ಳು ಎನ್ನುತ್ತಿದೆ.

‘ಮಲ್ಟಿಟಾಸ್ಕಿಂಗ್’ನಲ್ಲಿ ಎರಡು ಬಗೆ. ಒಂದು, ಒಂದಾದ ಮೇಲೆ ಒಂದರಂತೆ ಕೆಲಸಗಳನ್ನು ಮಾಡುವುದು. ಇನ್ನೊಂದು, ಏಕಕಾಲದಲ್ಲಿ ಎರಡು ಮೂರು ಕೆಲಸಗಳನ್ನು ಮಾಡುವುದು.

ಹಿಂದಿನ ಕಾಲದಲ್ಲಿ ಒಂದೇ ಸಲಕ್ಕೆ ಹಲವು ಕಾರ್ಯಗಳ ಮಾಡುವವರನ್ನು ಮೆಚ್ಚುತ್ತಿದ್ದರು. ಅದು ಸಮಯ ಉಳಿಸುವ ಜಾಣ್ಮೆ ಎಂಬ ಭಾವನೆ ಇತ್ತು. ಈ ಕಾಲಘಟ್ಟದಲ್ಲಿ ಒಂದೇ ಹೊತ್ತಿಗೆ ಎರಡು ಮೂರು ಕೆಲಸ ಮಾಡುವುದು ದೈಹಿಕ ಚಟುವಟಿಕೆಗೆ ಅಷ್ಟೆ ಸೀಮಿತವಾಗಿಲ್ಲ, ಮಾನಸಿಕವಾಗಿಯೂ ನಿಕಷಕ್ಕೆ ಒಡ್ಡುತ್ತಿದೆ. ಸಂಶೋಧನೆಗಳ ಪ್ರಕಾರ, ಜಗತ್ತಿನ ಶೇ 3ರಷ್ಟು ಜನರಿಗೆ ಮಾತ್ರ ಏಕಕಾಲದಲ್ಲಿ ಬಹುಕಾರ್ಯ ಮಾಡುವಂತಹ ಮಿದುಳಿನ ಸಾಮರ್ಥ್ಯ ಇರುತ್ತದೆ. ಉಳಿದವರೆಲ್ಲ ಕಾಲದ ಆಮಿಷಗಳ ಮಿಕಗಳು.

ಒಂದಾದ ಮೇಲೆ ಒಂದರಂತೆ ಸತತವಾಗಿ ಕೆಲಸ ಮಾಡುವುದನ್ನು ‘ಸೀಕ್ವೆನ್ಷುಯಲ್ ಮಲ್ಟಿಟಾಸ್ಕಿಂಗ್’ (ಸರಣಿ ಬಹುಕಾರ್ಯ ಎನ್ನಬಹುದು) ಎನ್ನುತ್ತೇವೆ. ಉದಾಹರಣೆಗೆ: ಒಲೆಯ ಮೇಲೆ ಬಾಣಲಿ ಇಟ್ಟು, ಅದು ಕಾಯುವಷ್ಟರಲ್ಲಿ ಒಗ್ಗರಣೆಗೆ ಬೇಕಾದ ಪದಾರ್ಥ ಹೊಂಚಿಕೊಳ್ಳುವುದು ಅಥವಾ ತರಕಾರಿ ಹೆಚ್ಚಿಕೊಳ್ಳುವುದು. ಏಕಕಾಲದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಕೆಲಸ ಮಾಡುವುದನ್ನು ‘ಸೈಮಲ್ಟೇನಿಯಸ್ ಮಲ್ಟಿಟಾಸ್ಕಿಂಗ್’ (ಒಂದೇ ಸಲ ಬಹುಕಾರ್ಯಗಳನ್ನು ಮಾಡುವುದು) ಎಂದು ಕರೆಯುತ್ತೇವೆ. ಉದಾಹರಣೆಗೆ: ಟೀವಿ ನೋಡುತ್ತಾ ಬಟ್ಟೆ ಹೊಲಿಯುವುದು. ಇಂತಹ ಕೆಲಸ ಮಾಡುವಾಗ ಎರಡು ಜ್ಞಾನೇಂದ್ರಿಯಗಳು ಮಿದುಳಿಗೆ ಏಕಕಾಲದಲ್ಲಿ ಸಂದೇಶ ಕಳುಹಿಸುತ್ತಿರುತ್ತವೆ. ಮಿದುಳಿನಿಂದ ಅಂಗಾಂಗಗಳಿಗೆ ಮರುಸಂದೇಶವೂ ಹೋಗುತ್ತಿರುತ್ತದೆ. ಇವೆರಡೂ ಅಲ್ಲದೆ ‘ಸ್ವಿಚಿಂಗ್ ಟಾಸ್ಕ್ಸ್’ ಎಂಬ ಇನ್ನೊಂದು ಬಗೆಯ ಬಹುಕಾರ್ಯ ನಡೆಯುತ್ತದೆ. ಉದಾಹರಣೆಗೆ: ಅಡುಗೆ ಮಾಡುತ್ತಿರುವಾಗ, ಫೋನ್‌ನಲ್ಲಿ ಇನ್ಯಾವುದೋ ವಿಷಯದ ಚರ್ಚೆ ಮಾಡುತ್ತಾ ಅದಕ್ಕೆ ಸಂಬಂಧಿಸಿದ್ದನ್ನು ಮನಸ್ಸು ಹುಡುಕುವುದು. ಈ ರೀತಿಯ ಕೆಲಸಗಳು ಎರಡೇ ಇರಬೇಕು ಎಂದೇನೂ ಇಲ್ಲ. ಮೂರ್ನಾಲ್ಕು ಕೂಡ ಆಗಿರಬಹುದು.

ಟೀವಿ ನೋಡುತ್ತಲೇ ಕಾಳು ಬಿಡಿಸುವುದನ್ನು ಸಮಯ ಉಳಿಸುವ ಜಾಣತನ ಎಂದೇ ನಾವು ಮೆಚ್ಚುತ್ತೇವೆ. ಇನ್ನು ಕೆಲವರಿಗೆ ಟೀವಿ ಒಂದನ್ನೇ ನೋಡುವುದು ಬೋರು. ಹೀಗಾಗಿ ಅದೇ ಹೊತ್ತಿಗೆ ಇನ್ಯಾವುದೋ ಕೆಲಸ ಮಾಡಿದ ಸಮಾಧಾನ. ‘ಮಲ್ಟಿಟಾಸ್ಕಿಂಗ್’ನಿಂದ ಹಲವು ಕೆಲಸಗಳನ್ನು ಚಕಚಕನೆ ಮಾಡಿ ಮುಗಿಸುವುದರಿಂದ ಸಮಯ ಉಳಿಯುತ್ತದೆನ್ನುವುದು ಸಾಮಾನ್ಯ ಅಭಿಪ್ರಾಯ. ಆದರೆ, ಮಾನವವಿಜ್ಞಾನ ಪರಿಣತರು ಇದನ್ನು ಅಲ್ಲಗಳೆಯುತ್ತಾರೆ. ಮನುಷ್ಯನ ಮಿದುಳು ಏಕಕಾಲದಲ್ಲಿ ಒಂದು ಕೆಲಸವನ್ನು ಮಾತ್ರ ಮಾಡಲಷ್ಟೆ ರೂಪುಗೊಂಡಿದೆ ಎನ್ನುವ ಸತ್ಯವನ್ನು ಅವರು ಮುಂದಿಡುತ್ತಾರೆ.

ಯಾವುದೇ ಕೆಲಸವನ್ನು ನಾವು ಮೂರು ಹಂತಗಳಲ್ಲಿ ಮಾಡುತ್ತೇವೆ. ಮೊದಲನೆಯದು, ಪ್ರಕ್ರಿಯೆ ಅರ್ಥಾತ್ ಇಡೀ ಕೆಲಸದ ನಿರ್ವಹಣೆಯ ಕ್ರಮ. ಎರಡನೆಯದು, ಗುರಿ ನಿಗದಿಪಡಿಸುವುದು ಹಾಗೂ ಅದನ್ನು ಪ್ರಕ್ರಿಯೆಯ ಕಾಲಾವಧಿಯ ಬದಲಾವಣೆಗೆ ತಕ್ಕಂತೆ ಮಾರ್ಪಡಿಸುವುದು. ಮೂರನೆಯದು, ಮೊದಲ ಎರಡೂ ಹಂತಗಳನ್ನು ಸಾಧಿಸಲು ಮಾಡುವ ಸರಣಿ ಚಟುವಟಿಕೆಗಳು. ಬರೆಯುವುದನ್ನೇ ಉದಾಹರಣೆಯಾಗಿ ನೋಡೋಣ. ಹಾಳೆಯ ಮೇಲೆ ಏನನ್ನೋ ಬರೆಯಬೇಕು ಎನ್ನುವುದು ಒಟ್ಟಾರೆ ಪ್ರಕ್ರಿಯೆ. ಬರೆಯುವ ವಿಷಯ ಯಾವುದು ಎನ್ನುವುದು ನಿಗದಿಪಡಿಸಿಕೊಳ್ಳುವ ಗುರಿ. ಪೆನ್ನನ್ನು ಹೇಗೆ ಹಿಡಿಯಬೇಕು, ಎಲ್ಲಿಂದ ಬರೆಯಬೇಕು, ಯಾವ ಪದ ಹಾಕಬೇಕು ಎನ್ನುವುದೆಲ್ಲ ಚಟುವಟಿಕೆಗಳು. ನಿರ್ದಿಷ್ಟವಾದ ಕೆಲಸಕ್ಕೆ ಇರುವ ಈ ಹಂತಗಳಿಗೆ ಮಿದುಳು ಸಮರ್ಪಕವಾಗಿ ಸ್ಪಂದಿಸುತ್ತದೆ. ಹೀಗಾಗಿ ಬರವಣಿಗೆ ಮುಗಿಸಿದ ಮೇಲೆ ಮನಸ್ಸಿಗೆ ಸಮಾಧಾನ ಸಿಗುತ್ತದೆ.

ಒಂದು ವೇಳೆ ಬರೆಯುವುದರ ಜತೆಗೆ ಯಾರೊಟ್ಟಿಗೋ ಪದೇ ಪದೇ ಫೋನ್‌ನಲ್ಲಿ ಮಾತನಾಡುತ್ತೇವೆ ಎಂದಿಟ್ಟುಕೊಳ್ಳಿ. ಆಗ ಒಂದು ಗುರಿ ಹಾಗೂ ಪ್ರಕ್ರಿಯೆಯಿಂದ ಇನ್ನೊಂದಕ್ಕೆ ಜಿಗಿಯುತ್ತಾ ಇರಬೇಕಾಗುತ್ತದೆ. ಮಿದುಳು ಹೀಗೆ ತನ್ನ ಕಾರ್ಯವನ್ನು ಬದಲಿಸಬೇಕಾದಾಗ ಕೆಲವು ಮೈಕ್ರೊ ಸೆಕೆಂಡ್‌ಗಳಷ್ಟು ಕಾಲಾವಕಾಶವನ್ನು ಸಹಜವಾಗಿಯೇ ಬಯಸುತ್ತದೆ. ‘ಗೋಲ್ ಶಿಫ್ಟಿಂಗ್’ ಹಾಗೂ ‘ರೂಲ್ ಆ್ಯಕ್ಟಿವೇಷನ್’ ಎಂಬ ಎರಡು ಪ್ರಕ್ರಿಯೆಗಳಲ್ಲಿ ಮಿದುಳು ಗೊಂದಲಕ್ಕೆ ಬೀಳುತ್ತದೆ. ಅದಕ್ಕೇ ಎಷ್ಟೋ ಸಲ ನಾವು ಫೋನ್‌ನಲ್ಲಿ ಮಾತನಾಡಿದ್ದನ್ನೇ ಹಾಳೆಯ ಮೇಲೆ ಬರೆದುಬಿಡುತ್ತೇವೆ.

2ನೇ ಪುಟಕ್ಕೆ...

‘ಪಿಂಕಿ ಎಲ್ಲಿ’ ಎಂದು ಹುಡುಕುತ್ತಾ...

ಮೌನೇಶ ಬಡಿಗೇರ

ಪೃಥ್ವಿ ಕೊಣನೂರು ನಿರ್ದೇಶನದ ‘ಪಿಂಕಿ ಎಲ್ಲಿ?’ ಸಿನಿಮಾ ಪ್ರಯೋಗವು ನಿಯೋ ರಿಯಲಿಸಮ್ಮಿನ ಸಿನಿಮಾಗಳ ಶಿಲ್ಪದ ನೆನಕೆಗೆ ಕಾರಣವಾಗಿದೆ. ನಿಯೋ ರಿಯಲಿಸಮ್ಮಿನ ಸಿನಿಮಾಗಳು ‘ಬೈಸಿಕಲ್ ಥೀವ್ಸ್’ ಕಾಲದಿಂದ ಇಲ್ಲಿನವರೆಗೆ ಹೀಗೆಲ್ಲ ಕಾಡುತ್ತಿವೆ...



‘ಬೈಸಿಕಲ್ ಥೀವ್ಸ್’ ಸಿನಿಮಾದ ದೃಶ್ಯ

ಬಹಳ ಹಿಂದಿನಿಂದಲೇ ಇಟಲಿಯಲ್ಲಿ ಶುರುವಾದ ನಿಯೋ ರಿಯಲಿಸಮ್ಮಿನ ಸಿನಿಮಾಗಳು, ಪ್ರೇಕ್ಷಕರು ಸಿನಿಮಾಗಳನ್ನು ನೋಡುವ ಬಗೆಯನ್ನೇ ಬುಡಮೇಲು ಮಾಡಿದ್ದವು. ಇಟಲಿಯ ನಿರ್ದೇಶಕ ವಿಟ್ಟೋರಿಯಾ ಡೆ ಸಿಕಾ ಮಾಡಿದ ‘ಬೈಸಿಕಲ್ ಥೀವ್ಸ್’ ಈ ಬಗೆಯ ನಿಯೋ ರಿಯಲಿಸಮ್ ಸಿನಿಮಾಗಳಿಗೆ ಒಂದೊಳ್ಳೆ ಪೀಠಿಕೆ ಅಥವಾ ಇಂದಿಗೂ ಮಾದರಿಯಾಗಿ ನಿಲ್ಲುವಂತಹ ಸಿನಿಮಾ. ರಿಯಲಿಸಮ್ಮಿಗೂ ಈ ನಿಯೋ ರಿಯಲಿಸಮ್ಮಿಗೂ ಇರುವ ಅಂತರ ಏನು ಎಂದು ನೋಡಿಕೊಂಡರೆ, ರಿಯಲಿಸಮ್ಮು ಅಥವಾ ವಾಸ್ತವತಾವಾದ ಮನಷ್ಯನ ವಾಸ್ತವವನ್ನು ಅದು ಹೇಗಿದೆಯೋ ಹಾಗೇ ತರಲು ಯತ್ನಿಸುತ್ತದೆ. ಅವನು, ಅವನ ಕುಟುಂಬ ವ್ಯವಸ್ಥೆ, ಸಂಬಂಧಗಳು ಇವೆಲ್ಲವುಗಳನ್ನು ಹಾಗೆ ಹಾಗೇ ತರುತ್ತದೆ. ಆದರೆ ಈ ನಿಯೋ ರಿಯಲಿಸಮ್ಮು ಆ ಮನುಷ್ಯ ಬದುಕುತ್ತಿರುವ ದೇಶ-ಕಾಲ, ಸಾಮಾಜಿಕ ವ್ಯವಸ್ಥೆ, ಅಧಿಕಾರ, ಆಡಳಿತ, ಇವೆಲ್ಲವೂ ಹೇಗೆ ಆ ಮನುಷ್ಯನ ಮೇಲೆ, ಅವನ ಖಾಸಗಿ ಬದುಕಿನ ಮೇಲೆ ಪ್ರಭಾವ ಬೀರಿದೆ ಎಂಬುದನ್ನು ಶೋಧಿಸುತ್ತಾ ಹೋಗುತ್ತದೆ.

ಮೊದಮೊದಲಿಗೆ ಈ ಬಗೆಯ ಸಿನಿಮಾಗಳು ಬಂದಾಗ ಅದು ಪ್ರೇಕ್ಷಕರಲ್ಲಿ ಮೂಡಿಸಿದ ತಲ್ಲಣಗಳನ್ನು ನಾವು ಊಹಿಸಬಹುದು. ಅಲ್ಲಿಯವರೆಗೂ ಸಿನಿಮಾಗಳು ಬರೀ ಸ್ಟುಡಿಯೊದ ಕೃತಕವಾದ ಗೋಡೆ, ಮನೆ, ರಸ್ತೆ ಮೊದಲಾದವುಗಳಲ್ಲಿ ನಡೆಯುತ್ತಿದ್ದದ್ದು, ಸೀದಾ ನಾವು ನೀವು ಓಡಾಡುವ ರಸ್ತೆ, ಮನೆ, ಮರ, ನದಿ, ಶಾಲೆ, ಕಚೇರಿ ಮೊದಲಾದವುಗಳಲ್ಲಿ ಚಿತ್ರೀಕರಣ ಮಾಡಲಾಯಿತು. ಅಷ್ಟೇ ಅಲ್ಲದೆ, ಅದುವರೆಗೂ ಸಿನಿಮಾಗಳಲ್ಲಿ ಸಣ್ಣ ಸಣ್ಣ ಪಾತ್ರಗಳೇ ಇದ್ದರೂ ಅವನ್ನು ಸ್ಟುಡಿಯೊದಲ್ಲೇ ಇರುತ್ತಿದ್ದ ಕಲಾವಿದರ ಕೈಲಿ ಮಾಡಿಸಲಾಗುತ್ತಿತ್ತು. ಆ ಜಾಗದಲ್ಲಿ ನಿಜ ಮನುಷ್ಯರನ್ನೇ ಕಲಾವಿದರನ್ನಾಗಿ ಮಾಡಲಾಯಿತು.


ಇಲ್ಲೇ ಒಂದು ವಿರೋಧಾಭಾಸ ಇರುವುದು. ಜಡ ವಸ್ತುಗಳನ್ನು ಅವು ಹೇಗಿವೆಯೋ ಹಾಗೆ ನಾವು ಬಳಸಿಕೊಳ್ಳುತ್ತೇವೆ ಅಷ್ಟೆ. ಆದರೆ ನಿಜ ವ್ಯಕ್ತಿಗಳು ಸಿನಿಮಾ ಎಂಬ ಕಲಾಚೌಕಟ್ಟಿನ ಒಳ ಪ್ರವೇಶ ಮಾಡಿ ‘ಕಲಾವಿದರು’ ಎನಿಸಿಕೊಳ್ಳುವ ಪವಾಡ ಇದೆಯಲ್ಲ, ಇದು ಸ್ವತಃ ಅದರಲ್ಲಿ ಅಭಿನಯಿಸುತ್ತಿರುವ ಅಥವಾ ಬದುಕುತ್ತಿರುವ ಆ ಪಾತ್ರಗಳಿಗೂ ತಿಳಿದಿರುವುದಿಲ್ಲ. ಅದುವರೆಗೂ ‘ಮೆಲೋಡ್ರಾಮಾ’ ಮಾದರಿಯ ಅಭಿನಯವನ್ನು ನೋಡಿ ಒಗ್ಗಿಹೋಗಿದ್ದ ಅಥವಾ ಬೇಸತ್ತಿದ್ದ ಪ್ರೇಕ್ಷಕ ವರ್ಗಕ್ಕೆ ಇದೊಂದು ದೊಡ್ಡ ಶಾಕ್ ಅಥವಾ ಹೊಸ ದೃಷ್ಟಿಯನ್ನು ಕೊಟ್ಟಿತ್ತು. ನಂತರ ನಮ್ಮಲ್ಲೂ ಬಂಗಾಳಿಯಲ್ಲಿ ಸತ್ಯಜಿತ್ ರೇ, ಮೃಣಾಲ್ ಸೇನ್, ಶ್ಯಾಮ್ ಬೆನಗಲ್, ಅಡೂರು ಗೋಪಾಲಕೃಷ್ಣನ್, ಅರವಿಂದನ್, ಗಿರೀಶ ಕಾಸರವಳ್ಳಿ ಮೊದಲಾದವರು ಈ ಬಗೆಯ ಸಿನಿಮಾಗಳನ್ನು ಮಾಡಿದರು. ಇವನ್ನು ‘ಹೊಸ ಅಲೆಯ ಸಿನಿಮಾಗಳು’ ಅಥವಾ ‘ಪರ್ಯಾಯ ಸಿನಿಮಾಗಳು’ ಎಂದು ಕರೆದೆವು. ಅವುಗಳ ಮುಂದುವರಿಕೆಯಾಗಿ ಇಂದಿಗೂ ಈ ಮಾರ್ಗದಲ್ಲಿ ಅನೇಕ ಸಿನಿಮಾಗಳು ಪರಿಣಾಮಕಾರಿಯಾಗಿ ಮೂಡಿಬರುತ್ತಿವೆ.

ವಿಶ್ವ ಸಿನಿಮಾಗಳಲ್ಲಿ ಇತ್ತೀಚಿನ ದಶಕಗಳಲ್ಲಿ ಈ ಬಗೆಯ ಸಿನಿಮಾಗಳಿಗೆ ಇರಾನ್, ಇರಾಕ್, ತುರ್ಕಿ, ಫಿಲಿಪ್ಪೀನ್ಸ್ ಹೀಗೆ ಹಲವಾರು ದೇಶದ ಸಿನಿಮಾಗಳು ಅದ್ಭುತವಾದ ಕೊಡುಗೆಗಳನ್ನು ನೀಡಿವೆ. ಅದರ ಮೂಲಕ ಇಡೀ ವಿಶ್ವದ ಸಮ್ಮುಖದಲ್ಲಿ ತಮ್ಮ ದೇಶದ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಕೌಟುಂಬಿಕ ಮೌಲ್ಯ ವ್ಯವಸ್ಥೆಯನ್ನು ತೆರೆದಿಟ್ಟಿದ್ದಾರೆ. ಅದರಲ್ಲೂ ಇರಾನಿಯನ್ ಸಿನಿಮಾಗಳು ಈ ಬಗೆಯ ಸಿನಿಮಾ ನಿರ್ಮಾಣಗಳಲ್ಲಿ ವಿಶ್ವ ಸಿನಿಮಾ ಕ್ಷೇತ್ರದಲ್ಲಿ ತಮ್ಮ ಅಗಾಧ ಪ್ರಭಾವವನ್ನು ಬೀರಿವೆ. ಅಬ್ಬಾಸ್ ಕಿಯರೋಸ್ತಮಿ, ಮೊಹಸೇನ್ ಮಖ್ಮಲ್‌ಬಫ್, ಮಜಿದ್ ಮಜಿದಿ, ಅಸ್ಗರ್ ಫರಾದಿ ಮೊದಲಾದವರು ಜಗತ್ತೇ ತಮ್ಮ ಕಡೆಗೆ ತಿರುಗಿ ನೋಡುವಂತಹ ಸಿನಿಮಾಗಳನ್ನು ಕೊಟ್ಟಿದ್ದಾರೆ. ವಿಮರ್ಶಕರು ಇಟಾಲಿಯನ್ ಸ್ಟೈಲ್‌ನ ನಿಯೋ ರಿಯಲಿಸಮ್ ಒಂದು ಮಾದರಿಯಾದರೆ, ಇರಾನಿಯನ್ ಮಾದರಿಯದ್ದು ಮತ್ತೊಂದು ಬಗೆಯ ನಿಯೊ ರಿಯಲಿಸಮ್ ಎಂದು ಗುರುತಿಸುತ್ತಾರೆ. ಅದನ್ನು ‘ಆತೊರಿಯಲ್ ಮಾದರಿ’ ಅಥವಾ ‘ಕತೆಗಾರನ ಮಾದರಿ’ಯ ಸಿನಿಮಾ ಎಂದೂ ಕರೆಯುತ್ತಾರೆ.

ಈ ಮಾದರಿಯ ಸಿನಿಮಾಗಳು ಕನ್ನಡದ ಅನೇಕ ಸಿನಿಮಾಕರ್ಮಿಗಳನ್ನೂ ಪ್ರಭಾವಿಸಿರುವುದನ್ನು ನಾವು ಕಾಣಬಹುದಾಗಿದೆ.

ಈ ಇರಾನಿಯನ್ ನಿಯೋ ರಿಯಲಿಸ್ಟಿಕ್ ಮಾದರಿಯ ಮುಖ್ಯ ಧಾತು ಮನುಷ್ಯ ಸಂಬಂಧಗಳನ್ನು ಮುನ್ನೆಲೆಗೆ ತಂದು ಅದನ್ನು ನಿಯಂತ್ರಿಸುತ್ತಿರುವ ಅಧಿಕಾರಶಾಹಿ ವ್ಯವಸ್ಥೆಯನ್ನು ಬಹಳ ಅಡಕವಾಗಿ ಅಳವಡಿಸುವುದು. ಇದು ಒಂದು ಬಗೆಯಲ್ಲಿ ಪ್ರೇಕ್ಷಕನನ್ನು ಏಕಕಾಲದಲ್ಲಿ ಭಾವಪ್ರವಾಹದಲ್ಲಿ ಮುಳುಗಿಸಿಯೂ ವ್ಯವಸ್ಥೆಯ ಕುಂದುಕೊರತೆಗಳನ್ನು ಸೂಚ್ಯವಾಗಿ ತೋರಿಸುತ್ತಿರುತ್ತವೆ. ಮಜಿದ್ ಮಜಿದಿಯ ‘ಚಿಲ್ಡ್ರನ್ ಆಫ್ ಹೆವೆನ್’ ಎಂಬ ಪ್ರಸಿದ್ಧ ಸಿನಿಮಾವನ್ನು ಉದಾಹರಣೆಯಾಗಿ ನೋಡಬಹುದು. ಕೆಳಮಧ್ಯಮ ವರ್ಗದ ಇಬ್ಬರು ಮಕ್ಕಳ ಕತೆ ಇದು.

3ನೇ ಪುಟಕ್ಕೆ...



‘ಪಿಂಕಿ ಎಲ್ಲಿ?’ ಸಿನಿಮಾದ ದೃಶ್ಯ

ಸಾಹಿತ್ಯ ಪರಿಷತ್‌ಗೆ ಕಾಯಕಲ್ಪ ನೀಡಿದ ‘ಕರ್ಮಯೋಗಿ’

ಅ.ರಾ. ಮಿತ್ರ

ಆಗ ಸುನಿಲ್ ಗಾವಸ್ಕರ್, ಸಚಿನ್ ತೆಂಡೂಲ್ಕರ್ ಟೀಮ್‌ನಲ್ಲಿ ಇದಾರೆ ಅಂದರೆ ಕ್ರಿಕೆಟ್ ನೋಡೋಕೆ ಹೆಚ್ಚು ಅಭಿಮಾನಿಗಳು ಸೇರುತ್ತಿದ್ದರು. ಈಗಲೂ ಕೊಹ್ಲಿ, ರೋಹಿತ್‌ನಂತಹ ಸ್ಟಾರ್‌ಗಳಿದ್ದಾರೆ ಅಂದರೆ ಹೆಚ್ಚು ಜನ ಸ್ಟೇಡಿಯಂನತ್ತ ಬರುತ್ತಾರೆ. ಇದೇ ರೀತಿ, ಕನ್ನಡ ಸಾಹಿತ್ಯದತ್ತ ಜನರನ್ನು ಸೆಳೆಯಲು ‘ಹಾಸ್ಯ’ವನ್ನು ಸ್ಟಾರ್‌ನಂತೆ ಬಳಸಿಕೊಂಡವರು ಜಿ. ನಾರಾಯಣ.

ಜನ್ಮಶತಮಾನೋತ್ಸವದ ಈ ಸಂದರ್ಭದಲ್ಲಿ ಜಿ. ನಾರಾಯಣ ಅವರ ಕೊಡುಗೆಯನ್ನು ಸ್ಮರಿಸಿಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯ ಎಂದೇ ನಾನು ಭಾವಿಸುತ್ತೇನೆ. ಅವರ ಪೂರ್ತಿ ಹೆಸರು ದೇಶಹಳ್ಳಿ ಜಿ. ನಾರಾಯಣ. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ದೇಶಹಳ್ಳಿಯವರಾದ ನಾರಾಯಣ, ರಾಜ್ಯದ ಹಳ್ಳಿ–ಹಳ್ಳಿಗೂ ಸಾಹಿತ್ಯದ ರುಚಿ ಉಣಬಡಿಸುವಲ್ಲಿ ಶ್ರಮಿಸಿದವರು.

ಹಾಸ್ಯ ಸಾಹಿತ್ಯ ಲೋಕಕ್ಕೆ ನಾರಾಯಣ ಅವರ ಮುಖ್ಯ ಕೊಡುಗೆ ‘ವಿನೋದ’ ಪತ್ರಿಕೆ. 1951ರಲ್ಲಿ ಅವರು ಆರಂಭಿಸಿದ ಈ ಪತ್ರಿಕೆಯಲ್ಲಿ ಎಲ್ಲ ಬಗೆಯ ಸಾಹಿತ್ಯ ಲೇಖನಗಳು, ಕಥೆಗಳು ಬರುತ್ತಿದ್ದರೂ ‘ವಿನೋದ’ ಎಂಬ ಹೆಸರಿನ ಕಾರಣದಿಂದ ಇದನ್ನು ಹಾಸ್ಯ ಮಾಸಪತ್ರಿಕೆ ಎಂದೇ ಪರಿಗಣಿಸಲಾಗುತ್ತಿತ್ತು. ಅವರು ಸಂಪಾದಕರಾಗಿದ್ದಾಗ, ನಾನು ಈ ಪತ್ರಿಕೆಯ ಉಪ ಸಂಪಾದಕನಾಗಿದ್ದೆ.

ಬರವಣಿಗೆಗಿಂತ ‘ಸಾಹಿತ್ಯ ಸಂಘಟಕ’ರಾಗಿ ಜನಮಾನಸದಲ್ಲಿ ಉಳಿದವರು ನಾರಾಯಣ. ಪ್ರಪಂಚದ ಯಾವುದೇ ವಿಷಯಗಳಲ್ಲಿಯೂ ಅಷ್ಟೇ ಆಸಕ್ತಿಯಿಂದ, ಪ್ರೌಢಿಮೆಯಿಂದ ಅವರು ಮಾತನಾಡುತ್ತಿದ್ದರು. ‘ಬ್ರಿಟಿಷರೇ ಭಾರತ ಬಿಟ್ಟು ತೊಲಗಿ’ ಚಳವಳಿಯಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡಿದ್ದ ಅವರು ದೇಶಪ್ರೇಮಿಯಾಗಿದ್ದರು. ದೇಶದ ಮೇಲಿರುವಷ್ಟೇ ಕಾಳಜಿ, ನಾಡು–ನುಡಿಯ ಮೇಲೂ ಅವರಿಗಿತ್ತು. ರಾಜಕೀಯದಲ್ಲೂ ಅಷ್ಟೇ ಆಸಕ್ತಿ ಹೊಂದಿದ್ದ ಅವರು 1957ರಲ್ಲಿ ಬೆಂಗಳೂರು ಕಾರ್ಪೊರೇಷನ್‌ನ ಕೌನ್ಸಿಲರ್ ಆಗಿದ್ದಲ್ಲದೆ, 1964ರಲ್ಲಿ ಬೆಂಗಳೂರು ಮೇಯರ್ ಆಗಿಯೂ ಕಾರ್ಯನಿರ್ವಹಿಸಿದ್ದರು.

ನಾರಾಯಣ ಅವರ ಸಾಹಿತ್ಯ ಪ್ರೇಮ ಹೆಚ್ಚು ಹೊಳಪು ಪಡೆದಿದ್ದು ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ. 1969ರಿಂದ 1978ರವರೆಗೆ ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ನಾನು ಕಾರ್ಯದರ್ಶಿಯಾಗಿ ಅವರ ಜೊತೆ ಕೆಲಸ ಮಾಡಿದ್ದೆ. ಅತ್ಯುತ್ತಮ ಸಂವೇದನೆ ಹೊಂದಿದ್ದ ಅವರು, ಲಂಚಗುಳಿತನ, ಭ್ರಷ್ಟಾಚಾರ, ಕೆಟ್ಟ ಶಿಫಾರಸುಗಳನ್ನು ಮಾಡುವುದು, ತಮ್ಮ ಕಡೆಯವರಿಗೇ ಕೆಲಸ ಆಗಬೇಕು ಎಂಬ ಬುದ್ಧಿ ಹೊಂದಿರಲಿಲ್ಲ.

ರಾಜ್ಯದ ಎಲ್ಲೆಡೆಯೇ ಆಗಲಿ, ಬಹುದೊಡ್ಡ ಸಾಂಸ್ಕೃತಿಕ ಕಾರ್ಯಕ್ರಮಗಳಾದರೆ ಅವುಗಳಲ್ಲಿ ಭಾಗವಹಿಸುತ್ತಿದ್ದರು. ಅದರಲ್ಲಿಯೂ, ಕನ್ನಡ ಭಾಷೆ ಬಗ್ಗೆ ಅವರಿಗೆ ಹೆಚ್ಚು ಆಸಕ್ತಿ ಇತ್ತು. ಭಾಷೆಯ ಪ್ರಗತಿ ಮತ್ತು ಪ್ರಸಾರ ಒಂದು ಪತ್ರಿಕೆ ತೆಗೆದುಕೊಳ್ಳಬೇಕಾದ ಜವಾಬ್ದಾರಿ ಮಾತ್ರವಲ್ಲ, ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ಅಂಥದ್ದೊಂದು ನಿಲುವು ಮತ್ತು ಪಣ ಇರಬೇಕು ಎಂದು ಅವರು ಪ್ರತಿಪಾದಿಸುತ್ತಿದ್ದರು. ಈ ನಿಟ್ಟಿನಲ್ಲಿ, ಕಾರ್ಯಕ್ರಮಗಳನ್ನು ಸಂಘಟಿಸುವುದು, ರೂಪು–ರೇಷೆಗಳನ್ನು ತಯಾರಿಸುವುದು ಮತ್ತು ಅದನ್ನು ಯೋಜನಾಬದ್ಧವಾಗಿ ನಡೆಸಿಕೊಂಡು ಹೋಗುವಂತಹ ಕಾರ್ಯವನ್ನು ಅವರು ಮಾಡುತ್ತಿದ್ದರು.



ಜಿ. ನಾರಾಯಣ ಅವರ ಜನ್ಮ ಶತಮಾನೋತ್ಸವದ ವರ್ಷವಿದು. 1950ರ ದಶಕದಲ್ಲಿ ‘ವಿನೋದ’ ಪತ್ರಿಕೆಯ ಮೂಲಕ ಹಾಸ್ಯ ಬರಹಗಳಿಗೆ ಉತ್ತೇಜನ ನೀಡಿದ ಅವರು ಸಾಹಿತ್ಯ ಪರಿಚಾರಿಕೆಯಿಂದಲೇ ಹೆಸರಾದವರು. ಕಾರ್ಪೊರೇಟರ್, ಮೇಯರ್ ಕೂಡ ಆಗಿದ್ದ ಅವರ ಬದುಕಿನ ಪುಟಗಳು ಮೆಲುಕು ಹಾಕುವಂತಿವೆ.

ಪುಸ್ತಕ ಮಾರಾಟ ಚಳವಳಿ ಅವರು ಕೈಗೊಂಡ ಕನ್ನಡ ಕೆಲಸಗಳಲ್ಲಿ ಪ್ರಮುಖವಾದದ್ದು. ಮನೆ–ಮನೆಗೆ ಕನ್ನಡ ಪುಸ್ತಕಗಳನ್ನು ಮುಟ್ಟಿಸುವ ಕೆಲಸವನ್ನು ಅವರು ಮಾಡಿದರು. ಅವರು ಅಧ್ಯಕ್ಷರಾಗುವುದಕ್ಕೂ ಮೊದಲು, ಪರಿಷತ್‌ನಿಂದ ವರ್ಷಕ್ಕೆ ಮೂರರಿಂದ ನಾಲ್ಕು ಪುಸ್ತಕಗಳಷ್ಟೇ ಪ್ರಕಟವಾಗುತ್ತಿದ್ದವು. ಅವರು ಅಧ್ಯಕ್ಷರಾದ ಮೇಲೆ, ವರ್ಷಕ್ಕೆ 70ರಿಂದ 100 ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದರು. ಸಾಹಿತಿಗಳಿಗೆ ದುಂಬಾಲು ಬಿದ್ದು ಪುಸ್ತಕಗಳನ್ನು ಬರೆಸಿ, ಪ್ರಕಟಿಸಿದರು. ಮನೆ ಮನೆಗೆ ಪುಸ್ತಕ, ಬೀದಿ ಬೀದಿಗೆ ಕನ್ನಡ ಎಂಬ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಬೆಂಗಳೂರು ಮಾತ್ರವಲ್ಲದೆ, ರಾಜ್ಯದ ಮೂಲೆ–ಮೂಲೆಯಲ್ಲಿ ಕನ್ನಡದ ಕಹಳೆ ಮೊಳಗಿಸಿದರು. ಬೀದರ್, ಕಲಬುರಗಿ ಸೇರಿದಂತೆ ಹಲವು ಜಿಲ್ಲೆಗಳ ಹಳ್ಳಿ–ಹಳ್ಳಿಗೆ ಹೋಗಿ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದರು. ಶಾಲಾ–ಕಾಲೇಜುಗಳಲ್ಲಿ ಉಪನ್ಯಾಸ, ವಿಚಾರ ಸಂಕಿರಣ ಏರ್ಪಡಿಸುತ್ತಿದ್ದರು.

ರಾಜ್ಯದೆಲ್ಲೆಡೆ ಹೆಣ್ಣುಮಕ್ಕಳೇ ನಡೆಸುವ ಸಂಸ್ಥೆಗಳ ಸಂಖ್ಯೆ ಹೆಚ್ಚಾಗಬೇಕು ಎಂಬ ಉದ್ದೇಶವೂ ಅವರದ್ದಾಗಿತ್ತು. ಅವರೇ ಶಾಲೆಗಳನ್ನು ನಡೆಸಬೇಕು, ಸಾಹಿತ್ಯ ಚಟುವಟಿಕೆ ಹಮ್ಮಿಕೊಳ್ಳಬೇಕು ಎಂದು ಹೇಳುತ್ತಿದ್ದರು. ಇದಕ್ಕೆ ಪೂರಕವಾಗಿ ಮಹಿಳಾ ಸಾಹಿತ್ಯ ಸಂಘಗಳನ್ನು ರಚಿಸಿದರು. ಅದಕ್ಕೆ ಅಧ್ಯಕ್ಷರು, ಕಾರ್ಯದರ್ಶಿಗಳನ್ನು ನೇಮಿಸಿದರು. ಇದರ ಪರಿಣಾಮ, ಕನ್ನಡದಲ್ಲೀಗ 30ಕ್ಕೂ ಹೆಚ್ಚು ಮಹಿಳಾ ಸಾಹಿತ್ಯ ಪ್ರಸಾರ ಶಾಖೆಗಳಿವೆ.

ಮೊದಲು, ಸ್ಥಳೀಯವಾಗಿ ಅಲ್ಲಲ್ಲಿ ಸಾಹಿತ್ಯ ಸಮ್ಮೇಳನಗಳು ನಡೆಯುತ್ತಿದ್ದವು. ನಾರಾಯಣ ಅವರು, ಪ್ರತಿ ಕಂದಾಯ ಜಿಲ್ಲೆಯಲ್ಲಿ ಜಿಲ್ಲಾ ಘಟಕ ಮಾಡಿ, ಅಧ್ಯಕ್ಷರನ್ನು ನೇಮಕ ಮಾಡಿ, ನಿಯಮಿತವಾಗಿ ಜಿಲ್ಲಾ ಸಮ್ಮೇಳನಗಳು ನಡೆಯುವಂತೆ ನೋಡಿಕೊಂಡರು. ಆಗ, ಮೈಸೂರು ಸರ್ಕಾರ ಇತ್ತು. ಅಲ್ಲಿನ ಅಧಿಕಾರಿಗಳು ನಾರಾಯಣ ಅವರ ಮಾತಿಗೆ ಆದ್ಯತೆ ನೀಡುತ್ತಿದ್ದರು. ಕನ್ನಡದ ಕೆಲಸಗಳನ್ನು ಮಾಡಿಕೊಡುತ್ತಿದ್ದರು.

ಕನ್ನಡ ಸಾಹಿತ್ಯ ಪರಿಷತ್ತು ಅಂದರೆ, ಅದು ಸಾಹಿತ್ಯಕ್ಕೆ ಸಂಬಂಧಿಸಿದ್ದು ಮಾತ್ರವಲ್ಲ. ಅದು ಕನ್ನಡ ಪರಿಷತ್, ಸಂಸ್ಕೃತಿ ಪರಿಷತ್, ಕನ್ನಡ ವಿದ್ಯಾ ಪರಿಷತ್ ಮತ್ತು ಕನ್ನಡ ಭಾಷಾ ಪರಿಷತ್ ಎಂದು ಅವರು ಹೇಳುತ್ತಿದ್ದರು. ಕನ್ನಡ ಹೆಚ್ಚು ಪ್ರಖರಗೊಳ್ಳಬೇಕು, ಪ್ರಚಾರಗೊಳ್ಳಬೇಕು ಎಂದರೆ ಶಾಲೆಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಬೇಕು. ಮಕ್ಕಳ ಮುಂದೆ ಯಾವಾಗಲೂ ಒಂದೆರಡು ಕನ್ನಡ ಪುಸ್ತಕಗಳಿರುವಂತೆ ನೋಡಿಕೊಳ್ಳಬೇಕು ಎಂದು ಅವರು ಒತ್ತಾಯಿಸುತ್ತಿದ್ದರು. ತ್ರೈವಾರ್ಷಿಕ, ಪಂಚವಾರ್ಷಿಕ ಯೋಜನೆಗಳ ಮೂಲಕ ಪರಿಷತ್ ಅಭಿವೃದ್ಧಿಗೆ ಶ್ರಮಿಸಿದರು.

ಸಾಹಿತ್ಯ, ಸಂಘಟನೆಯ ಜೊತೆಗೆ, ಕನ್ನಡಪರ ಹೋರಾಟಗಳಲ್ಲಿಯೂ ಅವರು ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಹಿಂದಿ ಚಿತ್ರಗಳು ಹೆಚ್ಚು ಬಂದು ಕನ್ನಡ ಚಿತ್ರಗಳಿಗೇ ಚಿತ್ರಮಂದಿರಗಳು ಸಿಗದಿದ್ದಾಗ, ಡಬ್ಬಿಂಗ್ ಹಾವಳಿ ಹೆಚ್ಚಾದಾಗ ಅ.ನ.ಕೃಷ್ಣರಾಯರು ಮತ್ತು ಮ. ರಾಮಮೂರ್ತಿಯವರ ಜೊತೆ ಸೇರಿ ಪ್ರತಿಭಟನೆ ಮಾಡುತ್ತಿದ್ದರು.

ಯಾವುದೇ ಊರಿಗೆ ಹೋದರೂ ಅಲ್ಲಿನ ಸಂಸ್ಕೃತಿ, ಪ್ರಾದೇಶಿಕ ಜ್ಞಾನ ಇದ್ದ ಹಿರಿಯರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುವ ಅಭ್ಯಾಸ ಅವರದ್ದಾಗಿತ್ತು. ಅವರೊಂದಿಗೆ, ನಾನು ಮತ್ತು ಹಂ.ಪ. ನಾಗರಾಜಯ್ಯ ಅವರೂ ಇರುತ್ತಿದ್ದೆವು. ಅಲ್ಲಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸಾಹಿತ್ಯದ ಸ್ವರೂಪ, ಮಹತ್ವ ಮುಂತಾದ ವಿಚಾರಗಳ ಬಗ್ಗೆ ಅಲ್ಲಿನ ಸಾಹಿತಿಗಳಿಂದ ಭಾಷಣ ಮಾಡಿಸುತ್ತಿದ್ದರು. ಹೊಸಬರಿಗೆ, ಯುವಕರಿಗೆ ಅವಕಾಶ ಕೊಡುತ್ತಿದ್ದರು.

3ನೇ ಪುಟಕ್ಕೆ...



ಬಿ.ಡಿ ಜತ್ತಿಯವರೊಂದಿಗೆ ಜಿ. ನಾರಾಯಣ

ಅವೆಲ್ಲ ನಂದೇ ರೂಪಗಳು...

ಮಹಮ್ಮದ್ ಶರೀಫ್


ವರ್ಣಲೋಕದಲ್ಲಿ ಕಿರಣ ಶೇರಖಾನೆ

ಕಲೆ


ಮುಖಕ್ಕೆ ಆಮ್ಲಜನಕದ ಮಾಸ್ಕ್ ಧರಿಸಿಕೊಂಡು ಉಸಿರಾಡಲು ಪರದಾಡುವ ಒಬ್ಬ, ರೆಂಬೆ ಕೊಂಬೆಗೆ ಕೊಡಲಿಯೇಟು ಬಿದ್ದು ಅರೆಜೀವದಂತೆ ನಿಂತ ಮರ, ಎಣ್ಣೆ ಬತ್ತಿಯ ಜ್ಯೋತಿ ಆರಿದ ಲಾಟೀನು ಕೈಯಲ್ಲಿ ಹಿಡಿದ ಇನ್ನೊಬ್ಬ, ಸಮಯದ ಸಮತೋಲನಕ್ಕೆ ಕಿರು ಗಡಿಯಾರ ಹಿಡಿದ ಮತ್ತೊಬ್ಬ, ಎಲ್ಲ ಮುಖಗಳಲ್ಲೂ ವಿಷಾದದ ಛಾಯೆ.... ತಲೆಕೆಳಗಾದ ಭೂಮಂಡಲಕ್ಕೆ ಜೋಡಿಸಿದ ನಳದಲ್ಲಿ ಹನಿ ನೀರು, ಆ ಹನಿಗೆ ಬಾಯ್ದೆರೆದು ಕುಳಿತ ಹಕ್ಕಿ...

'ಪಂಚಭೂತ' ಪರಿಕಲ್ಪನೆಯಲ್ಲಿ ಹುಬ್ಬಳ್ಳಿಯ ಕಲಾವಿದ ಕಿರಣ ಶೇರಖಾನೆ ರಚಿಸಿದ 'ದಿ ಎಲಿಮೆಂಟ್ಸ್ ಆಫ್ ಲೈಫ್' ಎಂಬ ಆಶಯದ ಚಿತ್ರ ಮೇಲ್ನೋಟಕ್ಕೆ ಕಣ್ಣು ಕೀಲಿಸಿಕೊಳ್ಳುವುದು ಹೀಗೆ. ಇದೇ ಚಿತ್ರಕ್ಕೆ ಪ್ರಸಕ್ತ ಸಾಲಿನ ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾದ ಅವರು ಸಂಭ್ರಮದಲ್ಲಿದ್ದಾರೆ.

'ಪಂಚಭೂತಗಳನ್ನು ಅವಲಂಬಿಸಿ ನಾವು ಬದುಕುತ್ತಿದ್ದೇವೆ. ಅವು ಯಾವುದೂ ಇಲ್ಲದಿದ್ದರೆ ಬದುಕು ಅಸಾಧ್ಯ. ಮತ್ತೆ ನಾವು ಪಂಚಭೂತಗಳಲ್ಲೇ ಲೀನವಾಗುತ್ತೇವೆ. ಅವುಗಳ ಸಂರಕ್ಷಣೆ ಅಗತ್ಯ ಎಂಬ ದೃಷ್ಟಿಯಿಂದ ಈ ಚಿತ್ರ ಬರೆದೆ. ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಸಿಕ್ಕಿದ್ದು ತುಂಬಾ ಖುಷಿ ಕೊಟ್ಟಿದೆ' ಎನ್ನುತ್ತಾರೆ ಕಿರಣ ಶೇರಖಾನೆ.

32 ವರ್ಷ ವಯಸ್ಸಿನ ಕಿರಣ ಹತ್ತು ವರ್ಷಗಳಿಂದ ಚಿತ್ರಕಲಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಸಮಕಾಲೀನ ಚಿತ್ರಕಲಾ ಪ್ರಕಾರದಲ್ಲಿ ಆಸಕ್ತಿ ಹೊಂದಿರುವ ಅವರು ತಮ್ಮದೇ ಆದ ಶೈಲಿ ರೂಢಿಸಿಕೊಂಡಿದ್ದಾರೆ. ಅವರ ಕಲಾಕೃತಿಗಳು ಅಭಿವ್ಯಕ್ತಿಸುವ ಪರಿಯೇ ವಿಭಿನ್ನ ಮತ್ತು ವಿಶಿಷ್ಟ. ಅವರಿಗೆ ಎರಡು ವರ್ಷಗಳ ಹಿಂದೆ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಸಂದಿತ್ತು.

ಕಲಾವಿದ ಕಿರಣ ಶೇರಖಾನೆ ರಚಿಸಿದ 'ದಿ ಎಲಿಮೆಂಟ್ಸ್ ಆಫ್ ಲೈಫ್'ಗೆ ಕೇಂದ್ರ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಒಲಿದಿದೆ. ತಮ್ಮನ್ನೇ ತಾವು ಚಿತ್ರಗಳಲ್ಲಿ ಪಡಿಮೂಡಿಸುವ ಪ್ರಯೋಗಕ್ಕೆ ಇಳಿದಿರುವ ಅವರ ಮನಸ್ಸಿನ ಗೆರೆಗಳು ಗಮನ ಸೆಳೆಯುವಂತಿವೆ.


ಕಿರಣ ಶೇರಖಾನೆ

ಮೂರನೇ ವಯಸ್ಸಿಗೆ ಪೋಲಿಯೋ ಪೀಡಿತರಾದ ಕಿರಣ ಅವರ ಬದುಕು ನಿರೀಕ್ಷಿತ ಮಟ್ಟದಲ್ಲಿ ರೂಪುಗೊಳ್ಳಲಿಲ್ಲ. ವರ್ಷಗಳು ಕಳೆದವೇ ಹೊರತು ಅವರ ದೇಹವು ಸಹಜ ಬೆಳವಣಿಗೆ ಕಾಣಲಿಲ್ಲ. ಇನ್ನೊಬ್ಬರ ನೆರವಿಲ್ಲದೇ ಅವರಿಗೆ ಓಡಾಡಲು ಆಗುವುದಿಲ್ಲ. ಅವರಿಗೆ ಸಹೋದರ ರಾಹುಲ ಊರುಗೋಲಾಗಿದ್ದಾರೆ.

'ಅವೆಲ್ಲ ನಂದೇ ರೂಪಗಳು. ನನ್ನ ಭಾವನೆಗಳಿಗೇ ಅಲ್ಲಿ ಬಣ್ಣ ತುಂಬಿರುವೆ' ಎನ್ನುವ ಕಿರಣ ಅವರ ಕಲಾಕೃತಿಗಳಲ್ಲಿ ಮನುಷ್ಯ ಭಿನ್ನವಾಗಿ ಕಾಣುತ್ತಾನೆ. ಅಲ್ಲಿನ ರೇಖೆ ಮತ್ತು ಬಣ್ಣಗಳು ಭಾವನೆಗಳು ವ್ಯಕ್ತಪಡಿಸುವುದರ ಜೊತೆಗೆ ಅಂಗವೈಕಲ್ಯದ ಸವಾಲನ್ನು ಮೆಟ್ಟಿನಿಲ್ಲುವ ಗಟ್ಟಿತನವನ್ನೂ ತೋರಿಸುತ್ತವೆ.

'ಚಿಕ್ಕಪ್ಪ ರಮೇಶ ಶೇರಖಾನೆ ಅವರು ಚಿತ್ರ ಬರೆಯುವುದನ್ನು ನೋಡುತ್ತಿದ್ದೆ. ಅವರು ಫಿಲ್ಮ್ ಡಿಸ್ಟ್ರಿಬ್ಯೂಟರ್ ಆಗಿದ್ರು. ಬ್ಯಾನರ್ ಬರೀತಿದ್ರು. ನಂತರ ನಾನೂ ಚಿತ್ರಕಲೆಯಲ್ಲಿ ಹೆಚ್ಚು ಆಸಕ್ತಿ ತೋರಿದೆ. ಅದೇ ಕ್ಷೇತ್ರದಲ್ಲಿ ಮುಂದುವರಿಯಲು ಚಿಕ್ಕಪ್ಪ ಪ್ರೋತ್ಸಾಹಿಸಿದರು. ಬಳಿಕ ನಾನು ಧಾರವಾಡದ ಸೃಜನಾ ಫೈನ್ ಆರ್ಟ್ಸ್ ಕಾಲೇಜಿನಲ್ಲಿ, ಬಿ.ಎಫ್.ಎ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎಫ್.ಎ ಪದವಿ ಪಡೆದೆ' ಎನ್ನುತ್ತಾರೆ ಅವರು.

ಲ್ಯಾಂಡ್‌ಸ್ಕೇಪ್ ಹಾಗೂ ಸಮಕಾಲೀನ ಚಿತ್ರಕಲೆ ಬಗ್ಗೆ ಹೆಚ್ಚಿನ ಒಲವು ಹೊಂದಿರುವ ಅವರು ಅವರು ತಮ್ಮದೇ ಆದ ಶೈಲಿಗೆ ಒತ್ತು ನೀಡುತ್ತಾರೆ. ಲ್ಯಾಂಡ್‌ಸ್ಕೇಪ್ ಕಲಾಕೃತಿ ರಚಿಸುವುದನ್ನು ನಿಲ್ಲಿಸಿರುವ ಅವರು ಕಲಾಕೃತಿಗಳಲ್ಲಿ ತಮ್ಮ ಭಾವನೆಗಳನ್ನು ಹರಿಬಿಡಲು ಪ್ರಯತ್ನಿಸುತ್ತಾರೆ. ಹೀಗೆ ಮಾಡುವುದೇ ಅವರಿಗೆ ಖುಷಿ.

ಅಕ್ರಿಲಿಕ್ ಬಣ್ಣ ಹಾಗೂ ಚಾರ್‌ಕೋಲ್ ಬಳಸಿ ಕ್ಯಾನ್ವಾಸ್ ಮೇಲೆ ತಮ್ಮದೇ ಪ್ರಪಂಚ ಸೃಷ್ಟಿಸುವ ಶೇರಖಾನೆ, ಗಾಢ ಬಣ್ಣಗಳ ಬಳಕೆಗಿಂತ ಸರಳ ಮಾದರಿಗೆ ಒತ್ತು ನೀಡುತ್ತಾರೆ. ತೆಳು ಬಣ್ಣದಲ್ಲಿಯೇ ಮೂಡುವ ಆಕೃತಿಗಳು ಅವು ಹುಟ್ಟುಹಾಕುವ ಭಾವನೆಗಳಿಂದಲೇ ಗಮನ ಸೆಳೆಯುತ್ತವೆ. ಅವರ ಹಲವು ಕಲಾಕೃತಿಗಳಲ್ಲಿ ವಿಷಾದ, ನೋವಿನ ನೆರಳು ಹೆಚ್ಚು ಕಾಣಿಸುತ್ತವೆ. ಬಣ್ಣ- ಭಾವಗಳ ನಡುವಿನ ತಂತ್ರಗಾರಿಕೆಯೇ ಅವರಿಗೆ ಕಲೆಗಾರಿಕೆ.

'ನನ್ನನ್ನೇ ನಾನು ಕ್ಯಾನ್ವಾಸ್ ಮೇಲೆ ಪ್ರಯೋಗ ಮಾಡುತ್ತೇನೆ. ಕಲಾವಿದ ತನ್ನ ಆಲೋಚನೆ, ಭಾವನೆಗಳನ್ನು ಕಲಾಕೃತಿಗಳಲ್ಲಿ ಅಭಿವ್ಯಕ್ತಗೊಳಿಸಬೇಕು. ಕಲಾಕೃತಿಗಳಲ್ಲಿ ನನ್ನ ಭಾವನೆಗಳು ಇರುತ್ತವೆ. ಅದು ಒಬ್ಬೊಬ್ಬರಿಗೆ ಒಂದೊಂದು ರೀತಿ ಅರ್ಥ ಕೊಡಬಹುದು' ಎನ್ನುತ್ತಾರೆ ಅವರು.

ಬಾಡಿಗೆ ಮನೆಯಲ್ಲೇ ಬದುಕು: ಆರು ವರ್ಷಗಳ ಹಿಂದೆ ತಂದೆಯನ್ನು ಕಳೆದುಕೊಂಡಿರುವ ಕಿರಣ ಅವರು ತಾಯಿ, ತಂಗಿ, ತಮ್ಮನ ಜೊತೆ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ. ಸ್ವಂತ ಮನೆ ಕಟ್ಟಲು ಆರ್ಥಿಕ ಪರಿಸ್ಥಿತಿ ಗಟ್ಟಿಯಾಗಿಲ್ಲ.

'ಬಹಳ ಕಷ್ಟದಿಂದ ಈ ಹಂತಕ್ಕೆ ತಲುಪಿದ್ದೇನೆ. ಕುಟುಂಬದ ಪ್ರೋತ್ಸಾಹ ಇತ್ತು. ಚಿತ್ರಗಳನ್ನು ಮಾರಿ ಸಿಕ್ಕ ಹಣದಲ್ಲಿ ಜೀವನ ಸಾಗುತ್ತದೆ. ಈಗಲೂ ಹಾಗೆ ಕೂಡಿಟ್ಟ ಹಣದಿಂದಲೇ ಬಣ್ಣ, ಕ್ಯಾನ್ವಾಸ್ ಖರೀದಿ ಮಾಡುತ್ತೇನೆ' ಎನ್ನುತ್ತಾರೆ ಕಿರಣ.

ಲಂಡನ್‌ನತ್ತ ಚಿತ್ತ: ಚೆನ್ನೈ, ಹೈದರಾಬಾದ್, ಮುಂಬೈ, ದೆಹಲಿ, ಸಿಂಗಾಪುರ ಮುಂತಾದೆಡೆ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ನೀಡಿರುವ ಅವರಿಗೆ ಗುರುಗಳಾದ ಚಿಕ್ಕಮಠ ಮಾರ್ಗದರ್ಶಿಯಾಗಿದ್ದಾರೆ. ಎಲ್ಲೇ ಚಿತ್ರಕಲಾ ಪ್ರದರ್ಶನವಿದ್ದರೂ ಅವರು ತಕ್ಷಣವೇ ಮಾಹಿತಿ ನೀಡುತ್ತಾರೆ.

ಚೆನ್ನೈನಲ್ಲಿ ಅಂಗವಿಕಲ ಕಲಾವಿದರ ಕಲಾಕೃತಿಗಳ ಪ್ರದರ್ಶನ ನಡೆಯಲಿದೆ. ಅಲ್ಲಿ ಕಲಾಕೃತಿಗಳು ಆಯ್ಕೆಯಾದರೆ, ಲಂಡನ್‌ನಲ್ಲಿ ಕಲಾಕೃತಿಗಳನ್ನು ಪ್ರದರ್ಶಿಸಲು ಅವಕಾಶ ಸಿಗಲಿದೆ. ಅದರ ನಿರೀಕ್ಷೆಯಲ್ಲಿ ಅವರಿದ್ದಾರೆ.

'ಅಂಗವಿಕಲರು ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಕಲಾ ಕ್ಷೇತ್ರಕ್ಕೆ ಬರಬೇಕು.ಇಲ್ಲಿ ಬದುಕು ಕಟ್ಟಿಕೊಳ್ಳಬಹುದು. ಇತರ ಕ್ಷೇತ್ರಗಳಲ್ಲಿ ನಮ್ಮಂಥವರಿಗೆ ಸಮಾಧಾನ, ಸಂತೋಷ ಸಿಗುವುದು ಕಷ್ಟ' ಎಂದು ಹೇಳುವ ಕಿರಣ ಅವರಿಗೆ ಸಾಮಾಜಿಕ ಸ್ಥಿತಿಗತಿ ಬಗ್ಗೆ ಬೇಸರವಿದೆ.

'ಕಲೆ ನನಗೆ ಘನತೆ, ಗೌರವ ತಂದುಕೊಟ್ಟಿತು. ಚಿತ್ರ ಬರೆಯದೇ ಇದ್ದಿದ್ದರೆ ಎಲ್ಲಿರುತ್ತಿದ್ದೆನೋ ಗೊತ್ತಿಲ್ಲ. ಜನ ನನ್ನನ್ನು ಗುರುತಿಸುತ್ತಿರಲಿಲ್ಲ. ಗುರುತು ಗೌರವ, ಬದುಕು ಕೊಟ್ಟ ಕಲೆಗೆ ನಮಸ್ಕಾರ' ಎಂದು ಅವರು ಕೃತಜ್ಞತೆ ಸಲ್ಲಿಸುತ್ತಾರೆ.

ಅವಮಾನ, ಕಡೆಗಣನೆ, ನಿರ್ಲಕ್ಷ್ಯ ಎಲ್ಲವನ್ನೂ ಸಹಿಸಿಕೊಂಡಿರುವ ಕಿರಣ ಶೇರಖಾನೆ ಅವರು ಯಶಸ್ಸಿನ ಉತ್ತುಂಗದಲ್ಲಿದ್ದಾರೆ. ನೋವುಗಳ ಮಧ್ಯೆಯೂ ನಗುವುದನ್ನು ಎಂದಿಗೂ ಮರೆಯದ ಅವರು, 'ಬದುಕಿನಲ್ಲಿ ಎಲ್ಲವೂ ಸಹಜ. ನೋವು ನಲಿವು, ಕಷ್ಟ ಸುಖ ಇದ್ದೇ ಇರುತ್ತವೆ. ಅವು ಎಲ್ಲದರ ಫಲಿತಾಂಶವೇ ಕೇಂದ್ರ ಲಲಿತಕಲಾ ಅಕಾಡೆಮಿ ಅವಾರ್ಡು' ಎಂದು ಹೇಳುತ್ತಾರೆ.

ಪತ್ರಕರ್ತನ ಬದ್ಧತೆಗೆ ಹಿಡಿದ ಕನ್ನಡಿ

ಎಸ್. ದಿವಾಕರ್


ವಿಮರ್ಶೆ

ಎಪ್ಪತ್ತು ವರ್ಷಗಳ ಹಿಂದೆ ಪತ್ರಕರ್ತರನ್ನು ತಯಾರುಮಾಡುವ ಕಾಲೇಜುಗಳಿರಲಿಲ್ಲ. ಪತ್ರಿಕಾವೃತ್ತಿಯನ್ನು ನ್ಯೂಸ್‌ರೂಮುಗಳಲ್ಲಿ, ಮುದ್ರಣ ವಿಭಾಗಗಳಲ್ಲಿ ಕಲಿತುಕೊಳ್ಳಬೇಕಾಗಿತ್ತು. ಕಾರ್ಖಾನೆಗಳಂಥ ಕ್ರಿಯಾಕ್ಷೇತ್ರಗಳಲ್ಲಿ ಸೂಕ್ತ ತರಬೇತಿ ಪಡೆಯುತ್ತಿದ್ದ ಭಾವೀ ಪತ್ರಕರ್ತರು ತಮ್ಮ ವೃತ್ತಿಯ ನಿಯಮ ನಿಲುವುಗಳನ್ನು ಪರಸ್ಪರ ಸಹಕಾರದಿಂದ ರೂಢಿಸಿಕೊಳ್ಳುತ್ತಿದ್ದರು. ಒಂದು ಅವಿಭಕ್ತ ಕುಟುಂಬದಂತಿದ್ದ ಪತ್ರಕರ್ತರು ಸಮಾನ ಜೀವನವನ್ನು ಬದುಕುತ್ತ ತಮ್ಮ ವೃತ್ತಿಯನ್ನಲ್ಲದೆ ಬೇರೇನನ್ನೂ ಯೋಚಿಸುತ್ತಲೇ ಇರಲಿಲ್ಲ ಎನ್ನಬೇಕು. ಆಗ ಆದರ್ಶಪ್ರಾಯರಾಗಿದ್ದವರು ವಾಲ್ಟರ್ ಲಿಪ್‌ಮನ್, ಕಿಂಗ್‌ಸ್ಲೀ ಮಾರ್ಟಿನ್‌ರಂಥ ಪಾಶ್ಚಾತ್ಯರು ಮತ್ತು ಪೊತನ್ ಜೋಸೆಫ್, ರಘುನಾಥ ಐಯರ್, ಫ್ರಾಂಕ್ ಮೊರೇಸ್, ಚಲಪತಿರಾವ್ ಮೊದಲಾದ ನಮ್ಮವರೇ ಪತ್ರಕರ್ತರು. 'ನಾನು ಹಿಂದೂ ರಾಮಯ್ಯ' ಎಂಬ ಈ ಕೃತಿಯ ಲೇಖಕ ಪಿ. ರಾಮಯ್ಯನವರು ಆ ಕಾಲಕ್ಕೆ ಸೇರಿದ ವಿಶಿಷ್ಟ ಪತ್ರಕರ್ತರು. 'ದಿ ಹಿಂದೂ' ಪತ್ರಿಕೆಯ ವರದಿಗಾರರಾಗಿ, ಬ್ಯೂರೋ ಮುಖ್ಯಸ್ಥರಾಗಿ, ಸಂಪಾದಕೀಯ ಪ್ರತಿನಿಧಿಯಾಗಿ, ಡೆಪ್ಯುಟಿ ಎಡಿಟರ್ ಆಗಿ, ಬೆಂಗಳೂರು ಆವೃತ್ತಿಯ ಸ್ಥಾನಿಕ ಸಂಪಾದಕರಾಗಿ ಸುಮಾರು 48 ವರ್ಷ ಕಾರ್ಯನಿರ್ವಹಿಸಿದ ಅವರು 'ದಿ ಹಿಂದೂ' ಪತ್ರಿಕೆಯಲ್ಲಿ ಪ್ರಜ್ಞಾವಂತ ವಾತಾವರಣದಿಂದ ಪ್ರಭಾವಿತನಾದ ನನ್ನಲ್ಲಿ ನನ್ನ ಮುಂದಿನ ವೃತ್ತಿ ಪತ್ರಕರ್ತನಾಗಿಯೇ ಮುಂದುವರಿಯಬೇಕೆನ್ನುವ ನಿರ್ಧಾರಕ್ಕೆ ದೂಡಿತ್ತು. ವೃತ್ತಿ ಒಪ್ಪಿದ ಮೇಲೆ ಅದರಲ್ಲಿ ಸಾರ್ಥಕತೆ ದಕ್ಕಿಸಿಕೊಳ್ಳುವ ನಿರ್ಧಾರ ನನ್ನಲ್ಲಿ ಪ್ರಬಲವಾಯಿತು' ಎಂದಿದ್ದಾರೆ. ಪ್ರಸ್ತುತ ಪುಸ್ತಕದಲ್ಲಿ ರಾಮಯ್ಯನವರು ಪ್ರಜಾಸತ್ತಾತ್ಮಕ ಸಮಾಜದಲ್ಲಿ ನಾಗರಿಕರ ಹಾಗೂ ರಾಜಕಾರಣಿಗಳ ಪಾತ್ರವನ್ನು ಹೇಗೋ ಹಾಗೆ ಸಾರ್ವಜನಿಕರ ಗ್ರಹಣ ಶಕ್ತಿಯನ್ನು, ಅವರ ನಿರೀಕ್ಷೆಗಳನ್ನು ಮತ್ತು ಆ ಸಂಬಂಧ ಕೈಗೊಳ್ಳಬೇಕಾದ ಕ್ರಮಗಳನ್ನು ರೂಪಿಸುವಲ್ಲಿ ಪತ್ರಿಕೆಗಳ ಪಾತ್ರವನ್ನೂ ಪರಿಶೀಲಿಸಿದ್ದಾರೆ.

ಹಿಂದೆಲ್ಲ ಪತ್ರಕರ್ತರಾಗಬಯಸುವವರಿಗೆ ವಿಸ್ತಾರವಾದ ಸಾಂಸ್ಕೃತಿಕ ಹಿನ್ನೆಲೆ ಅಗತ್ಯವಾಗಿತ್ತು. ಅಂತರ್ಜಾಲ ಇಲ್ಲದಿದ್ದ ಆ ಕಾಲದಲ್ಲಿ ವೃತ್ತಿಯ ಅಗತ್ಯಕ್ಕೆ ತಕ್ಕಂತೆ ವಿವಿಧ ಕ್ಷೇತ್ರಗಳ ಸ್ಥೂಲ ಪರಿಚಯವನ್ನು ಪಡೆಯುವುದಕ್ಕಾಗಿ ವಿಪುಲವಾಗಿ ಓದಬೇಕಿತ್ತು. ಪತ್ರಿಕಾವೃತ್ತಿಯನ್ನು ಮನಸಾರೆ ಇಚ್ಛಿಸಿದವರು ಸ್ವಯಂ-ಶಿಕ್ಷಿತರಾಗಿದ್ದು, ಬೇಗ ಬೇಗ ಕಲಿತುಕೊಳ್ಳುತ್ತಿದ್ದರು. ಸಮರ್ಥ ಪತ್ರಕರ್ತನಾಗಿದ್ದವನು ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳ ಬಗೆಗೆ ಅತ್ಯಲ್ಪ ಕಾಲದಲ್ಲಿ ಲೇಖನಗಳನ್ನು ಬರೆಯುತ್ತಿದ್ದ. ಅಂಥ ಅನೇಕ ಸಮರ್ಥರು 'ಪ್ರಜಾವಾಣಿ'ಯಂಥ ಪತ್ರಿಕೆಗಳಲ್ಲಿ ಇದ್ದದ್ದನ್ನು ನಾನೇ ಕಂಡಿದ್ದುಂಟು.

ಒಬ್ಬ ಸಮರ್ಥ ಪತ್ರಕರ್ತ ಒಬ್ಬಅತ್ಯುತ್ತಮ ವರದಿಗಾರನೂ ಆಗಿರುತ್ತಾನೆ ಎಂಬ ಮಾತಿದೆ. ವರದಿಗಾರಿಕೆ ಎಂದರೆ ವಾಸ್ತವಾಂಶವನ್ನು ಅತ್ಯಂತ ಕರಾರುವಾಕ್ಕಾಗಿ, ಕೂಲಂಕಶವಾಗಿ ಪುನರ್ರೂಪಿಸುವ, ಘಟನೆಗಳು ನಿಜಕ್ಕೂ ನಡೆದಂತೆ, ಓದುಗ ಸ್ವತಃ ಆ ಘಟನೆಗಳನ್ನು ಕಣ್ಣಾರೆ ಕಂಡಂತೆ, ಪುನರ್ರಚಿಸುವ ವಿಧಾನ. ರಾಮಯ್ಯನವರು ಹೆಸರಾದದ್ದು ತಮ್ಮ ಬಹುಮುಖ್ಯ ರಾಜಕೀಯ ವರದಿಗಳಿಗಾಗಿ. ಅವರೇ ಹೇಳುವಂತೆ, 'ವರದಿಗಾರ ತನ್ನ ಕಾರ್ಯವನ್ನು ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಕೆಲ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ, ವಿವಿಧ ಮಂತ್ರಿಗಳ ಖಾತೆಗಳು, ಸರ್ಕಾರದ ವಿವಿಧ ಇಲಾಖೆಗಳು, ಸರ್ಕಾರಿ ಸ್ವಾಮ್ಯದ ನಿಗಮ ಮಂಡಳಿಗಳು, ಉದ್ದಿಮೆಗಳು, ಆಡಳಿತ ಯಂತ್ರದ ಕಾರ್ಯನಿರ್ವಹಣೆ, ಅದು ಕೈಗೊಂಡಿರುವ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವ ರೀತಿ, ಇತ್ಯಾದಿಗಳ ಬಗ್ಗೆ ಅರಿವು ಹೊಂದಿರಬೇಕಾಗುತ್ತದೆ. ವರದಿಗಾರನಿಗೆ ರಾಜಕೀಯ, ಆಯವ್ಯಯ, ಸರ್ಕಾರಕ್ಕೆ ಸಂಬಂಧಿಸಿದ ಇತರೆ ಎಲ್ಲಾ ವಿಷಯಗಳ ಅಭ್ಯಾಸ ಅತ್ಯಗತ್ಯ.'

ಇಂಥ ಪೂರ್ವಸಿದ್ಧತೆಯ ಜೊತೆಗೆ ಸಾಮಯಿಕ ಪ್ರಜ್ಞೆ, ವಿಶ್ಲೇಷಣಾ ಪ್ರವೃತ್ತಿ, ಎಂಥ ಪ್ರತಿಬಂಧಕವನ್ನೂ ದಾಟುವ ಜಾಣ್ಮೆ, ಎಲ್ಲವೂ ರಾಮಯ್ಯನವರಲ್ಲಿ ಧಾರಾಳವಾಗಿ ಇತ್ತೆನ್ನುವುದಕ್ಕೆ ಅವರು ವಿಜ್ಞಾನಿ ಸಿ.ವಿ. ರಾಮನ್‌ರ ಮನವೊಲಿಸಿ ಅವರ ಸಂಶೋಧನೆಯನ್ನು ಅವರೇ ವಿವರಿಸುವಂತೆ ಮಾಡಿದ ಪ್ರಸಂಗ, ಫುಟ್‌ಬಾಲ್, ಕ್ರಿಕೆಟ್, ಟೆನಿಸ್ ಮೊದಲಾದ ಕ್ರೀಡಾಪಂದ್ಯಗಳ ವರದಿ, ಮಠಾಧಿಪತಿಗಳ ಸಂದರ್ಶನ, ಇಂದಿರಾಗಾಂಧಿಯವರು ಚಿಕ್ಕಮಗಳೂರು ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ ಸಂದರ್ಭ, ಹೀಗೆ ಹಲವಾರು ಘಟನೆಗಳು ಪುರಾವೆಯಾಗಿವೆ. ಹಾಗೆ ನೋಡಿದರೆ ರಾಮಯ್ಯನವರು ಕರ್ನಾಟಕದ ರಾಜಕೀಯ, ಕೈಗಾರಿಕೆ, ನೀರಾವರಿ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ನಡೆದ ಬೆಳವಣಿಗೆ/ಅಭಿವೃದ್ಧಿಗಳನ್ನು ಪ್ರತ್ಯಕ್ಷ ಕಂಡವರು ಮತ್ತು ಅವುಗಳಿಗೆ ತಮ್ಮ ಬರಹಗಳ ಮೂಲಕ ಪ್ರತಿಕ್ರಿಯಿಸಿದವರು. ದೇವರಾಜ ಅರಸು, ಎಸ್.ಎಂ. ಕೃಷ್ಣ, ಆರ್. ಗುಂಡೂರಾವ್, ಎಸ್. ಆರ್. ಬೊಮ್ಮಾಯಿ, ಬಿ.ಎಸ್. ಯಡಿಯೂರಪ್ಪ, ಜೆ.ಎಚ್. ಪಟೇಲ್ ಮೊದಲಾದ ರಾಜಕಾರಣಿಗಳ ಕಾರ್ಯವೈಖರಿಯನ್ನು ಅವರಷ್ಟು ಸೂಕ್ಷ್ಮವಾಗಿ ಗಮನಿಸಿದವರು ಅಪರೂಪ.



ನಾನು ಹಿಂದೂ ರಾಮಯ್ಯ (ಅರವತ್ತು ವರ್ಷಗಳ ಅನುಭವಕಥನ)
ಲೇ: ಪಿ.ರಾಮಯ್ಯ
ಪ್ರ: ಅಭಿಮಾನಿ ಪಬ್ಲಿಕೇಷನ್ಸ್ ಲಿ.
ಸಂ: 080 2313 2090
ಪು: 312 ₹350


ರಾಮಯ್ಯನವರ ಪ್ರಾಮಾಣಿಕತೆ, ವಸ್ತುನಿಷ್ಠೆ ಎಷ್ಟು ವಿಶ್ವಾಸಾರ್ಹವಾಗಿದ್ದುವೆಂಬುದಕ್ಕೆ ಎರಡು ಪ್ರಸಂಗಗಳು: ಒಂದು ಎಸ್.ಎಂ. ಕೃಷ್ಣ ವಿಧಾನಸಭೆಯ ಸ್ಪೀಕರ್ ಆಗಿದ್ದ ಸಂದರ್ಭ. ಬಂಗಾರಪ್ಪ ಸರ್ಕಾರ ಕಾವೇರಿ ನದಿ ನೀರಿನ ಬಳಕೆಗೆ ಸಂಬಂಧಪಟ್ಟಂತೆ ಒಂದು ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿತು. ಆದರೆ 'ಮಸೂದೆ ಅಂಗೀಕಾರವಾಯಿತು'ಎಂದು ಪ್ರಸಾರ ಮಾಡಿತು ಆಕಾಶವಾಣಿ. ಅದು ಹಾಗೆ ವರದಿ ಮಾಡಿದವರು ತಮ್ಮ ಕೆಲಸ ಕಳೆದುಕೊಳ್ಳಬಹುದಾಗಿದ್ದ ಪ್ರಸಂಗ. ಆಗ ರಾಮಯ್ಯನವರು ಇತರ ಕೆಲವು ಪತ್ರಕರ್ತರೊಡನೆ ಕೃಷ್ಣ ಅವರನ್ನು ಕಂಡು ಆ ಅಚಾತುರ್ಯದ ಬಗ್ಗೆ ಪ್ರಸ್ತಾಪಿಸಿದಾಗ ಅವರು 'ನಾನು ಯಾವ ರೀತಿ ನನ್ನ ನಿರ್ಣಯವನ್ನು ಕೊಡಬೇಕುಎಂದು ನೀವೇ ಬರೆದುಕೊಡಿ ಎಂದರು. ನಾನು ವರದಿಗಾರರ ಜವಾಬ್ದಾರಿಯನ್ನು ಪ್ರಮುಖವಾಗಿ ಪ್ರಸ್ತಾಪಿಸಿ, ಸಭೆಯ ಕಲಾಪಗಳನ್ನು ಯಥಾವತ್ತಾಗಿ ವರದಿ ಮಾಡುವ ಜವಾಬ್ದಾರಿಯನ್ನು ಒತ್ತಿ ಹೇಳುವಂತೆ ಒಂದು ನಿರ್ಣಯದ ಕರಡನ್ನು ಬರೆದು ಕೊಟ್ಟೆ. ಕೃಷ್ಣ ಅವರು ಅದನ್ನೇ ಸಭೆಯಲ್ಲಿ ಓದಿ ವಿವಾದಕ್ಕೆ ತೆರೆ ಎಳೆದರು.'

ಇನ್ನೊಂದು, ಮುಖ್ಯಮಂತ್ರಿಯಾಗಿದ್ದ ಜೆ.ಎಚ್. ಪಟೇಲರನ್ನು ಸಂದರ್ಶಿಸಬೇಕಾದ ಸಂದರ್ಭ. "ಸಂದರ್ಶನವು ನನಗೆ ಬೇಕಾದ ಮಾಹಿತಿ ಇಲ್ಲದೆ ಮುಗಿಯುವ ಶಂಕೆ ಆವರಿಸಿತು... ಆಗ ಮೆಲ್ಲಗೆ, 'ಪಟೇಲರೇ, ನಾನು ಸಂದರ್ಭೋಚಿತವಾದ ಕೆಲ ಪ್ರಶ್ನೆಗಳನ್ನು ರೂಪಿಸಿ ಅವುಗಳಿಗೆ ಉತ್ತರಗಳನ್ನೂ ಸಂಕ್ಷಿಪ್ತವಾಗಿ ಬರೆದಿದ್ದೇನೆ' ಎಂದೆ. 'ಎಲ್ಲಿ? ಓದಿ' ಎಂದರು. ನಾನು ಪ್ರಶ್ನೆ ಮತ್ತು ಉತ್ತರ ಓದುತ್ತಾ ಹೋದೆ... 'ಏನಪ್ಪಾ, ನೀವು ಮಂತ್ರಿಗಳಿಗಿಂತಾ ಚೆನ್ನಾಗಿ ಉತ್ತರಿಸಿದ್ದೀರಿ!' ಎಂದರು."

ಈ ಪುಸ್ತಕಕ್ಕೆ ಹಿಂದೂ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದ ಎನ್. ರಾಮ್ ಅವರ ಆತ್ಮೀಯ ಮುನ್ನುಡಿ ಇದೆ. ಅದರ ಈ ಕೆಲವು ಮಾತುಗಳು ತೀರ ಅರ್ಥಪೂರ್ಣ: 'ಹಿಂದೂ ರಾಮಯ್ಯ ಎಂದೇ ಹೆಸರಾದ ಅವರು ಪ್ರಾಮಾಣಿಕತೆ, ಸ್ವತಂತ್ರ ಪ್ರವೃತ್ತಿ, ವಾಸ್ತವಾಂಶ ಪರ ನಿಲುವಿನ, ವಿಶ್ವಾಸಾರ್ಹ ಪತ್ರಕರ್ತರಾಗಿ ಯಾರೂ ಅಸೂಯೆಪಡುವಂಥ ಸ್ಥಾನವನ್ನು ಗಳಿಸಿದ ರಾಮಯ್ಯನವರು ತಮ್ಮ ವರದಿಗಾರಿಕೆ, ವಿಶ್ಲೇಷಣೆ, ವ್ಯಾಖ್ಯಾನಗಳಿಗಾಗಿ ಸರ್ಕಾರದಲ್ಲಿ, ರಾಜಕೀಯದಲ್ಲಿ, ಸಮಾಜದಲ್ಲಿ ತಮಗಿದ್ದ ಸಂಪರ್ಕಗಳನ್ನು ಉಪಯೋಗಿಸಿಕೊಂಡವರು; ಸರ್ಕಾರದ ನೀತಿ ರೂಪಣೆಗೂ ಸಾರ್ವಜನಿಕ ಜೀವನಕ್ಕೂ ಅನೇಕ ಕೊಡುಗೆಗಳನ್ನು ನೀಡಿದವರು."

ಮೊದಲ ಓದು

ಮುಂಬೈ ಕನ್ನಡ ಲೋಕದಲ್ಲಿ ಒಂದು ಸುತ್ತು



ಮುಂಬಯಿ ಕನ್ನಡ ಲೋಕ
ಲೇ: ಕೆ.ರಘುನಾಥ್
ಪ್ರ: ಜ್ಯೋತಿ ಪ್ರಕಾಶನ
ಸಂ: 9844212231
ಪು: 188 ₹200

ವೃತ್ತಿಯಲ್ಲಿ ಅಧ್ಯಾಪಕರಾಗಿದ್ದ ಲೇಖಕರು ಮುಂಬಯಿ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ನಿವೃತ್ತಿಯಾದ ಬಳಿಕ ಕೈಗೊಂಡ ಆಧುನಿಕ ಕನ್ನಡ ಕಾವ್ಯದಲ್ಲಿ ನಗರ ಪ್ರಜ್ಞೆ ಕುರಿತ ಸಂಶೋಧನೆಯ ಫಲಿತಾಂಶಗಳ ಸಾರವೇ ಈ ಕೃತಿ.


ಸಂಶೋಧನೆ ವೇಳೆ ವಿಶೇಷವಾಗಿ ಮುಂಬಯಿ ಕನ್ನಡ ಕಾವ್ಯವನ್ನು ಲೇಖಕರು ಪರಿಗಣಿಸಿದ್ದಾರೆ. ಕಾಸ್ಮೋಪಾಲಿಟನ್ ನಗರಗಳಲ್ಲಿ ಜನರು ಎದುರಿಸಿದ ಸವಾಲು, ಸಂಘರ್ಷ, ಪರಿಣಾಮ, ಅಪಾಯಗಳನ್ನು ಹಲವು ಬರಹಗಾರರು ತಮ್ಮ ಸೃಜನಶೀಲ ಕೃತಿಗಳ ಮೂಲಕ ಹಿಡಿದಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸಾಹಿತ್ಯದಲ್ಲಿ ನಗರ ಪ್ರಜ್ಞೆಯ ಅಭ್ಯಾಸವೇ ಈ ಕೃತಿ. ಆರಂಭದಲ್ಲಿ ಮುಂಬೈ ನಗರದ ಇತಿಹಾಸದ ಸೂಕ್ಷ್ಮವಾದ ಪದರವನ್ನು ಕಾಣಬಹುದು. ಅಲ್ಲಿನ ಜನಸಂಖ್ಯೆ, ಮುಂಬೈಗೆ ಕನ್ನಡಿಗರ ಆಗಮನ ಮತ್ತು ಅಲ್ಲಿ ನೆಲೆಗೊಂಡ ಇತಿಹಾಸದ ಬಗ್ಗೆಯೂ ವಿವರಣೆ ಇದೆ.

ಮುಂಬೈ ಕನ್ನಡ ಕಾವ್ಯದ ಉಗಮ ಮತ್ತು ವಿಕಾಸ, ಆಧುನಿಕ ಕನ್ನಡ ಕಾವ್ಯದ ಆರಂಭದ ಕುರಿತಾಗಿ ಹಟ್ಟಿಯಂಗಡಿ ನಾರಾಯಣರಾಯರ 'ಆಂಗ್ಲ ಕವಿತಾವಳಿ' ಹಾಗೂ ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತೆ'ಗಳ ನಡುವಿನ ವಾದವನ್ನೂ ಇಲ್ಲಿ ಸೂಕ್ಷ್ಮವಾಗಿ ಉಲ್ಲೇಖಿಸಲಾಗಿದೆ; ಜೊತೆಗೆ ವಿಶ್ಲೇಷಣೆಯೂ ಇದೆ. ಕವಿಗಳಾದ ದಿನಕರ ದೇಸಾಯಿ, ವಿ.ಜಿ.ಭಟ್ಟ, ಗಂಗಾಧರ ಚಿತ್ತಾಲ ಮುಂತಾದವರ ಕಾವ್ಯಗಳ ಉಲ್ಲೇಖವೂ ಇಲ್ಲಿದೆ. ಮುಂಬೈ ಕವಿಗಳ ಕಣ್ಣಲ್ಲಿ ಮುಂಬೈ ಬದುಕಿನ ಸ್ಥೂಲ ಚಿತ್ರಣಗಳನ್ನು ಇಲ್ಲಿ ಕಾಣಬಹುದು. ಉದಾಹರಣೆಯಾಗಿ ಜಯಂತ ಕಾಯ್ಕಿಣಿ ಅವರ ಅವರ 'ಹಳಿಗಳ ಮೇಲೆ' ಕವಿತೆಯನ್ನಿಲ್ಲಿ ಅವರು ನೀಡಿದ್ದಾರೆ.

'ಹಳಿಗಳ ಮೇಲೆ ಕೂತಿದ್ದಾಳೆ ಅವಳು ತುಂಡು
ವಸ್ತ್ರದಲಿ ಕಬ್ಬಿಣದ ಬಾಲ್ದಿಯಿಂದ ನೀರೆರೆಯುತ್ತ ತಲೆಗೆ
ತಿಕ್ಕುತ್ತ ತುಂಡು ಅವಯವ ಸುರಿಯುವ ಮಳೆಯಲ್ಲಿ'

ಅದೇ ರೀತಿ ಅರವಿಂದ ನಾಡಕರ್ಣಿಯವರ 'ಜನ ಜನ ಜನ ಬಂದರೆಷ್ಟೋ ಜನ, ಹೋದರೆಷ್ಟೋ ಜನ', ಸನದಿ ಅವರ 'ಕೆಂಪುದೀಪ' ಹೀಗೆ ಹಲವು ಕವಿಗಳ ಕಾವ್ಯದಲ್ಲಿ ಮುಂಬೈ ಜನಜೀವನವನ್ನು, ವಿಶ್ಲೇಷಣೆಯನ್ನು ಲೇಖಕರು ಕಂಡಿದ್ದಾರೆ. ಕೃತಿಯ ಎರಡನೇ ಭಾಗ 'ಮುಂಬಯಿ ಕನ್ನಡ ದರ್ಶನ'ದಲ್ಲಿ ಮುಂಬೈ ಕನ್ನಡಿಗರು ಪ್ರಕಟಿಸಿದ ವಿವಿಧ ಪ್ರಕಾರಗಳ ಸಾಹಿತ್ಯ ಕೃತಿಗಳ ಕುರಿತಾದ ಬರಹಗಳಿವೆ. ಮುಂಬೈ ಕನ್ನಡ ಸಾಹಿತ್ಯ ಅಧ್ಯಯನಾಸಕ್ತರು ಗಮನಿಸಬಹುದಾದ ಕೃತಿ ಇದಾಗಿದೆ.

ಕೊರೊನಾ ಕಾಲದಿ ಹೇಳಿದ ಕಥೆಗಳು



ಕೃತಿ:ಮಗಳಿಗೆ ಹೇಳಿದ ಕಥೆಗಳು
ಲೇ: ಸಂತೆಬೆನ್ನೂರು ಫೈಜ್ನಟ್ರಾಜ್
ಪ್ರ: ರೇಷು ಪ್ರಕಾಶನ
ಸಂ: 9902935999
ಪು: 80 ₹110

ವೃತ್ತಿಯಲ್ಲಿ ಅಧ್ಯಾಪಕರಾದ ಫೈಜ್ನಟ್ರಾಜ್ 'ಮಗಳಿಗೆ ಹೇಳಿದ ಕಥೆಗಳು' ಎಂಬ ಮಕ್ಕಳ ಕಥೆಗಳ ಗೊಂಚಲು ಹಿಡಿದು ಓದುಗರಿಗಿಂತ ಪುಟ್ಟ ಮಕ್ಕಳಿಗೆ ಮುಖಾಮುಖಿಯಾಗಿದ್ದಾರೆ.

ಕೊರೋನಾ ಲಾಕ್‌ಡೌನ್ ಸಂದರ್ಭದಲ್ಲಿ ಫೈಜ್ನಟ್ರಾಜ್ ತಮ್ಮ ಮಗಳಿಗೆ ಆಗಾಗ್ಗೆ ಕಥೆಗಳನ್ನು ಹೇಳುತ್ತಾ ಬಂದರು. ಆ ಕಥೆಗಳನ್ನೇ ಪುಸ್ತಕವಾಗಿಸಿದ್ದಾರೆ.


ಕಾಡಿನ ನಾಶ, ನದಿ-ಸಮುದ್ರಗಳ ತೀರದ ಗಲೀಜು, ಶುದ್ಧಗಾಳಿ, ಹಸಿರಿನ ಮಹತ್ವ, ಪರೋಪಕಾರ, ಮಾನವೀಯ ಮೌಲ್ಯಗಳ ಬಗ್ಗೆ ಹೊಸ ರೀತಿಯ ಚಿಂತನೆಗಳ ಹರಿವು ಈ ಸಂಕಲದಲ್ಲಿ ಕಾಣಿಸುತ್ತದೆ.

ಪುಣ್ಯಕೋಟಿ ಹಾಡಿನಲ್ಲಿ ಹುಲಿ ಸತ್ತಾಗ 'ಹುಲಿ ಏಕೆ ಸಾಯಬೇಕಿತ್ತು, ಗೋವನ್ನು ಬಿಟ್ಟು ಅದರ ಪಾಡಿಗದು ಕೂಡ ಕಾಡಿನಲ್ಲಿ ಜೀವಿಸಬಹುದಿತ್ತು' ಅನ್ನುವ ಮಗಳ ಪ್ರಶ್ನೆ ಓದುಗನದ್ದೂ ಆದೀತು.

'ಮಕ್ಕಳು ಮತ್ತು ಪರಿಸರ ಹೆಚ್ಚು ಆವರಿಸಿಕೊಂಡಿರುವುದು ಕಥೆಗಳಲ್ಲಿ ಕಾಣುತ್ತದೆ. ನಮ್ಮ ಸುತ್ತಲೂ ನಡೆಯುವ ಸಂಗತಿಗಳನ್ನೇ ಒಂದು ಅರಿವಿನ ಪಯಣವಾಗಿ ಮಕ್ಕಳ ಮುಂದೆ ಇಟ್ಟಿದ್ದಾರೆ ಕಥೆಗಾರರು' ಎಂದು ಮುನ್ನುಡಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮಕ್ಕಳ ಸಾಹಿತಿ ತಮ್ಮಣ್ಣ ಬೀಗಾರ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಮಕ್ಕಳ ಮನದಿ ಸದಾ ಕಾಡುವ ಕಥೆಗಳಿವು. ಕಳೆದುಕೊಳ್ಳುತ್ತಿರುವ ನೈಸರ್ಗಿಕ ಸಂಪತ್ತು, ಉಳಿಯದ ಹೃದಯ ಗೀತೆ, ಸದಾ ಕೃತಕತೆಯ ಸೋಗು, ಮಕ್ಕಳ ಮುಂದೆ ಸಣ್ಣವರಾಗುವ ಹಿರಿಯರು... ಇತ್ಯಾದಿ ಎದೆತಾಕುವ ಕತೆಗಳು ಇಲ್ಲಿ ದಕ್ಕುತ್ತವೆ.

ರಂಗಗಾರುಡಿಯ ನೆನಪಿನಂಗಳ...



ಕೃಷ್ಣಗಾರುಡಿ
ಪ್ರ.ಸಂ:ದ್ವಾರನಕುಂಟೆ ಪಾತಣ್ಣ
ಪ್ರ: ಎಲ್.ಕೃಷ್ಣಪ್ಪ ಅಭಿನಂದನಾ ಸಮಿತಿ
ಸಂ:9980157147
ಪು: 376 ₹380

'ವೃತ್ತಿಯಲ್ಲಿ ಕಲ್ಲು-ಜಲ್ಲಿ, ಇಟ್ಟಿಗೆ-ಮರಳು, ಸಿಮೆಂಟ್‌ನೊಂದಿಗೆ ಒಡನಾಟ ಇಟ್ಟುಕೊಂಡು ಕಲಾತ್ಮಕವಾಗಿ ಮನೆಯನ್ನು ಕಟ್ಟುವ ಕಾಯಕ ಪುರುಷ ಕೃಷ್ಣಪ್ಪ ಅರ್ಥಾತ್ ಕಂಟ್ರಾಕ್ಟರ್' ಹೀಗೆಂದು ರಂಗಕರ್ಮಿ ಎಲ್.ಕೃಷ್ಣಪ್ಪನವರನ್ನು ಪರಿಚಯಿಸುತ್ತಾರೆ ದ್ವಾರನಕುಂಟೆ ಪಾತಣ್ಣ. ರಂಗಕರ್ಮಿ, ನಟ, ನಿರ್ದೇಶಕ ಎಲ್.ಕೃಷ್ಣಪ್ಪನವರ 75ನೇ ವರ್ಷದ ಅಭಿನಂದನಾ ಗ್ರಂಥವೇ 'ಕೃಷ್ಣಗಾರುಡಿಗ'. ದ್ವಾರನಕುಂಟೆ ಪಾತಣ್ಣ ಈ ಗ್ರಂಥದ ಪ್ರಧಾನ ಸಂಪಾದಕರು. ಎಲ್.ಕೃಷ್ಣಪ್ಪ-75ರ ಅಭಿನಂದನಾ ಸಮಿತಿ ಈ ಕೃತಿಯನ್ನು ಪ್ರಕಟಿಸಿದೆ. ಆರ್.ವೆಂಕಟರಾಜು ಕೃತಿಯ ಸಂಪಾದಕರಾಗಿದ್ದಾರೆ. ಡಾ.ಕೆ.ಮರುಳಸಿದ್ದಪ್ಪ, ಪ್ರೊ. ದೊಡ್ಡರಂಗೇಗೌಡರು ಸೇರಿದಂತೆ ಹಲವು ಗಣ್ಯರು ಅಭಿನಂದನಾ ಸಮಿತಿಯಲ್ಲಿದ್ದು, ಕೃತಿಯಲ್ಲಿಯೂ ಕೃಷ್ಣಪ್ಪನವರ ಕುರಿತು ಬರೆದಿದ್ದಾರೆ.

'ರಂಗಭೂಮಿಯಲ್ಲಿ ಅವರೊಂದು 'ದೊಂದಿ' ಇದ್ದಾಗೆ. ನಟನಾಗಿ ಅಭಿನಯಿಸಿದ ಚಿತ್ರಗಳು ಹಲವಾರು. 'ಟಿಪ್ಪು ಸುಲ್ತಾನ್'ನ ಮಗನಾಗಿ, 'ಪ್ರಚಂಡ ರಾವಣ'ನ ಸೇವಕ ಪಾತ್ರ, ನಾಟಕ ನಿರ್ದೇಶಕರಾಗಿ ಎಂ.ಪಿ.ಪ್ರಕಾಶರ 'ಸೂರ್ಯ ಶಿಕಾರಿ', ಲಂಕೇಶರ 'ಕ್ರಾಂತಿ ಬಂತು ಕ್ರಾಂತಿ', ಕುವೆಂಪು ಅವರ 'ಶೂದ್ರ ತಪಸ್ವಿ' ಮುಂತಾದ ಯಶಸ್ವಿ ನಾಟಕಗಳನ್ನು ನಿರ್ದೇಶಿಸಿ ಸಮರ್ಥ ನಿರ್ದೇಶಕರೆನಿಸಿಕೊಂಡಿದ್ದಾರೆ' ಎಂದು ಪ್ರಧಾನ ಸಂಪಾದಕರು ಕೃಷ್ಣಪ್ಪನವರ ಕುರಿತು ಮುನ್ನುಡಿಯಲ್ಲಿ ಬರೆಯುತ್ತಾರೆ.

ಬಿ.ವಿ.ಕಾರಂತರು, ಕೆ.ವಿ.ಸುಬ್ಬಣ್ಣನವರಂತಹ ಹಿರಿಯರ ಶುಭಕಾಮನೆಗಳು ಕೃತಿಯಲ್ಲಿದೆ. ಅನೇಕ ರಂಗಕರ್ಮಿಗಳು ಕೃಷ್ಣಪ್ಪನವರ ಕುರಿತು ಬರೆದ ಬರಹಗಳು, ಆಡಿದ ಮಾತುಗಳು ಇಲ್ಲಿವೆ. ಕೃಷ್ಣಪ್ಪನವರ ಜೀವನಚರಿತ್ರೆಯನ್ನು ಪ್ರೊ.ಎಲ್.ಎನ್.ಮುಕುಂದರಾಜ್ ಅವರು ನಿರೂಪಿಸಿದ್ದಾರೆ. ಮೂರ್ತಿ ದೇರಾಜೆ, ರಾಜಶೇಖರ ಕದಂಬರಂತಹ ಒಡನಾಡಿಗಳು ಅವರ ಜೊತೆಗಿನ ಅನುಭವಗಳನ್ನು ಹಂಚಿಕೊಂಡಿದ್ದಾರೆ. ನಟಿ ಶ್ವೇತಾ ಶ್ರೀವಾಸ್ತವ್, ತಂದೆ ಕೃಷ್ಣಪ್ಪನವರ ಕುರಿತು ಬರೆದ ಬರಹವಿದೆ. 50ಕ್ಕೂ ಹೆಚ್ಚು ರಂಗ ಒಡನಾಡಿಗಳು ಕೃತಿಯಲ್ಲಿ ಅವರ ಕುರಿತು ಬರೆದಿದ್ದಾರೆ. ಚಿತ್ರಾವಳಿಗಳಲ್ಲಿ ಕೃಷ್ಣಪ್ಪನವರ ಅನೇಕ ನಾಟಕದ ದೃಶ್ಯಾವಳಿಗಳಿವೆ. ಒಟ್ಟಿನಲ್ಲಿ ರಂಗಕರ್ಮಿಯ ಕುರಿತು ಸಮಗ್ರ ಚಿತ್ರಣ ಕಟ್ಟಿಕೊಡುವ, ರಂಗಾಸಕ್ತರಿಗೆ ಅಧ್ಯಯನಯೋಗ್ಯವಾದ ಕೃತಿ.

ಏಕೆ 'ಮಲ್ಟಿಟಾಸ್ಕಿಂಗ್' ಭಾರ?

ಒಂದನೇ ಪುಟದಿಂದ...


ಅಡುಗೆ ಮಾಡುತ್ತಾ ಮಾತನಾಡಿದರೆ, ತಿನಿಸು ಮಾಡುತ್ತಿರುವ ಸಂಗತಿಯನ್ನೇ ಫೋನ್‌ನಲ್ಲಿ ಹೇಳಿಬಿಡಬಹುದು. 'ರೂಲ್ ಆ್ಯಕ್ಟಿವೇಷನ್'ಗೆ ಕೆಲವು ಮೈಕ್ರೋಸೆಕೆಂಡ್ ವಿಳಂಬ ಇರುತ್ತದೆ. ಇದರಿಂದಲೇ 'ಮಲ್ಟಿಟಾಸ್ಕಿಂಗ್' ಸಮಸ್ಯಾತ್ಮಕ ಎನಿಸುವುದು.

ಕಾರ್ಪೊರೇಟ್ ವಲಯದಲ್ಲಿ 'ಮಲ್ಟಿಟಾಸ್ಕಿಂಗ್' ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಕೆಲವು ವಿದ್ಯಾರ್ಥಿಗಳೂ ಇದರ ಬಗೆಗೆ ಸಂಶೋಧನೆಗಳನ್ನು ನಡೆಸಿದ್ದಾರೆ. ಏಕಕಾಲದಲ್ಲಿ ಹಲವು ಕೆಲಸಗಳನ್ನು ಮಾಡುವುದರಿಂದ ಸಮಯ ಉಳಿತಾಯವಾಗುತ್ತದೆ ಎನ್ನುವುದೊಂದೇ ಲಾಭ. ಉಳಿದಂತೆ ಬರೀ ನಷ್ಟಗಳೇ ಎನ್ನುವುದು ಆ ಅಧ್ಯಯನಗಳಿಂದ ಸ್ಪಷ್ಟವಾಗಿದೆ. ಒಂದೇ ಹೊತ್ತಿಗೆ ಎರಡು ಮೂರು ಕೆಲಸ ಮಾಡುವುದರಿಂದ ಕುಶಲತೆ ರೂಢಿಸಿಕೊಳ್ಳಲಾಗದು. ಕಲಿಕೆಯಲ್ಲೂ ಹಿಂದುಳಿಯಬೇಕಾಗುತ್ತದೆ. ಒಂದು ನಿರ್ದಿಷ್ಟ ಕೆಲಸವನ್ನು ಮಾಡಿದಾಗ ಕುಶಲತೆಯ ಸುಧಾರಣೆ, ಹೊಸ ವಿಷಯಗಳ ಕಲಿಕೆ ಎರಡೂ ಸಾಧ್ಯ. ಸದಾ ಕಾಲ 'ಮಲ್ಟಿಟಾಸ್ಕಿಂಗ್' ಮಾಡುತ್ತಲೇ ಇದ್ದರೆ ಗಮನ ಕೇಂದ್ರೀಕರಿಸುವ ವಿಷಯದಲ್ಲೂ ಸಮಸ್ಯೆ ಉದ್ಭವವಾಗುತ್ತದೆ. ಬರೆಯಲು, ಕಲಿಯಲು 'ಮಲ್ಟಿಟಾಸ್ಕಿಂಗ್' ತೊಡಕೇ ಆಗಿ ಪರಿಣಮಿಸುತ್ತದೆ.

ಏಕಕಾಲದಲ್ಲಿ ಬಹುಕಾರ್ಯವನ್ನು ದೀರ್ಘಾವಧಿ ಮಾಡುವವರಲ್ಲಿ ಮರೆಗುಳಿತನ ಕಾಣಿಸಿಕೊಳ್ಳುತ್ತದೆ. ಯಾವ ಕೆಲಸದಲ್ಲೂ ಪರಿಣತಿ ಸಾಧಿಸುವುದು ಸಾಧ್ಯವಾಗುವುದಿಲ್ಲ. ಇದು ವೃತ್ತಿ ಬದುಕಿನ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಕಾಲಕ್ರಮೇಣ ಕಚೇರಿಯಲ್ಲಿ ಕೊಟ್ಟ ಕೆಲಸವನ್ನು ಪೂರೈಸುವುದೇ ಕಷ್ಟವಾಗುತ್ತದೆ. ಯಾಕೆಂದರೆ, ಮರೆವು ತೀವ್ರವಾಗುತ್ತಾ ಹೋದಂತೆ ಗುರಿ ನಿಗದಿ ಕಷ್ಟವಾಗುತ್ತದೆ. ಆತಂಕ ಕೂಡ ಕಾಡತೊಡಗುತ್ತದೆ.

ಈ ಕಾಲದಲ್ಲಿ ಸಾಮಾಜಿಕ ಜಾಲತಾಣಗಳು ವ್ಯಾಪಕವಾಗಿವೆ. ಮನೆಯಲ್ಲಿ ಕುಳಿತು ಎಲ್ಲರೂ ಒಟ್ಟಿಗೆ ಊಟ ಮಾಡುವಾಗಲೂ ಮೊಬೈಲ್‌ನಲ್ಲಿ ಏನನ್ನೋ 'ಬ್ರೌಸ್' ಮಾಡುವುದು ಸಹಜ ಎಂಬಂತಾಗಿದೆ. ವಾಯುವಿಹಾರಕ್ಕೋ, ಜಾಗಿಂಗ್‌ಗೋ ಹೋಗುವಾಗ ಕಿವಿಗೆ 'ಹ್ಯಾಂಡ್ಸ್‌ಫ್ರೀ' ಸಿಕ್ಕಿಸಿಕೊಂಡು ಸಂಗೀತ ಕೇಳಲು ಶುರುವಿಟ್ಟುಕೊಳ್ಳುತ್ತೇವೆ. ಹೀಗೆಲ್ಲ ಮಾಡುವುದು ರೂಢಿಯಾಗಿದ್ದರೂ ಸರಿಯಲ್ಲ. ತ್ಯಜಿಸುವುದೇ ನೆಮ್ಮದಿಗೆ ದಾರಿ.

ಮನೋವೈದ್ಯರು ಈಗ ಇಂತಹ ಬಹುಕಾರ್ಯದ ವ್ಯಸನದಿಂದ ಜನರು ಹೊರಬರಬೇಕು ಎಂದೇ ಸೂಚಿಸುತ್ತಾರೆ. ಜಗತ್ತಿನಲ್ಲಿ ಶೇ 47ರಷ್ಟು ಜನ ಏಕಕಾಲದಲ್ಲಿ ಒಂದೇ ಕೆಲಸದ ಮೇಲೆ ಗಮನ ಕೇಂದ್ರೀಕರಿಸದೆ, ಎರಡು ಮೂರು ವಿಷಯಗಳ ಬಗೆಗೆ ತಲೆಕೆಡಿಸಿಕೊಳ್ಳುತ್ತಾರೆ ಎಂದು ಮನೋವೈಜ್ಞಾನಿಕ ಅಧ್ಯಯನಗಳು ತಿಳಿಸಿವೆ. ಮಕ್ಕಳಲ್ಲಿ ಕಲಿಕೆಯ ಸಾಮರ್ಥ್ಯ ಕುಂಠಿತಗೊಳ್ಳುವಲ್ಲಿ ಬಹುಕಾರ್ಯದ ಪರಿಣಾಮ ಇದ್ದೇ ಇರುತ್ತದೆ. ದೊಡ್ಡವರಲ್ಲಿ ಮರೆಗುಳಿತನ ವ್ಯಾಪಕವಾಗುವ ಸಾಧ್ಯತೆಗೂ ಇದೇ ಕಾರಣ. ಹೀಗಾಗಿ ಅಂದುಕೊಂಡ ಕೆಲಸಗಳನ್ನೆಲ್ಲ ವ್ಯವಸ್ಥಿತವಾಗಿ ಯೋಜಿಸಿ ಮಾಡಬೇಕು. ಎಲ್ಲಕ್ಕೂ ಸಮಯ ನಿಗದಿ ಮಾಡಿಕೊಳ್ಳಬೇಕು. ಪುಸ್ತಕ ಓದಬೇಕಿದ್ದರೆ, ಏಕಾಂತಕ್ಕೆ ಮೊರೆಹೋಗಬೇಕು. ಟೀವಿಯಲ್ಲಿ ಹಾಡು ಬರುತ್ತಿರುವೆಡೆ ಕುಳಿತು ಓದಿದರೆ ಅದು ತಲೆಗೆ ಹತ್ತುವುದಿಲ್ಲ. ಸುಮಾರು 40ರಿಂದ 45 ನಿಮಿಷ ಒಂದು ವಿಷಯದ ಮೇಲೆ ನಮಗೆ ಸತತವಾಗಿ ಗಮನ ನೀಡಲು ಸಾಧ್ಯ ಎಂದು ಅಧ್ಯಯನಗಳಿಂದ ತಿಳಿದುಬಂದಿದೆ. ಆ ಅವಧಿಯಲ್ಲಿ ಗಮನ ಕೇಂದ್ರೀಕರಿಸಿ ನಿರ್ದಿಷ್ಟ ಕೆಲಸ ಮಾಡಬೇಕು. ಅದಾದ ಮೇಲೆ ಹತ್ತು ಹದಿನೈದು ನಿಮಿಷ ಮೆದುಳಿಗೆ ವಿಶ್ರಾಂತಿ ನೀಡಬೇಕು.



'ಪೋಮೊಡೋರೊ ಟೆಕ್ನಿಕ್' ಎನ್ನುವುದನ್ನು ಎಷ್ಟೋ ಜನ ಅನುಸರಿಸುತ್ತಿದ್ದಾರೆ. ನಿರ್ದಿಷ್ಟ ಕೆಲಸದ ಮೇಲೆ 20-25 ನಿಮಿಷ ಗಮನ ಕೇಂದ್ರೀಕರಿಸುವುದು, ಅದಾದ ಮೇಲೆ 15-20 ನಿಮಿಷದಷ್ಟು ವಿರಾಮ-ಇದು 'ಪೋಮೊಡೋರೊ ಟೆಕ್ನಿಕ್'. ಹೀಗೆ ಮಾಡುವುದರಿಂದ ಕೆಲಸ ಅಚ್ಚುಕಟ್ಟಾಗಿ ಆಗುತ್ತದೆ. ಕಲಿಕೆ, ಕುಶಲತೆಯೂ ಹೆಚ್ಚಾಗುತ್ತದೆ ಎನ್ನುವುದು ವೈಜ್ಞಾನಿಕವಾಗಿ ರುಜುವಾತಾಗಿರುವ ಸಂಗತಿ.

'ಮಲ್ಟಿಟಾಸ್ಕಿಂಗ್'ನಿಂದ 'ಮೋನೊಟಾಸ್ಕಿಂಗ್'ಗೇ ಮನುಷ್ಯ ಕ್ರಮೇಣ ಮರಳಬೇಕು ಎಂದೇ ವೈದ್ಯವಿಜ್ಞಾನ ಹೇಳುತ್ತಿದೆ. ಹೊರೆ ಹೊರುತ್ತಿರುವ ಮಿದುಳಿನ ಹಿತದ ದೃಷ್ಟಿಯಿಂದ ಇದು ತುಂಬಾ ಮುಖ್ಯ. ಅಷ್ಟೇ ಅಲ್ಲ, ಸೃಜನಶೀಲ ಪ್ರಕ್ರಿಯೆಯಲ್ಲಿ ಒಂದು ಲಯವಿದೆ. ಬಹುಕಾರ್ಯಗಳು ಆ ಲಯವನ್ನು ಕೆಡಿಸುತ್ತವೆ. ಇದನ್ನು ಸೃಜನಶೀಲ ಪ್ರತಿಬಂಧಕ ನಡೆ ಎಂದೇ ಹೇಳಬೇಕಾಗುತ್ತದೆ. ಆ ಲಯ ಕಂಡುಕೊಳ್ಳಲು ಒಂದು ಸಮಯದಲ್ಲಿ ಒಂದೇ ಕೆಲಸ ಮಾಡುವುದು ಲೇಸು.

(ಲೇಖಕರು ಮನೋತಜ್ಞೆ)

ಅಮೆರಿಕದಲ್ಲಿ ಶಿವಾಪುರದ 'ಕರಿಮಾಯಿ'

ಡಾ. ಮೈ.ಶ್ರೀ. ನಟರಾಜ, ವಾಷಿಂಗ್ಟನ್ ಡಿಸಿ

ವಿದೇಶ ವಾಸಿ



ವಾಷಿಂಗ್ಟನ್ ಡಿಸಿಯಲ್ಲಿ ಪ್ರದರ್ಶಿತವಾದ 'ಕರಿಮಾಯಿ' ನಾಟಕದ ದೃಶ್ಯ

ಜೂನ್ 3, 2023, ಅಮೆರಿಕದ ರಾಜಧಾನಿಯಲ್ಲಿ ರಂಗಸಂಭ್ರಮದ ಸುದಿನ. ಕರ್ನಾಟಕದ 'ರಂಗವರ್ತುಲ' ಸಂಸ್ಥೆಯ ಅಮೆರಿಕನ್ ಶಾಖೆ ಆಯೋಜಿಸಿದ ದಿನ. ಕಳೆದ ಐದಾರು ದಶಕಗಳಿಂದ ರಾಜಧಾನಿ ಪ್ರದೇಶದಲ್ಲಿ ಸಕ್ರಿಯರಾಗಿರುವ ಅಮೆರಿಕನ್ನಡಿಗರು, ವೃತ್ತಿಗಾಗಿ ಇಲ್ಲಿಗೆ ಬಂದವರು ಪ್ರವೃತ್ತಿಯಾಗಿ ನಾಟಕ ಕಲೆಯಲ್ಲೂ ತೊಡಗಿ ಹಲವಾರು ನಾಟಕಗಳನ್ನು ಪ್ರದರ್ಶಿಸಿದವರೇನೋ ಹೌದು. ಆದರೆ ಕನ್ನಡ ನಾಟಕ ಕಲೆಗೇ ಮುಡಿಪಾದ ಸಂಘವೊಂದನ್ನು ಕಟ್ಟಿ ನಟನೆ ಮತ್ತು ನಾಟಕ ನಿರ್ಮಾಣವನ್ನು ವೃತ್ತಿಪರತೆಯೆಡೆಗೆ ನಡೆಸುವ ಯತ್ನ ಇಲ್ಲಿಯವರೆಗೆ ನಡೆದೇ ಇರಲಿಲ್ಲ (ಈ ಕೆಲಸ ಹಿಂದೀ, ಮರಾಠಿ ಮುಂತಾದ ಭಾಷೆಗಳಲ್ಲಿ ಪ್ರಾರಂಭವಾಗಿ ದಶಕಗಳೇ ಕಳೆದಿವೆ). ಕರ್ನಾಟಕದಲ್ಲಿ ತರಬೇತಿ ಪಡೆದು ಪಳಗಿರುವ, ಈಗ ವಾಷಿಂಗ್ಟನ್ ನಿವಾಸಿಯಾಗಿರುವ ನಿಶೀಥ್ ಶ್ರೀಧರ್ ಎಂಬ ಪ್ರತಿಭಾವಂತ ನಟ ಮತ್ತು ನಿರ್ದೇಶಕ ಈ ಕೆಲಸವನ್ನು ಮಾಡಿ ಒಂದು ವಿಕ್ರಮವನ್ನೇ ಸಾಧಿಸಿದ್ದಾರೆ.

ಡಾ.ಚಂದ್ರಶೇಖರ ಕಂಬಾರರ ಕಾದಂಬರಿ ಆಧಾರಿತ, ಬಿ.ಜಯಶ್ರೀ ಮತ್ತು ವಿ.ಆರ್.ಪ್ರಭಾ ಅವರಿಂದ ರಂಗಕೃತಿಯಾಗಿ ಅಳವಡಿಕೆಯಾದ 'ಕರಿಮಾಯಿ' ನಾಟಕವನ್ನು ಇಲ್ಲಿನ ಸುಸಜ್ಜಿತ 'ಸ್ಪೆನೆಟಿಕ್ ಥಿಯೇಟರ್'ನಲ್ಲಿ ಅತ್ಯಂತ ಶ್ಲಾಘನೀಯವಾಗಿ ಪ್ರದರ್ಶಿಸಿದರು.

ಜಯಶ್ರೀಯವರ 'ಸ್ಪಂದನ' ರಂಗತಂಡದ ಮೂಲಕ ಅನನ್ಯ ಜೀವಂತಿಕೆ ಪಡೆದು ಈಗಾಗಲೇ ಪ್ರಪಂಚದಾದ್ಯಂತ ಅನೇಕ ಪ್ರದರ್ಶನಗಳನ್ನು ಕಂಡಿರುವ ಈ ನಾಟಕ ಹಲವು ಪದರಗಳಿಂದ ಕೂಡಿದ್ದಾಗಿದೆ. ಹಳತು-ಹೊಸತು, ಸಾಂಪ್ರದಾಯಿಕತೆ-ಆಧುನಿಕತೆ, ಯಥಾಸ್ಥಿತಿ-ಬದಲಾವಣೆ ಇವುಗಳ ಸಂಘರ್ಷದ ಪ್ರತೀಕವಾಗಿದೆ. ಶಿವಾಪುರ ಮತ್ತು ಬೆಳಗಾವಿ ಸಾಂಕೇತಿಕವಾದರೂ ಒಟ್ಟಾರೆಯಾಗಿ ಹಳ್ಳಿ ಮತ್ತು ಪಟ್ಟಣದ ನಡುವಿನ ತಾಕಲಾಟ ತಿಕ್ಕಾಟ ವಿರೋಧಾಭಾಸಗಳು ನಾಟಕದ ಮೂಲವಸ್ತುವಾಗಿ ಮಿಂಚುತ್ತವೆ. ಮಾನವಸಹಜ ಕಾಮನೆಗಳ ಸೋಲು-ಗೆಲುವುಗಳ ನಡುವೆ ನಷ್ಟವಾಗುವ ನಂಬಿಕೆ ಮತ್ತು ಕಳೆದುಹೋಗುವ ಭೋಳೇತನದ ವಿವಿಧ ಮಜಲುಗಳನ್ನು ಈ ನಾಟಕ ಬಹು ಸೂಕ್ಷ್ಮವಾಗಿ ತೆರೆದಿಡುತ್ತದೆ.

ಮೂವತ್ತಕ್ಕೂ ಹೆಚ್ಚು ನಟ-ನಟಿಯರು, ತಾಂತ್ರಿಕವರ್ಗದ ತಂಡದವರು ಹತ್ತಾರು ವಾರಗಳ ನಿರಂತರ ತಾಲೀಮು ನಡೆಸಿ ನಾಟಕವನ್ನು ಅತ್ಯಂತ ಮನೋಜ್ಞವಾಗಿ ಪ್ರದರ್ಶಿಸಿ ಪ್ರಚಂಡ ಮೆಚ್ಚುಗೆ ಗಳಿಸಿದರು. ಈ ತಂಡದ ಪ್ರತಿಯೊಬ್ಬರೂ ಜವಾಬ್ದಾರಿಯುತ ವೃತ್ತಿಗಳಲ್ಲಿರುವವರು. ದಿನನಿತ್ಯದ ವೃತ್ತಿಯ ಕೆಲಸ ಮತ್ತು ಮನೆಗೆಲಸಗಳನ್ನು ಮುಗಿಸಿ ತಾಲೀಮಿಗಾಗಿ ಗಂಟೆಗಟ್ಟಲೆ ಪ್ರಯಾಣ ಮಾಡಬೇಕು. ಬೆಳಕಿನೊಂದ ಹವ್ಯಾಸದ ಬಗ್ಗೆ, ಕೈಗೆತ್ತಿಕೊಂಡ ಕನಸಿನ ಬಗ್ಗೆ ವಿಶೇಷವಾದೊಂದು 'ಪ್ಯಾಷನ್', ಜೊತೆಯಲ್ಲೇ ಎದೆ ತುಂಬಿ ಕನ್ನಡ ಪ್ರೇಮ ಇದ್ದರಷ್ಟೇ ಇದು ಸಾಧ್ಯ. ನಿಶೀಥ್ ತಂಡದವರೆಲ್ಲರಲ್ಲೂ ಈ 'ಪ್ಯಾಷನ್' ಪುಷ್ಕಳವಾಗಿ ಇರುವುದು ನಿಜಕ್ಕೂ ಹೆಮ್ಮೆಯ ವಿಚಾರ.

ನಾಟಕ ಪ್ರಾರಂಭವಾಗಿ ಕೊನೆತನಕ ತದೇಕಚಿತ್ತರಾಗಿ ನೋಡಿ ಅನುಭವಿಸುವ ರಂಗಪ್ರೇಮಿಗಳು ಅಲ್ಲಿ ಸೇರಿದ್ದುದು ಕಲಾವಿದರ ಸ್ಫೂರ್ತಿಗೆ ಕಾರಣವಾಗಿತ್ತು. ರಂಗಮಿತ್ರರೇ ಸೇರಿ ತಯಾರಿಸಿದ್ದ ರಂಗಸಜ್ಜಿಕೆ ಮನಸೆಳೆಯುವಂತಿತ್ತು. ಕರಿಮಾಯಿಯ ಪ್ರತಿಮೆಯಂತೂ ಅದ್ಭುತವಾಗಿತ್ತು! ಕತ್ತಲು-ಬೆಳಕಿನ ಕರಾರುವಾಕ್ಕಾದ ವ್ಯವಸ್ಥೆಯಿಂದ ನಾಟಕದ ನಡೆ ಸುಗಮವಾಗಿತ್ತು. ನಟ-ನಟಿಯರೆಲ್ಲರೂ ಸಂಭಾಷಣೆಯನ್ನು ಅತ್ಯಂತ ಸಮಯಪ್ರಜ್ಞೆಯೊಂದಿಗೆ ಮಂಡಿಸುವಲ್ಲಿ ಸಫಲರಾದರು. ಉತ್ತರ ಕರ್ನಾಟಕದ ಭಾಷೆ ಹೆಚ್ಚಿನ ಪಾತ್ರಧಾರಿಗಳಿಗೆ ಸಹಜವಲ್ಲದ ಕಾರಣ ಕಲೆಯೊಳು, ಮೈಸೂರು-ಕನ್ನಡದೆಡೆಗೆ ವಾಲುತ್ತಿದ್ದರೂ, ಭಾಷೆಯ ಸೊಗಡು ಚೆನ್ನಾಗಿಯೇ ಪ್ರದರ್ಶಿತವಾಯಿತೆನ್ನಬೇಕು. ಮುಖ್ಯ-ಗೌಣ ತಾರತಮ್ಯವಿಲ್ಲದೆ ಪ್ರತಿಯೊಬ್ಬರ ನಟನೆ ಉತ್ತಮ ಮಟ್ಟದ್ದಾಗಿತ್ತು. ನರ್ತನ ಮತ್ತು ಸಂಗೀತ ನಾಟಕದ ಹರಿವಿಗೆ ಸಹಕಾರಿಯಾಗಿತ್ತು (ಪೂರ್ವಮುದ್ರಿತ ಸಂಗೀತದ ಧ್ವನಿಯ ಮಟ್ಟ ಒಂದಿನಿತು ಕಡಿಮೆಯಾಗಿದ್ದರೆ 'ಭಲೇ' ಇತ್ತೇನೋ. ವಿಶೇಷವಾಗಿ ಮಾತಿನ ಧ್ವನಿ ಮಟ್ಟಕ್ಕಿಂತ ಸಂಗೀತದ ಧ್ವನಿ ಮಟ್ಟ ಹೆಚ್ಚಿನಿತು. ಇದು ಸುಲಭವಾಗಿ ಸರಿಪಡಿಸಿಕೊಳ್ಳಬಹುದಾದ ಅಂಶ).

'ಉತ್ಸವ-2023' ಹೆಸರಿನ ಇಡೀ ಕಾರ್ಯಕ್ರಮವನ್ನು ಇಲ್ಲಿನ ಸಂದರ್ಭಕ್ಕೆ ಸರಿಹೊಂದುವಂತೆ ನಡೆಸುವುದರಲ್ಲಿ ಉಪಯೋಗಿಸಿದ್ದ ಪರಿಕಲ್ಪನೆ ಸಮಂಜಸವಾಗಿತ್ತು. ಡೆಟ್ರಾಯಿಟ್‌ನಿಂದ ಇದಕ್ಕೆಂದೇ ಆಗಮಿಸಿದ್ದ ಸುನೀತಾ ಅನಂತಸ್ವಾಮಿಯವರಿಂದ ರಂಗಗೀತೆಗಳು; ಕರ್ನಾಟಕದಿಂದ ವಿಶೇಷ ಆಹ್ವಾನಿತರಾಗಿ ಬಂದಿದ್ದ ರಂಗಪಟು ಮಂಡ್ಯ ರಮೇಶ್ ಅವರಿಗೆ ಸನ್ಮಾನ ಮತ್ತು 'ರಂಗ ಸಿರಿ' ಪ್ರಶಸ್ತಿ ಪ್ರದಾನ; ಅವರ ಪಾಂಡಿತ್ಯಪೂರ್ಣ ಪೀಠಿಕೆ ಮತ್ತು ಉಪಸಂಹಾರ; ಪ್ರೇಕ್ಷಕರೆಲ್ಲರ ಜವಾಬ್ದಾರಿಯುತ ಶಿಸ್ತಿನ ವರ್ತನೆ; ಲಘು ಉಪಾಹಾರವೂ ಸೇರಿದಂತೆ ಒಟ್ಟಾರೆ ಸಮಯಪಾಲನೆ; ಎಲ್ಲವೂ ಸಮರ್ಪಕವಾಗಿ ನಡೆದು ರಂಗವರ್ತುಲದ ಚೊಚ್ಚಲ ಕಾರ್ಯಕ್ರಮ ಒಂದು ಸದಭಿರುಚಿಯ ಕನ್ನಡ ಜಾನಪದ ಸಂಸ್ಕೃತಿಯ ಪ್ರಸ್ತುತಿಯಾಗಿ ರಾಜಧಾನಿ ಪ್ರದೇಶದ ಕನ್ನಡಿಗರ ಮನಃಪಟಲದಲ್ಲಿ ಉಳಿಯುತ್ತದೆ. ಇಂತಹ ಒಂದು ಸಂಸ್ಥೆಯನ್ನು ಕಟ್ಟಿ ಬೆಳೆಸುವ ಕಷ್ಟಕರ ಕೆಲಸವನ್ನು ಕೈಗೆತ್ತಿಕೊಂಡಿರುವ ಉತ್ಸಾಹಿ ರಂಗಕರ್ಮಿಗಳಿಗೆ ಶುಭಹಾರೈಕೆ. ನಿಶೀಥ್ ತಂಡಕ್ಕೆ ಹಾರ್ದಿಕ ಅಭಿನಂದನೆ. ಕನ್ನಡದ ಪ್ರಸಿದ್ಧ ನಾಟಕಗಳನ್ನು ಹೀಗೆಯೇ ಉತ್ಕೃಷ್ಟ ಮಟ್ಟದಲ್ಲಿ ಪ್ರದರ್ಶಿಸಬೇಕೆಂದಿರುವ 'ರಂಗ ವರ್ತುಲ' ಆಶಯಕ್ಕೆ ಒಳಿತಾಗಲಿ.

ನಗೆಗಡಲ 'ವರಲಕ್ಷ್ಮಿ...'

ಶಂಕರ್ ಸಿ.

ರಂಗಭೂಮಿ



ವರಲಕ್ಷ್ಮಿ ಅವಾಂತರ ನಾಟಕದ ದೃಶ್ಯ

ಪಿ.ಡಿ.ಸತೀಶ್ ನಿರ್ದೇಶಿಸಿ, ನಾಗವೇಣಿ ರಂಗನ್ ರಚಿಸಿರುವ ನಗೆನಾಟಕ 'ವರಲಕ್ಷ್ಮಿ ಅವಾಂತರ' ಇತ್ತೀಚೆಗಷ್ಟೆ ಪ್ರದರ್ಶನ ಕಲಾ ಸಂಸ್ಥೆಯಿಂದ ಮೊದಲ ಪ್ರದರ್ಶನ ಕಂಡಿತು. ನೋಡುಗರನ್ನು ನಗೆಗಡಲಲ್ಲಿ ತೇಲಿಸಿದ ಈ ನಾಟಕ ಪ್ರಾಣಿ ಹಾಗೂ ಮನುಷ್ಯನ ಸಂಬಂಧವನ್ನು ಮನದಟ್ಟು ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ. ಪ್ರಾಣಿಗಳು ಮನುಷ್ಯರಂತಿರುವ ಈಗಿನ ಕಾಲದಲ್ಲಿ ಪ್ರಾಣಿಯನ್ನು ನಮ್ಮೊಂದಿಗೆ ಸಹಬಾಳ್ವೆ ನಡೆಸುವಂತೆ ಪ್ರೇರೇಪಿಸುವುದು ಈ ನಾಟಕದ ಉದ್ದೇಶವೆನಿಸಿತು. ಹೊಸ ಪ್ರೇಕ್ಷಕರನ್ನು ಹಾಗೂ ರಂಗಕರ್ಮಿಗಳನ್ನು ಹುಟ್ಟುಹಾಕುವ ಉದ್ದೇಶದೊಂದಿಗೆ ಪ್ರಾರಂಭವಾದ ಪ್ರಕಸಂನ ಈ ಪ್ರಯೋಗ ಹೊಸಬರನ್ನೇ ಒಳಗೊಂಡಿದ್ದು ವಿಶೇಷ.

ಕಥೆಯ ಮುಖ್ಯಪಾತ್ರವಾದ ಶ್ರೀಲಕ್ಷ್ಮಿಗೆ ಮದುವೆಯಾಗಿ ಹಲವು ವರ್ಷಗಳಾದರೂ ಮಕ್ಕಳಾಗಿಲ್ಲ ಎಂಬ ಚಿಂತೆ. ಅವಳ ಗಂಡ ಶೇಷಾದ್ರಿ ಹೆಂಡತಿಯ ಬಗ್ಗೆ ಅತೀವ ಪ್ರೀತಿಯಿರುವ ಯುವಕ. ಪಿಂಟ್ ಪ್ರಸಾದಿ, ಶೇಷಾದ್ರಿಯ ಕಷ್ಟ ಸುಖಗಳಲ್ಲೆಲ್ಲ ಭಾಗಿಯಾಗುವ ಸ್ನೇಹಿತ. ಮಕ್ಕಳಿರದ ಶ್ರೀಲಕ್ಷ್ಮಿಗೆ ತನ್ನ ಪಕ್ಕದ ಮನೆಯ ಮಂಗಳ ಒಂದು ನಾಯಿಮರಿಯನ್ನು ತಂದುಕೊಟ್ಟಾಗ ಶುರುವಾಗುವುದೇ ಈ ನಾಟಕದಲ್ಲಿನ ಅವಾಂತರ. ಆ ನಾಯಿಗೆ ವರಲಕ್ಷ್ಮಿ ಎಂದು ಹೆಸರಿಟ್ಟು ತನ್ನ ಮಗುವಿನಂತೆ ನೋಡಿಕೊಳ್ಳುವ ಶ್ರೀಲಕ್ಷ್ಮಿ ತನ್ನ ಗಂಡನ ಪಾಲಿನ ಪ್ರೀತಿಯನ್ನು ನಾಯಿಗೆ ಕೊಡಲಾರಂಭಿಸಿದಾಗ ಗಂಡ ಶೇಷಾದ್ರಿ ತನ್ನ ಸ್ನೇಹಿತ ಪಿಂಟ್ ಪ್ರಸಾದಿಯ ಐಡಿಯಾದಿಂದ ಹೇಗೆ ಎಲ್ಲವನ್ನು ನಿಭಾಯಿಸಿ ತನ್ನ ಹೆಂಡತಿಯ ಪ್ರೀತಿಯನ್ನು ಗಳಿಸುತ್ತಾನೆ ಎಂಬುದು ಕಥಾವಸ್ತು.

ಮರಿಯಾಗಿ ಬಂದ ನಾಯಿಯು ಸ್ವಲ್ಪ ದೊಡ್ಡದಾದಮೇಲೆ ನಾಯಿಯನ್ನು ಮನುಷ್ಯನ ರೀತಿಯಲ್ಲಿ ತೋರಿಸುವ ನಿರ್ದೇಶಕರ ಪ್ರಯೋಗ ಹಲವು ಶ್ವಾನಪ್ರಿಯರಿಗೆ ಮೆಚ್ಚುಗೆಯ ವಿಷಯವಾಗಿದ್ದು ಸತ್ಯ. ಇತ್ತೀಚೆಗೆ ಹಲವು ರೀತಿಯಲ್ಲಿ ಜನಮನ್ನಣೆ ಪಡೆಯುತ್ತಿರುವ ಸ್ಟಾಂಡಪ್ ಕಾಮೆಡಿಯನ್ನು ನಾಟಕದಲ್ಲಿ ಅಳವಡಿಸಿರುವ ರೀತಿಯು ಹೊಸತನದಿಂದ ಕೂಡಿತ್ತು. ಎಲ್ಲರ ನಟನೆಯೂ ಉತ್ತಮವಾಗಿದ್ದು, ಅಲ್ಲಲ್ಲಿ ಬಳಸಿರುವ ಸಿನಿಮಾ ಸಂಗೀತ ಹಾಗೂ ಮಾತುಗಳಿಗೆ ಪ್ರೇಕ್ಷಕರಿಂದ ಚಪ್ಪಾಳೆ ಲಭಿಸಿತು. ಟಿವಿಯಲ್ಲಿ ಬರುವ ಅಂಡಾಂಡ ಗುರೂಜಿ, ಬಾಸ್ ಜೊತೆ ಶೇಷಾದ್ರಿಯ ಮಾತು, ತಾಯಿಯ ಮುಂದೆ ನಾಯಿಗೆ ಸಿಕ್ಕ ಪ್ರೀತಿ ತನಗೆ ಸಿಗಲಿಲ್ಲವೆಂಬ ದೃಶ್ಯ ಮನೆ ಮನೆಯಲ್ಲೂ ನಡೆಯುವ ಸನ್ನಿವೇಶಗಳಾಗಿದ್ದು, ಪ್ರೇಕ್ಷಕರ ಮನಗೆಲ್ಲುವಂತಿತ್ತು. ಬೆಳಕಿನಲ್ಲಿ ವಿಜಯ್ ಕುಮಾರ್ ಪಾಂಡವಪುರ ಹೊಸತನ ತೋರಿಸಿ ರಂಗದಲ್ಲಿ ರಂಜನೆಗೆ ಸಹಾಯಕವಾಗಿದ್ದಾರೆ.

ಹಲವು ವರ್ಷಗಳ ನಂತರ ಕೇವಲ ಹೊಸ ಹವ್ಯಾಸಿ ಪ್ರತಿಭೆಗಳನ್ನು ರಂಗದಮೇಲೆ ಬರಲು ಸಜ್ಜುಗೊಳಿಸಿದ ಪ್ರಕಸಂನ ಪ್ರಯತ್ನ ಫಲಕಾರಿಯಾಗಿದೆ. ರೂಪಶ್ರೀ ರೋಹಿತ, ಸತೀಶ್, ಅರ್ಜುನ್, ಗುರು, ಚೈತ್ರ, ರಚನಾ, ಲೀಲಾವತಿ, ವಿನೋದ್ ಇತ್ಯಾದಿ ಹೊಸಬರು ಮೊದಲ ಸಾಲಿನಲ್ಲಿದ್ದರೆ, ರೂಪಾ ಕೋಮರ್ಲಾ, ಶ್ರೀಹರಿ, ಚೇತನ್‌ರಂಥ ನುರಿತ ಕಲಾವಿದರೂ ಇರುವ ತಾರಾಗಣ ತಿಳಿಯಾದ ಹಾಸ್ಯವನ್ನು ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಯಿತು. ನಾಟಕದ ಮೊದಲಿನಲ್ಲಿ ಬರುವ ಸ್ಟ್ಯಾಂಡಪ್ ಕಾಮಿಡಿ ತುಣುಕುಗಳು ಸ್ವಲ್ಪ ಮೊಟುಕುಗೊಳ್ಳಬಹುದಿತ್ತು. ನಗೆ ನಾಟಕವಾದ್ದರಿಂದ ಕಥೆಯ ಕೆಲವು ಲಾಜಿಕ್ ಬದಿಗಿಟ್ಟು ನಗುವಿಗೆ ಪ್ರಾಮುಖ್ಯ ನೀಡಲಾಗಿದೆ. ಒಟ್ಟಾರೆ ಒಂದು ಕಾಲು ಘಂಟೆಯ ಎಲ್ಲವನ್ನು ಮರೆತು ನಕ್ಕು ನಲಿವುದು ಖಚಿತ.

'ಪಿಂಕಿ ಎಲ್ಲಿ' ಎಂದು...

ಒಂದನೇ ಪುಟದಿಂದ...

ತನ್ನ ಅಪ್ಪನಿಗೆ ಹೊಸ ಶೂ ಕೊಡಿಸು ಎಂದು ಕೇಳಲು ಮುಜುಗರ ಪಡುವ ಅಣ್ಣ, ತನ್ನ ತಂಗಿಯ ಶೂಸನ್ನೇ ಎರವಲು ಪಡೆದು ತನ್ನ ಶಾಲೆಗೆ ಹೋಗುತ್ತಿರುತ್ತಾನೆ. ಒಂದು ದಿನ ಅದನ್ನು ಯಾರೋ ಕದ್ದುಬಿಡುತ್ತಾರೆ. ಅದನ್ನು ಹುಡುಕಿಕೊಂಡು ಹೊರಡುತ್ತಾನೆ. ಕಡೆಗೆ ಓಡುವ ಸ್ಪರ್ಧೆಯಲ್ಲಿ ವಿಜೇತರಿಗೆ ಶೂಗಳೂ ಬಹುಮಾನದ ಪಟ್ಟಿಯಲ್ಲಿ ಇರುವುದನ್ನು ಕಂಡು ಅದರಲ್ಲಿ ಪಾಲ್ಗೊಳ್ಳುತ್ತಾನೆ. ದುರದೃಷ್ಟ ಎಂದರೆ ಅವನು ಮೊದಲಿಗನಾಗಿಬಿಡುತ್ತಾನೆ. ಆದರೆ ಅವನು ಬಯಸಿದ ಬಹುಮಾನವಾದ ಶೂ ಮೂರನೇ ಬಹುಮಾನದವರಿಗೆ ನಿಗದಿಯಾಗಿರುತ್ತದೆ. ಶೂಗಿಂತ ಹೆಚ್ಚಿನ ಮೌಲ್ಯದ ಮೊದಲ ಬಹುಮಾನ ಪಡೆದರೂ ಅವನಿಗೆ ಸಮಾಧಾನವಿಲ್ಲ. ಯಾಕೆಂದರೆ ಅವನು ಬಯಸಿದ್ದು ತಾನು ಕಳೆದ ತನ್ನ ತಂಗಿಯ ಶೂಗಳನ್ನು ಮರಳಿಸಬೇಕು ಎಂಬ ಮುಗ್ಧ ಬೇಡಿಕೆ ಅಷ್ಟೆ. (ಇದು ನಮ್ಮಲ್ಲಿನ ಮರ ಕಡಿಯುವವನ ಕತೆಯನ್ನು ನೆನಪಿಸುತ್ತದೆ. ಚಿನ್ನ, ಬೆಳ್ಳಿ ಕೊಡಲಿಗಳನ್ನು ಜಲದೇವತೆ ಕೊಟ್ಟರೂ ನಿರಾಕರಿಸಿ, ತನ್ನ ಮಾಮೂಲು ಲೋಹದ ಕೊಡಲಿಯೇ ಅವನು ಸಾಕೆಂದ ಕತೆ ಅದು.)

'ಚಿಲ್ಡ್ರನ್ ಆಫ್ ಹೆವೆನ್' ಮೇಲೂ ಹಳೆಯ ಇಟಾಲಿಯನ್ ಸಿನಿಮಾ ನಿರ್ದೇಶಕ ವಿಟ್ಟೋರಿಯಾನ 'ಬೈಸಿಕಲ್ ಥೀವ್ಸ್' ಸಿನಿಮಾದ ಪ್ರಭಾವ ದಟ್ಟವಾಗಿ ಇದೆ. ಅಲ್ಲಿ ಅವನು ಕಳೆದುಹೋದ ತನ್ನ ಬೈಸೈಕಲನ್ನು ಹುಡುಕಿಕೊಂಡು ಹೊರಟರೆ, ಇಲ್ಲಿ ಬಾಲಕ ಕಳೆದುಹೋದ ಶೂನ ಬೆನ್ನತ್ತಿ ಹೋಗುತ್ತಾನೆ!

ಇಷ್ಟೆಲ್ಲ ಆಲೋಚಿಸುವಂತೆ ಮಾಡಿದ್ದು ಕಳೆದ ವಾರವಷ್ಟೆ ಚಿತ್ರಮಂದಿರಗಳಲ್ಲಿ ಬಿಡುಗಡೆಯಾದ ಪೃಥ್ವಿ ಕೊಣನೂರು ನಿರ್ದೇಶನದ 'ಪಿಂಕಿ ಎಲ್ಲಿ?' ಎಂಬ ಚಿತ್ರ. ಇದರಲ್ಲೂ ನಾವು ಹಿಂದಿನ ಚಿತ್ರಗಳಲ್ಲಿ ಚರ್ಚಿಸಿದಂತೆ 'ಕಳೆದುಹೋದ ವಸ್ತುವನ್ನು ಹುಡುಕುತ್ತ ಸಾಗುವ' ಒಂದು ಸಿದ್ಧ ಮಾದರಿಯ ಕಥಾವಸ್ತುವಿದೆ. 'ಬೈಸಿಕಲ್ ಥೀವ್ಸ್'ನಲ್ಲಿ ಕಳೆದುಹೋದ ಬೈಸಿಕಲ್, ಚಿಲ್ಡ್ರನ್ ಆಫ್ ಹೆವನ್‌ನಲ್ಲಿ ಕಳೆದುಹೋದ ಶೂಸು, ಮತ್ತು ಇಲ್ಲಿ ಕಳೆದು ಹೋದ ಕೂಸು ಪಿಂಕಿಯನ್ನು ಹುಡುಕುವ ಪ್ರಕ್ರಿಯೆಯಲ್ಲಿ ಇಲ್ಲಿನ ಎಲ್ಲಾ ಪಾತ್ರಗಳೂ ತೊಡಗಿಕೊಳ್ಳುತ್ತವೆ. ಇಂತಹ ಸಿದ್ಧ ಮಾದರಿಯ ಕಥಾಹಂದರವನ್ನು ಹಿನ್ನೆಲೆಯಾಗಿ ಇಟ್ಟುಕೊಂಡಿದ್ದರೂ ಇಲ್ಲಿ ಹಲವು ಸೂಕ್ಷ್ಮ ಜಗತ್ತುಗಳನ್ನು ಪೃಥ್ವಿ ತೋರಿಸುತ್ತ ಹೋಗುತ್ತಾರೆ. ಮಧ್ಯಮ ವರ್ಗದ ದುಡಿಯುವ ವರ್ಗದ ತಾಯಿಯೊಬ್ಬಳು ಮನೆಗೆಲಸದವಳ ಸುಪರ್ದಿಗೆ ಮಗುವನ್ನು ಒಪ್ಪಿಸಿ ಕೆಲಸಕ್ಕೆ ತೆರಳಿದ ನಂತರ ಆಗುವ ಅಚಾತುರ್ಯದಿಂದ ಆ ಮಗು ಕಾಣೆಯಾಗುತ್ತದೆ. ಅದನ್ನು ಕದ್ದವರು ಯಾರು? ಅದು ಎಲ್ಲೆಲ್ಲಿ ಹೋಗಿ ಮುಟ್ಟುತ್ತದೆ, ಅದರಿಂದ ಯಾರ್ಯಾರು ಎಂತೆಂಥವರು ಎಂಬ ಸತ್ಯಗಳು, ಆಯಾ ಪಾತ್ರಗಳ ಒಳಮುಖಗಳ ಅನಾವರಣವಾಗುತ್ತ ಹೋಗುತ್ತದೆ. ಪೋಲೀಸ್ ವ್ಯವಸ್ಥೆ, ಮಕ್ಕಳ ಹಿತರಕ್ಷಣಾ ಸಂಸ್ಥೆ ಮೊದಲಾದವುಗಳೂ ಇದರಲ್ಲಿ ಮಧ್ಯಪ್ರವೇಶಿಸುತ್ತವೆ.

ನಿಜಕ್ಕೂ ಈ ಎಲ್ಲಾ ಸೂಕ್ಷ್ಮಗಳನ್ನೂ ಪೃಥ್ವಿ ಬಹಳ ಪರಿಣಾಮಕಾರಿಯಾಗಿ ತೆರೆಮೇಲೆ ತಂದಿದ್ದಾರೆ. ಇಡೀ ಸಿನಿಮಾದಲ್ಲಿ ಮಗು ಎಂಬುದು ಒಂದು ಶಕ್ತ ಪ್ರತಿಮೆಯಾಗಿ ನೆಲೆನಿಂತುಬಿಟ್ಟಿದೆ. ಮೊದಲಿಗೆ ಒಂದು ಸಣ್ಣ ಅಳು ಬಿಟ್ಟರೆ ಉಳಿದಂತೆ ಚಿತ್ರದ ಮೊದಲಿನಿಂದ ಕಡೆಯವರೆಗೂ ಮಗುವಿನ ಒಂದೇ ಒಂದು ಸದ್ದೂ ಕೇಳುವುದಿಲ್ಲ. ಯಾಕೆಂದರೆ ಅದಕ್ಕೆ ಅಮಲು ಹತ್ತಿಸಿ ಮಲಗಿಸಲಾಗಿದೆ! ಮಗು ಎಂದರೇನೇ ಮುಗ್ಧತೆಯ ಪ್ರತೀಕ. ಆದರೆ ಆ ಮುಗ್ಧತೆಯನ್ನು ಮಲಗಿಸಲಾಗಿದೆ. ಅದು ಮಲಗಿದ ನಂತರ ನಮ್ಮಲ್ಲಿ ತಾಂಡವವಾಡುವುದು ಬರೀ ಸ್ವಾರ್ಥ, ಪರನಿಂದೆ, ಅನುಮಾನ, ಶಂಕೆ, ಕ್ರೋಧ, ದುಃಖ ಇಂತಹ ತಾಮಸ ಗುಣಗಳೇ. ಅದನ್ನೇ ಈ ಸಿನಿಮಾ ಸೂಚಿಸುತ್ತ ಹೋಗುತ್ತದೆ.

ಈ ಚಿತ್ರದ ಕಡೆಯ ಭಾಗವು ಮತ್ತೊಬ್ಬ ಹೆಸರಾಂತ ಇರಾನಿಯನ್ ಚಿತ್ರ ನಿರ್ದೇಶಕ ಅಸ್ಗರ್ ಫರಾದಿಯ ಆಸ್ಕರ್ ವಿಜೇತ ಚಿತ್ರವಾದ 'ಎ ಸೆಪರೇಶನ್'ನ ಕಡೆಯ ಭಾಗವನ್ನು ನೆನಪಿಸುವಂತಿದೆ. ಅಲ್ಲೂ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿರುವ ದಂಪತಿಗಳು ಕುಟುಂಬ ನ್ಯಾಯಾಲಯದಲ್ಲಿ ತಮ್ಮ ತಮ್ಮ ವಾದವನ್ನು ಮಂಡಿಸುತ್ತಾರೆ. ಕಡೆಗೆ ಕೋರ್ಟು ಅವರಿಬ್ಬರಿಗೆ ಹುಟ್ಟಿದ ಮಗುವನ್ನು ಮಾತನಾಡಿಸುತ್ತದೆ. ಅದು ಆಡುವ ಮಾತು ನಿಜಕ್ಕೂ ಎಲ್ಲರ ಹೃದಯವನ್ನೂ ಆರ್ದ್ರಗೊಳಿಸಿಬಿಡುತ್ತದೆ. ಅದೇ ಬಗೆಯ ದೃಶ್ಯವನ್ನು ಅಥವಾ ಅದರಿಂದ ಸ್ಫೂರ್ತಿಗೊಂಡು ಇಲ್ಲೂ ಮಕ್ಕಳ ಹಿತರಕ್ಷಣಾ ಮಂಡಳಿ ಮಗುವಿನ ತಂದೆ ತಾಯಿಗಳನ್ನು ವಿಚಾರಣೆ ನಡೆಸುವ ಸಂದರ್ಭವು ಬಹಳ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಇಡೀ ಚಿತ್ರದಲ್ಲಿ ಅತಿ ಹೆಚ್ಚು ನಾಟಕೀಯತೆ ಇರುವುದೇ ಈ ಭಾಗದಲ್ಲಿ. ಇಲ್ಲೇ ಅನೇಕ ಪಾತ್ರಗಳ ಮತ್ತೊಂದು ಮುಖಗಳ ಅನಾವರಣವಾಗುವುದು.

ಇನ್ನು ನಿರ್ದೇಶಕ ಪೃಥ್ವಿಯವರ ಮತ್ತೊಂದು ವಿಧಾನ ಎಂದರೆ ವೃತ್ತಿಪರ ನಟರು ಹಾಗೂ ನಟರಲ್ಲದವರನ್ನು ನಟನೆಗೆ ಬಳಸಿಕೊಳ್ಳುವುದು. ಇಲ್ಲಿ ಎಲ್ಲರೂ ಬಹಳ ಸಹಜವಾಗಿ ನಮ್ಮ ಅಕ್ಕಪಕ್ಕದ ಪಾತ್ರಗಳಂತೆಯೇ ನಟಿಸಿದ್ದಾರೆ. ಅಕ್ಷತಾ ಪಾಂಡವಪುರ, ದೀಪಕ್ ಸುಬ್ರಹ್ಮಣ್ಯ, ಅನೂಪ್ ಶೂನ್ಯ ಎಂಬ ವೃತ್ತಿಪರ ನಟರ ಜೊತೆಗೆ ಗುಂಜಲಮ್ಮ, ಸುಭದ್ರ, ಲಕ್ಷ್ಮಿ ಮೊದಲಾದ ನಟರಲ್ಲದ ನಟನಟಿಯರ ಅಭಿನಯವೂ ಸಾಕಷ್ಟು ಪ್ರಬುದ್ಧವಾಗಿದೆ. ಅದರಲ್ಲೂ ಮಗುವನ್ನು ಕದ್ದೊಯ್ಯುವ ದಂಪತಿಗಳ ಅಭಿನಯ ಬಹಳಷ್ಟು ಚೆನ್ನಾಗಿದೆ. ಸ್ವತಃ ನಿರ್ದೇಶಕರೇ ಒಂದು ಅತಿಥಿ ಪಾತ್ರದಲ್ಲಿ ಬಂದು ಚನ್ನಾಗಿ ನಿರ್ವಹಿಸಿ ಹೋಗುತ್ತಾರೆ.

ಮೊದಲಿನಿಂದಲೂ ನನಗೆ ಈ ಬಗೆಯ non actors ಕೈಲಿ ನಟನೆ ಮಾಡಿಸುವ ವಿಧಾನದ ಬಗ್ಗೆ ಸ್ವಲ್ಪ ಅಸಮಾಧಾನ ಇತ್ತು ಅಥವಾ ಅದು ಒಂದು ರೀತಿಯಲ್ಲಿ ಕಲಾಧರ್ಮಕ್ಕೆ ಹೇಗೆ ಉಚಿತ? ಎಂಬ ಅಭಿಪ್ರಾಯವಿತ್ತು. ಅಂದರೆ ಕಲಾವಿದನೊಬ್ಬನಿಗೆ ತಾನು ತಾನಲ್ಲದೇ ಇರುವ ಒಂದು ಪಾತ್ರವನ್ನು ನಟಿಸುತ್ತಿದ್ದೇನೆ ಎಂಬ ಅರಿವು ಮುಖ್ಯ. ಅದೇ ಕಲೆಯ ಒಂದು ಮೂಲಧಾರವಲ್ಲವೇ? ಉದಾಹರಣೆಗೆ ಮಗುವೊಂದು ಬರೆಯುವ ಚಿತ್ರ ಕಲೆ ಅಂತಾಗುವುದಿಲ್ಲ. ಯಾಕೆಂದರೆ ಅದು ಆ ಚಿತ್ರವನ್ನು ಕಲಾಕೃತಿ ಎಂಬ ಪ್ರಜ್ಞೆಯಿಂದ ಬರೆಯುತ್ತಿಲ್ಲ. ಹಾಗೆಯೇ ನಟನೊಬ್ಬ ನಟನೆಯ ಪ್ರಜ್ಞೆ ಇಲ್ಲದೆ ಸುಮ್ಮನೆ ತನ್ನ ಬದುಕನ್ನು ಬದುಕಿ ಅದನ್ನು ನಾವು ಸಿನಿಮಾದ ಚೌಕಟ್ಟಿನಲ್ಲಿ ತಂದು ಅದನ್ನು ನಟನೆ ಎಂದು ಕರೆಯಲು ಸಾಧ್ಯವೇ? ನಿಜ ಬದುಕಿನ ಪಾತ್ರವೇ ತೆರೆಯ ಮೇಲೆ ಅದೇ ಪಾತ್ರವನ್ನು ಬದುಕುವಂತೆ ಮಾಡಿ ನಾವು ಅದನ್ನು ಸೆರೆಹಿಡಿದು ಅದನ್ನು ಕಲೆಯ ಆವರಣದೊಳಗೆ ತಂದು ತೋರಿಸಿದಾಗ ಉಂಟಾಗುವ ರಸಾನುಭವ ಎಂಥದ್ದು? ಬರೀ ಕೃತಕ ಕಲಾಕೃತಿಗಳೇ ಬರುತ್ತಿರುವಾಗ ಅದನ್ನು ಮುರಿಯುವ ಸಲುವಾಗಿ ಆಗೊಮ್ಮೆ ಈಗೊಮ್ಮೆ ಈ ಬಗೆಯ ಪ್ರಯೋಗ ಮಾಡಿದರೆ ಅದೇನೂ ಅನುಚಿತವೆನಿಸುವುದಿಲ್ಲ. ಆದರೆ ಅದನ್ನೇ ಒಂದು ಕಲಾಕಾಣ್ಕೆಯ ಮಾರ್ಗ ಎಂದು ಮಾಡಿಕೊಂಡರೆ ಹೇಗೆ? ಹೀಗೆ ಹಲವಾರು ಪ್ರಶ್ನೆಗಳಿಗೆ ಇನ್ನೂ ಸರಿಯಾದ ಉತ್ತರ ಕಂಡುಕೊಳ್ಳಬೇಕಿದೆ.....

ಗಿರೀಶ ಕಾಸವರವಳ್ಳಿಯವರ ಬಹುತೇಕ ಚಿತ್ರಗಳನ್ನು ನೋಡಿದರೆ ಅಲ್ಲಿ ಎಲ್ಲೂ ಅವರು ನಟರಲ್ಲದೇ ಇರುವವರನ್ನು ಮುಖ್ಯಪಾತ್ರಗಳಲ್ಲಿ ಬಳಸಿಲ್ಲ. ನಾನ್ ಆಕ್ಟರ್‌ಗಳನ್ನು ಕೇವಲ ಗುಂಪುದೃಶ್ಯಗಳಲ್ಲಿ ಬಳಸಿರಬಹುದು ಬಿಟ್ಟರೆ ಮುಖ್ಯಪಾತ್ರಗಳಲ್ಲಿ ಬಳಸಿಲ್ಲ ಎಂಬುದು ನನ್ನ ನಂಬಿಕೆ. ಹಾಗಾಗಿ ಸಿನಿಮಾದ ಚೌಕಟ್ಟಿನಲ್ಲಿ ಬರುವ ನಟನೆಯನ್ನೂ ಕೂಡ ಒಂದು ಪ್ರತ್ಯೇಕ ಕಲಾಪ್ರಕಾರವಾಗಿ ನೋಡಬೇಕು ಎಂಬುದರ ಪರಿಪೂರ್ಣ ಪ್ರಜ್ಞೆಯು ಕಾಸರವಳ್ಳಿಯವರಿಗೆ ಇತ್ತು ಎಂದು ಹೇಳಬಹುದೇ? ಗೊತ್ತಿಲ್ಲ.

ಆದರೆ ಒಟ್ಟೂ ಪೃಥ್ವಿಯವರ ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯವಾದದ್ದು. ಅವರ ಮುಂದಿನ ಚಿತ್ರವಾದ ಹದಿನೇಳೆಂಟು ಕೂಡ ಇದಕ್ಕಿಂತ ಬಹಳ ಚನ್ನಾಗಿದೆ ಎಂಬ ಅಭಿಪ್ರಾಯವನ್ನೂ ಕೇಳಿದ್ದೇನೆ. ನಿಜ ಬದುಕಿಗಿಂತ ದೊಡ್ಡ ದೊಡ್ಡ ಕಥಾನಕಗಳನ್ನು, ಕೋಟಿ ಕೋಟಿ ಬಜೆಟ್‌ನ್ನು ನೀರಿನಂತೆ ಖರ್ಚುಮಾಡುವ ಸಿನಿಮಾಗಳು, ಹುಸಿ ವಿಜೃಂಭಣೆಯನ್ನು ಬಲೂನಿಗೆ ಗಾಳಿ ತುಂಬಿದಂತೆ ತುಂಬಿ ಹಿಗ್ಗಿಸುವ ದಷ್ಟಪುಷ್ಟ ಕಥಾನಾಯಕರ ನಡುವೆ, ನಮ್ಮ ಅಕ್ಕಪಕ್ಕದ ನಿಜಬದುಕಿನ ಪಾತ್ರಗಳನ್ನೇ ನಿಜನಾಯಕರನ್ನಾಗಿಸಿ ಅದು ನಮ್ಮದೇ ಬದುಕಿನ ಕಥೆಯನ್ನಾಗಿ ಮಾರ್ಪಡಿಸುವ ವಿಶೇಷವಾಗ ಫಾರ್ಮ್ ಒಂದನ್ನು ಇವರು ದಕ್ಕಿಸಿಕೊಂಡಿರುವುದರಿಂದ ಇನ್ನೂ ಇಂತಹ ಅನೇಕ ಚಿತ್ರಗಳನ್ನು ನಾವೆಲ್ಲರೂ ಇವರಿಂದ ಎದುರುನೋಡುತ್ತಿದ್ದೇವೆ.

(ಲೇಖಕರು ರಂಗಕರ್ಮಿ, ಸಿನಿಮಾ ನಿರ್ದೇಶಕರು. ಲೇಖನದ ಪೂರ್ಣಪಾಠ ಓದಲು prajavani.net ಕ್ಲಿಕ್ ಮಾಡಿ)

'ಕರ್ಮಯೋಗಿ'

ಒಂದನೇ ಪುಟದಿಂದ...

ಮುಖ್ಯವಾಗಿ, ಗ್ರಾಮಮುಖಿಯಾದ ಚಿಂತನೆ ಅವರದ್ದಾಗಿತ್ತು. ಸಾಮಾನ್ಯ ಜನ ಕನ್ನಡ ಬಳಸದೇ ಇದ್ದರೆ, ಕನ್ನಡ ಬದುಕೋದೇ ಇಲ್ಲ ಎಂದು ಅವರು ಪದೇ ಪದೇ ಹೇಳುತ್ತಿದ್ದರು.

ಸರ್ಕಾರದ ಜೊತೆ ಅವರು ಉತ್ತಮ ಸಂಬಂಧ ಹೊಂದಿದ್ದರು. ಕನ್ನಡದ ಕಾರ್ಯಗಳಿಗೆ ಸಾಕಷ್ಟು ಅನುದಾನ ತೆಗೆದುಕೊಂಡು ಬರುತ್ತಿದ್ದರು. ಆದರೆ, ಸರ್ಕಾರದ ಯಾವುದಾದರೂ ನಿರ್ಧಾರದಿಂದ ಕನ್ನಡಕ್ಕೆ ಅನ್ಯಾಯವಾಗುತ್ತಿದೆ ಎನಿಸಿದಾಗ ಅವರು ಸಹಿಸುತ್ತಿರಲಿಲ್ಲ. ಕನ್ನಡಕ್ಕೆ ವಿರೋಧ ಎದುರಾದಾಗ ಸರ್ಕಾರದ ವಿರುದ್ಧ ಕೆರಳಿ ನಿಲ್ಲುತ್ತಿದ್ದರು. ಈ ಸಂದರ್ಭದಲ್ಲಿ, ಒಂದು ಘಟನೆ ನನಗೆ ನೆನಪಾಗುತ್ತೆ. ಮಹತ್ವದ ಕೆಲವು ಕೃತಿಗಳನ್ನು ಪರಿಷತ್ ವತಿಯಿಂದ ಪ್ರಕಟಿಸಬೇಕಾಗಿತ್ತು. ಇದಕ್ಕಾಗಿ ಸಂಶೋಧನೆಗೆ ಮತ್ತು ಮುದ್ರಣ ಕಾರ್ಯಕ್ಕೆ 26 ಜನ ಬೇಕಾಗಿತ್ತು. ಈ ಬಗ್ಗೆ ಸರ್ಕಾರದ ನೆರವು ಕೇಳಿದಾಗ, ಹಿರಿಯ ಅಧಿಕಾರಿಯೊಬ್ಬರು, '26 ಜನ ಏಕೆ ಬೇಕು, 12 ಜನ ಸಾಕಾಗುವುದಿಲ್ಲವೇ' ಎಂದು ನಾರಾಯಣ ಅವರನ್ನು ಪ್ರಶ್ನಿಸಿದ್ದರು. 'ನೋಡಿ, ನೀವು ಅನುದಾನ ಒಂದೆರಡು ಲಕ್ಷ ಕಡಿಮೆ ಕೊಡುತ್ತೇವೆ ಎಂದು ಬೇಕಾದರೆ ಹೇಳಿ. ಆದರೆ, ಅಷ್ಟೊಂದು ಜನರೇಕೆ, ಕಡಿಮೆ ಜನರನ್ನು ತೆಗೆದುಕೊಳ್ಳಿ ಎಂದೆಲ್ಲ ಹೇಳುವ ಅಧಿಕಾರ ನಿಮಗಿಲ್ಲ' ಎಂದು ನೇರವಾಗಿ ಹೇಳಿ ಬಂದಿದ್ದರು.

ಹೀಗೆ, ಅಗಾಧ ಕನ್ನಡ ಪ್ರೇಮ ಹೊಂದಿದ್ದ ಅವರು, ಕನ್ನಡಪರ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಅವರು ಅಧ್ಯಕ್ಷರಾಗಿದ್ದ ಅವಧಿಯುದ್ದಕ್ಕೂ ಹಲವು ಸಮ್ಮೇಳನಗಳನ್ನು ನಡೆಸಿದರು. ನಾಲ್ಕು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮೊದಲ ಬಾರಿಗೆ ದೆಹಲಿಯಲ್ಲಿ ಜಿ.ಪಿ. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ 50ನೇ ಸಮ್ಮೇಳನ ಹಮ್ಮಿಕೊಂಡಿದ್ದು ಅವರ ಸಾಧನೆಗಳಲ್ಲೊಂದು. ಕನ್ನಡ ಕಾವ್ಯಗಳ ಗದ್ಯಾನುವಾದ ಸೇರಿದಂತೆ ಹಲವು ಮಹತ್ವದ ಕಾರ್ಯಗಳು ಅವರ ಅಧ್ಯಕ್ಷತೆಯಲ್ಲಿ ನಡೆದವು. ಒಟ್ಟಾರೆ, ಸಾಹಿತ್ಯ ಪರಿಷತ್‌ನ ಅಧ್ಯಕ್ಷರುಗಳ ಪೈಕಿ ಅತಿ ಪ್ರಮುಖರಲ್ಲಿ ಒಬ್ಬರಾಗಿ ಜಿ. ನಾರಾಯಣ ಅವರು ನಿಲ್ಲುತ್ತಾರೆ.

ನಿರೂಪಣೆ: ಗುರು ಪಿ.ಎಸ್.

ಮುನ್ನೋಟ 11-06-2023 ರಿಂದ -17-06-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಗೃಹ ನಿರ್ಮಾಣ ಮಾಡುವ ಯೋಚನೆಯು ಮನೆಯವರ ಸಂತಸಕ್ಕೆ ಕಾರಣವಾಗುತ್ತದೆ. ಖಾಸಗಿ ಸಾಲಪಡೆದು ಸ್ವಂತ ಉದ್ಯಮ ಆರಂಭಿಸುವ ಯೋಚನೆ ಅಷ್ಟು ಸಮಂಜಸವಲ್ಲ. ಸಂಸಾರದಲ್ಲಿನ ಕೆಲವು ತಾಪತ್ರಯಗಳು ನೀಗಿ ಮನಸ್ಸಿಗೆ ಸಮಾಧಾನ ಉಂಟಾಗುತ್ತದೆ. ಕಾನೂನು ವಿಷಯದಲ್ಲಿ ತೊಡಗಿರುವವರಿಗೆ ಶುಭ ವಾರ್ತೆಗಳಿರುತ್ತವೆ. ಧನ ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಮಕ್ಕಳಿಂದ ಸಮಾಧಾನದ ಅಥವಾ ನೆಮ್ಮದಿಯ ಮಾತುಗಳನ್ನು ಕೇಳುವಿರಿ. ತೈಲ ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರವಿರುತ್ತದೆ. ರಾಸಾಯನಿಕ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚಿನ ಲಾಭವಿರುತ್ತದೆ. ಮನೆಗೆ ಬೆಲೆ ಬಾಳುವ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಖರೀದಿ ಮಾಡುವ ಯೋಗವಿದೆ. ನಿಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಯಾವುದೇ ತೊಂದರೆ ಇರುವುದಿಲ್ಲ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಕಳೆದು ಹೋದ ಆಸ್ತಿಯ ಬಗ್ಗೆ ಹೆಚ್ಚು ಚಿಂತಿಸುವುದನ್ನು ಬಿಡಿರಿ. ವೃತ್ತಿಯಲ್ಲಿ ಶ್ರಮಪಟ್ಟು ಪುನಃ ಆಸ್ತಿ ಸಂಪಾದನೆ ಮಾಡುವ ಯೋಗವಿದೆ. ಉದ್ಯೋಗದಲ್ಲಿ ಸ್ಥಳ ಬದಲಾವಣೆಯ ಅಂಶ ಕಾಣುತ್ತಿದೆ. ಉನ್ನತ ವಿದ್ಯಾಭ್ಯಾಸ ಮಾಡುವವರಿಗೆ ಸೂಕ್ತ ಮಾರ್ಗದರ್ಶನ ದೊರೆಯುತ್ತದೆ. ಷರತ್ತುಗಳಿಗೆ ಒಪ್ಪಿ ಯಾವುದೇ ವ್ಯವಹಾರಗಳಿಗೂ ಕೈ ಹಾಕದಿರುವುದು ಒಳ್ಳೆಯದು. ಕುಟುಂಬದಲ್ಲಿ ಸಾಕಷ್ಟು ಶಾಂತಿ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಎಷ್ಟೇ ಕಷ್ಟ ಬಂದರೂ ಎದೆಗುಂದದೆ ಮುನ್ನಡೆಯುವುದು ಬಹಳ ಸೂಕ್ತ, ಸಣ್ಣ ಮಕ್ಕಳ ವರ್ತನೆ ಹಿರಿಯರಿಗೆ ಬಹಳ ಸಂತೋಷ ತರುತ್ತದೆ. ಸಮಾಲೋಚನೆ ಮಾಡಿ ನಿರ್ಧಾರವನ್ನು ಕೈಗೊಂಡ ಕೆಲಸಗಳು ಹೆಚ್ಚು ಪರಿಣಾಮ ಬೀರುತ್ತದೆ. ಸಾಮಾಜಿಕ ಕ್ರಾಂತಿಗಳನ್ನು ಮಾಡುವವರಿಗೆ ಹೆಸರು ಬರುತ್ತದೆ. ಆರ್ಥಿಕ ಸ್ಥಿತಿಯು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ದರ್ಜೆಯ ಫಲಿತಾಂಶವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಸ್ವಂತ ಉದ್ಯೋಗ ಮಾಡುವವರು ಹೆಚ್ಚಿನ ಪ್ರಗತಿಯನ್ನು ಕಾಣುವರು. ಕೆಲಸಕಾರ್ಯಗಳಲ್ಲಿ ತಾಳ್ಮೆ ಹಾಗೂ ದೃಢ ನಿರ್ಧಾರಗಳು ಬಹಳ ಮುಖ್ಯ. ನಿಮ್ಮ ಬಂಧುಗಳ ಅಥವಾ ಒಡಹುಟ್ಟಿದವರ ವಿರೋಧವನ್ನು ಎದುರಿಸಬೇಕಾದೀತು. ಮಾರಾಟ ಮಾಡಬೇಕೆಂದಿದ್ದ ಆಸ್ತಿಯ ಬೆಲೆಯು ಕಡಿಮೆಯಾಗಬಹುದು. ಮಕ್ಕಳು ಓದಲು ವಿದೇಶಕ್ಕೆ ಹೋಗಬೇಕೆನ್ನುವ ಆಸೆ ಪೂರೈಸುವ ಸಾಧ್ಯತೆ ಇದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಉದ್ಯೋಗಸ್ಥರಿಗೆ ಮೇಲಧಿಕಾರಿಗಳ ಸಹಾಯ ಹಸ್ತ ದೊರೆಯುತ್ತದೆ. ಹಿರಿಯ ಸರ್ಕಾರಿ ಅಧಿಕಾರಿಗಳಿಗೆ ಸಂಸ್ಥೆಯ ಮುಖ್ಯಸ್ಥರಾಗುವ ಯೋಗವಿದೆ. ಹಣದ ಒಳಹರಿವು ಮಧ್ಯಮಗತಿಯಲ್ಲಿರುತ್ತದೆ. ಆಸ್ತಿ ಮಾಡುವ ವಿಚಾರಗಳಲ್ಲಿ ಸಾಕಷ್ಟು ಗೊಂದಲಗಳಿರುತ್ತವೆ. ಮಕ್ಕಳ ಮನಸ್ಸನ್ನು ಅರಿಯಲು ಕಷ್ಟ ಪಡಬೇಕಾದೀತು. ಕ್ರಯ ವಿಕ್ರಯ ಮಾಡುವವರಿಗೆ ಉತ್ತಮ ವ್ಯವಹಾರ ನಡೆಯುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ರಿಯಲ್ ಎಸ್ಟೇಟ್ ಉದ್ಯಮದವರಿಗೆ ಹೆಚ್ಚು ವ್ಯವಹಾರವಾಗಿ ಹೆಚ್ಚಿನ ಹಣ ಸಂಗ್ರಹವಾಗುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರ ಆಗುವ ಸಾಧ್ಯತೆ ಇದೆ. ಯುವಕರಿಗೆ ಹೊಸ ಹುದ್ದೆಯೊಂದು ದೊರೆಯುವ ಸಂದರ್ಭವಿದೆ. ಕಮಿಷನ್ ವ್ಯಾಪಾರ ಮಾಡುವವರಿಗೆ ಹೆಚ್ಚಿನ ಹಣ ದೊರೆಯುತ್ತದೆ. ಔಷಧಿ ತಯಾರಿಕ ಕಂಪನಿಗಳಿಗೆ ಹೆಚ್ಚುವ್ಯವಹಾರವಾಗಿ ಲಾಭ ಹೆಚ್ಚುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಅನಿರೀಕ್ಷಿತವಾಗಿ ಸಂಪಾದನೆ ಮಾಡಲು ಕೆಲವೊಂದು ಉತ್ತಮ ಅವಕಾಶಗಳು ದೊರೆಯುತ್ತವೆ. ಅವುಗಳನ್ನು ಸರಿಯಾಗಿ ಬಳಸಿಕೊಳ್ಳಿ. ಆಸ್ತಿ ಖರೀದಿಗೆ ಮುನ್ನ ಸರಿಯಾಗಿ ದಾಖಲೆಗಳನ್ನು ಪರಿಶೀಲಿಸಿ. ಸಕ್ರಿಯವಾಗಿ ಕೆಲಸ ಕಾರ್ಯಗಳನ್ನು ಮಾಡಿ ಸಂತೋಷ ಪಡುವಿರಿ. ಅಧಿಕಾರಿಗಳು ಆತ್ಮ ವಿಶ್ವಾಸಕ್ಕೆ ಧಕ್ಕೆ ತರುವಂತಹ ಮಾತುಗಳನ್ನಾಡಬಹುದು. ಅನಿರೀಕ್ಷಿತವಾಗಿ ವಾಹನ ಖರೀದಿಗೆ ಮುಂದಾಗುವಿರಿ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಸಾಂಸಾರಿಕವಾಗಿ ಸದ್ಯದ ಪರಿಸ್ಥಿತಿಯಲ್ಲಿ ಕುಟುಂಬದೊಡನೆ ಸರಿಯಾಗಿ ಹೊಂದಿಕೊಂಡು ಹೋಗುವಿರಿ. ಸಂಬಂಧಗಳಿಗೆ ಅತಿ ಹೆಚ್ಚುಬೆಲೆ ಕೊಡುವಿರಿ. ಯಶಸ್ಸು ನಿಮ್ಮನ್ನು ಹುಡುಕಿಕೊಂಡು ಬರುವುದರಿಂದ ಹೆಚ್ಚು ಸಂತೋಷವಾಗುತ್ತದೆ. ಬದುಕಿನಲ್ಲಿ ಉನ್ನತಸ್ಥಾನಕ್ಕೆ ಏರಲು ಸಾಕಷ್ಟು ಪ್ರಯತ್ನ ಪಡುವಿರಿ. ವಿದ್ಯಾರ್ಥಿಗಳಿಗೆ ಯಶಸ್ಸು ದೊರೆಯುವ ಕಾಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಸಮಸ್ಯೆಗಳನ್ನು ನಾಜೂಕಾಗಿ ಬಗ್ಗೆ ಹರಿಸಿಕೊಳ್ಳುವ ಕಡೆಗೆ ಗಮನ ಕೊಡುವುದು ಅಗತ್ಯ. ಸ್ನೇಹಿತರೊಡಗೂಡಿ ಮಾಡಿದ ವ್ಯಾಪಾರಗಳಲ್ಲಿ ಹೆಚ್ಚಿನ ಲಾಭ ಬರುತ್ತದೆ. ಸರ್ಕಾರಿ ಸಂಸ್ಥೆಗಳಿಗೆ ಗುತ್ತಿಗೆ ಆಧಾರಿತ ವ್ಯಕ್ತಿಗಳನ್ನು ಪೂರೈಸುವವರಿಗೆ ಹೆಚ್ಚುತ್ತದೆ. ನಿಮ್ಮ ಸಂಗಾತಿಯು ಮಾಡುವ ಭೂಮಿಯ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವನ್ನು ಕಾಣಬಹುದು. ಬಡಗಿ ಕೆಲಸ ಮಾಡುವವರಿಗೆ ಕೈತುಂಬ ಕೆಲಸ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
